# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಡಿಸೆಂಬರ್ 06, 2020

ಸಂಪುಟ : 47 ಸಂಚಿಕೆ : 216 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com







## ಕೊರೊನಾಗೆ ಲಸಿಕೆ ಪಡೆದಿದ್ದ ಹರಿಯಾಣ ಸಚಿವಗೆ ಸೋಂಕು

**ಮೊದಲ ಡೋಸ್ ಮಾತ್ರ ಪಡೆದಿದ್ದಾಗಿ ಸ್ಪಷ್ಟನೆ**

ಚಂಡೀಘಡ, ಡಿ. 5 – ವಾರಗಳ ಹಿಂದೆ ಕೊರೊನಾ ಕೊವ್ಯಾಕ್ಸಿನ್ ಕೊರೊನಾ ಲಸಿಕೆಯ ಮೊದಲ ಡೋಸ್ ಪಡೆದಿದ್ದ ಹರಿಯಾಣದ ಆರೋಗ್ಯ ಸಚಿವ ಅನಿಲ್ ವಿಜ್ ಅವರಿಗೆ ಕೊರೊನಾ ಸೋಂಕು ಬಂದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ವಿಜ್, ಮೊದಲ ಲಸಿಕೆ ನೀಡಿದ 28 ದಿನಗಳ ನಂತರ ಎರಡನೇ ಡೋಸ್ ನೀಡಲಾಗುತ್ತದೆ. ಆನಂತರವೇ ದೇಹದಲ್ಲಿ ಆಂಟಿಬಡಿಗಳು ಉತ್ಪಾದನೆಯಾಗುತ್ತವೆ. ಎರಡನೇ ಡೋಸ್ ನೀಡುವವರೆಗೆ ಕೊರೊನಾದಿಂದ ರಕ್ಷಣೆ ಇರುವುದಿಲ್ಲ ಎಂದಿದ್ದಾರೆ. 67 ವರ್ಷದ ಸಚಿವರಿಗೆ ನವೆಂಬರ್ 20ರಂದು ಲಸಿಕೆಯ ಮೊದಲ ಡೋಸ್ ನೀಡಲಾಗಿತ್ತು. ನನಗೆ ಕೊರೊನಾ ಸೋಂಕು ಬಂದಿದೆ. ಅಂಬಾಲಾದ ಆಸ್ಪತ್ರೆಗೆ (5ನೇ ಪುಟಕ್ಕೆ)

## ಪಂಚಾಯ್ತಿ ಚುನಾವಣೆಗಾಗಿ ಕೈ ಮುಖಂಡರಿಗೆ ಜವಾಬ್ದಾರಿ

ದಾವಣಗೆರೆ, ಡಿ. 5 - ಗ್ರಾಮ ಪಂಚಾಯ್ತಿ ಚುನಾವಣೆಗಳಿಗಾಗಿ ಮುಖಂಡರಿಗೆ ಕಾಂಗ್ರೆಸ್ ಪಕ್ಷದಿಂದ ವಿಧಾನಸಭಾ ಕ್ಷೇತ್ರವಾರು ಜವಾಬ್ದಾರಿಗಳನ್ನು ನೀಡಲಾಗಿದೆ. ಶಾಸಕರು, ಪರಿಷತ್ ಸದಸ್ಯರು ಹಾಗೂ ಇತರೆ ಮುಖಂಡರು ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕೆಂದು ಸೂಚಿಸಲಾಗಿದೆ.

ಅದರಂತೆ ದಾವಣಗೆರೆ ದಕ್ಷಿಣ ಕ್ಷೇತ್ರದ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯ್ತಿಗಳ ಜವಾಬ್ದಾರಿಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ನೀಡಲಾಗಿದೆ. ದಾವಣಗೆರೆ ಉತ್ತರ ಮತ್ತು ಮಾಯಕೊಂಡ ಕ್ಷೇತ್ರಗಳ ಜವಾಬ್ದಾರಿಯನ್ನು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಹರಿಹರದ ಜವಾಬ್ದಾರಿಯನ್ನು ಶಾಸಕ (2ನೇ ಪುಟಕ್ಕೆ)

# ಪ್ರತಿಭಟನೆಗೆ ಸೀಮಿತವಾದ ಬಂದ್

## ರಾಜ್ಯದಲ್ಲಿ ಮರಾಠ ನಿಗಮ ವಿರೋಧಿ ಬಂದ್‌ಗೆ ಸಿಗದ ಸ್ಪಂದನೆ

ಬೆಂಗಳೂರು, ಡಿ. 5 - ಮರಾಠ ಅಭಿವೃದ್ಧಿ ನಿಗಮ ರಚನೆ ವಿರೋಧಿಸಿ, ವಿವಿಧ ಕನ್ನಡ ಪರ ಸಂಘಟನೆಗಳು ಶನಿವಾರ ಕರೆದಿದ್ದ ಕರ್ನಾಟಕ ಬಂದ್ ಕೇವಲ ಪ್ರತಿಭಟನೆಗೆ ಸೀಮಿತಗೊಂಡಿತು.

ಬೆಂಗಳೂರು ಸೇರಿದಂತೆ, ರಾಜ್ಯದ ವಿವಿಧ ಮೂಲೆಗಳಲ್ಲಿ ಕನ್ನಡ ಪರ ಸಂಘಟನೆಗಳು ಬೀದಿಗಿಳಿದು, ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದವು.

ಆದರೆ ಪ್ರತಿಭಟನೆಗೆ ಮಣಿದು ರಾಜ್ಯದ ಯಾವುದೇ ಭಾಗದಲ್ಲೂ ಬಂದ್ ಆಗಲಿಲ್ಲ. ಜನಜೀವನ ಎಂದಿನಂತೆ ಸಹಜ ಸ್ಥಿತಿಯಲ್ಲಿತ್ತು. ಎಲ್ಲಿಯೂ ಯಾವುದಕ್ಕೂ ಕೊರತೆಯಾಗಲಿಲ್ಲ.

ಪ್ರತಿಭಟನಾಕಾರರು ಕೆಲವೆಡೆ ಅಂಗಡಿ ಮುಂಗಟ್ಟುಗಳನ್ನು ಬಲವಂತವಾಗಿ ಮುಚ್ಚಿಸುವುದನ್ನು ಹೊರತುಪಡಿಸಿದರೆ, ಎಲ್ಲಿಯೂ ಸ್ವಯಂ ಪ್ರೇರಿತವಾಗಿ ಬಂದ್ ಆಗಲಿಲ್ಲ. ಬಂದ್‌ಗೆ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಪ್ರತಿಭಟನಾಕಾರರು ರಸ್ತೆಗಿಳಿದು ಗುಂಪು ಸೇರುತ್ತಿದ್ದಂತೆ, ಪೊಲೀಸರು ಅವರನ್ನು ಚದರಿಸುವುದು ಇಲ್ಲವೇ ಬಂಧಿಸುವ ಕೆಲಸ ಮಾಡಿದರು. ಸಣ್ಣಪುಟ್ಟ ಘಟನೆ ಹೊರತುಪಡಿಸಿದರೆ, ಈ (2ನೇ ಪುಟಕ್ಕೆ)

### ದಾವಣಗೆರೆಯಲ್ಲಿ ಬಂದ್ ನೀರಸ, ಯತ್ನಾಳ್ ಭಾವಚಿತ್ರಕ್ಕೆ ಸಗಣಿ ಸೇವೆ

ದಾವಣಗೆರೆ, ಡಿ.5- ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ವಿರೋಧಿಸಿ ಕನ್ನಡಪರ ಸಂಘಟನೆಗಳ ಒಕ್ಕೂಟ ಕರೆ ನೀಡಿದ್ದ ಬಂದ್‌ಗೆ ನಗರದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಜಯದೇವ ವೃತ್ತದಲ್ಲಿ ಬೆರಳೆಣಿಕೆಯಷ್ಟು ಅಂಗಡಿ ಮುಂಗಟ್ಟುಗಳು ಮುಚ್ಚಿದ್ದು ಹೊರತು ಪಡಿಸಿದರೆ, ನಗರದಾದ್ಯಂತ ಎಂದಿನಂತೆ ವಹಿವಾಟು ನಡೆಯಿತು.

ಕೆಎಸ್ಸಾರ್ಟಿಸಿ, ಖಾಸಗಿ ಬಸ್ಸುಗಳು, ನಗರ ಸಾರಿಗೆ ಬಸ್ಸುಗಳು, ಆಟೋಗಳು ಓಡಾಡಿ ದವು. ಸರ್ಕಾರಿ ಕಚೇರಿಗಳು, ಬ್ಯಾಂಕುಗಳು, ಪೆಟ್ರೋಲ್ ಬಂಕ್‌ಗಳು ಸೇರಿದಂತೆ ಖಾಸಗಿ ಕಚೇರಿಗಳು ಕಾರ್ಯ ನಿರ್ವಹಿಸಿದವು. ಮರಾಠಕ್ಕೆ ನಿಗಮ ವಿರೋಧಕ್ಕೆ ಪರ-ವಿರೋಧದ ನಡುವೆಯೂ ಕರೆ ನೀಡಿದ್ದ ಬಂದ್‌ಗೆ ವ್ಯಾಪಾರಸ್ಥರು ನೈತಿಕ ಬೆಂಬಲ ಮಾತ್ರ ವ್ಯಕ್ತಪಡಿಸಿದಂತೆ ಕಂಡು (4ನೇ ಪುಟಕ್ಕೆ)




## ದೆಹಲಿ: ರೈತರ ಬಂದ್‌ಗೆ ಎಡಪಕ್ಷಗಳ ಬೆಂಬಲ

ನವದೆಹಲಿ, ಡಿ. 5 - ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ಡಿಸೆಂಬರ್ 8ರಂದು ಕರೆ ನೀಡಿರುವ ಭಾರತ್ ಬಂದ್‌ಗೆ ಐದು ಎಡಪಕ್ಷಗಳು ಜೊತೆಯಾಗಿ ಬೆಂಬಲ ವ್ಯಕ್ತಪಡಿಸಿವೆ. ಇತರೆ ರಾಜಕೀಯ ಪಕ್ಷಗಳೂ ಸಹ ರೈತರ ಹಿತ ರಕ್ಷಣೆಗೆ ಜೊತೆಯಾಗಬೇಕೆಂದು ಕರೆ ನೀಡಿವೆ. ಕಷ್ಟದಲ್ಲಿರುವ ನಮ್ಮ ಅನ್ನದಾತರ ಹಾಗೂ ದೇಶಕ್ಕೆ ಆಹಾರ ಭದ್ರತೆ ನೀಡುವವರ ವಿರುದ್ಧ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಕುತ್ಸಿತ ಅಭಿಯಾನ ನಡೆಸುತ್ತಿರುವುದನ್ನು ನಾವು ಖಂಡಿಸುತ್ತೇವೆ ಎಂದು ಪಕ್ಷಗಳ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಹೇಳಿಕೆಗೆ ಸಿಪಿಐ (ಎಂ)ನ ಸೀತಾರಾಮ್ ಯೆಚೂರಿ, ಸಿಪಿಐನ ಡಿ. ರಾಜ, ಸಿಪಿಐ (ಎಂಎಲ್)ನ ದೀಪಂಕರ್ ಭಟ್ಟಾಚಾರ್, (5ನೇ ಪುಟಕ್ಕೆ)

# ಎಸ್‌ಟಿ ಸೌಲಭ್ಯಕ್ಕಾಗಿ ಬೆಂಗಳೂರಿಗೆ ಪಾದಯಾತ್ರೆ

## ಕೊಡಗಿನ ಕುರುಬರಂತೆ ಎಸ್‌ಟಿ ಸೌಲಭ್ಯ ಇಡೀ ರಾಜ್ಯಕ್ಕೆ ವಿಸ್ತರಿಸುವಂತೆ ಜನಾಂದೋಲನ



ದಾವಣಗೆರೆ, ಡಿ. 5 - ಕುರುಬ ಸಮಾಜ ಈಗಾಗಲೇ ಎಸ್‌ಟಿಯಲ್ಲಿದೆ. ಕೊಡಗು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಸಮುದಾಯದವರು ಪಡೆಯುತ್ತಿರುವ ಮೀಸಲಾತಿಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವಂತೆ ಪಾದಯಾತ್ರೆ ನಡೆಸುವುದಾಗಿ ಕಾಗಿನೆಲೆಯ ಕನಕ ಪೀಠದ ಜಗದ್ಗುರು ಶ್ರೀ ನಿರಂಜನಾ ನಂದಪುರಿ ಸ್ವಾಮೀಜಿ ತಿಳಿಸಿದ್ದಾರೆ.

ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ವತಿಯಿಂದ ನಗರದ ಶ್ರೀ ಬೀರೇಶ್ವರ ಭವನದಲ್ಲಿ ಆಯೋಜಿಸ ಲಾಗಿದ್ದ ಕುರುಬರ ಎಸ್‌ಟಿ ಮೀಸಲಾತಿ ಹೋರಾಟದ ಪೂರ್ವ ಭಾವಿ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು. ಕೊಡಗು ಕುರುಬರು (5ನೇ ಪುಟಕ್ಕೆ)

### ಸಿದ್ದರಾಮಯ್ಯ ಅನುಮತಿ ನಂತರವೇ ಹೋರಾಟ

**ಆರ್‌ಎಸ್‌ಎಸ್ ಮಧ್ಯ ಪ್ರವೇಶವಾಗಿಲ್ಲ**
**- ಶ್ರೀ ನಿರಂಜನಾನಂದಪುರಿ ಸ್ವಾಮೀಜಿ**

ದಾವಣಗೆರೆ, ಡಿ. 5 - ಕುರುಬ ಸಮುದಾಯಕ್ಕೆ ಎಸ್‌ಟಿ ಸ್ಥಾನ ನೀಡಬೇಕೆಂಬ ಹೋರಾಟಕ್ಕೆ ತಮ್ಮನ್ನು ಆಹ್ವಾನಿಸಿಲ್ಲ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿರುವುದನ್ನು ತಳ್ಳಿ ಹಾಕಿರುವ ಕನಕ ಗುರು ಪೀಠದ ಜಗದ್ಗುರು ಶ್ರೀ (5ನೇ ಪುಟಕ್ಕೆ)

### ಹೋರಾಟಕ್ಕೆ ಆಹ್ವಾನ ನೀಡಲು ಇದೇನು ಮದುವೆಯಲ್ಲ

**ಸಮಾಜದಿಂದ ಲಾಭ ಪಡೆದವರು ಬರಬೇಕು**
**- ಶ್ರೀ ಈಶ್ವರಾನಂದಪುರಿ ಸ್ವಾಮೀಜಿ**

ಕುರುಬ ಸಮಾಜದಿಂದ ಲಾಭ ಪಡೆದ ಎಲ್ಲ ರಾಜಕೀಯ ನಾಯಕರು ಎಸ್‌ಟಿ ಹೋರಾಟದಲ್ಲಿ ಭಾಗಿಯಾಗಬೇಕು ಎಂದು ಹೇಳಿರುವ ಹೊಸದುರ್ಗ ಕನಕ ಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಹೋರಾಟದಲ್ಲಿ ಭಾಗಿಯಾಗಿ ಎಂದು (5ನೇ ಪುಟಕ್ಕೆ)

## ಮೈಸೂರು ವಿಭಾಗದಿಂದ 20 ರೈಲುಗಳಿಗೆ ಚಾಲನೆ

ದಾವಣಗೆರೆ, ಡಿ. 5 - ಪ್ರಯಾಣಿಕರಿಂದ ಹೆಚ್ಚುತ್ತಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಮೈಸೂರು ವಿಭಾಗದಲ್ಲಿ 20 ರೈಲುಗಳಿಗೆ ಮರು ಚಾಲನೆ ನೀಡಲು ನಿರ್ಧರಿಸಲಾಗಿದೆ. ಇವುಗಳಲ್ಲಿ ಕಾಯ್ದಿರಿಸದ, ಸಂಪೂರ್ಣವಾಗಿ ಕಾಯ್ದಿರಿಸಿದ ಪ್ರಯಾಣಿಕ ಎಕ್ಸ್‌ಪ್ರೆಸ್ ರೈಲುಗಳು ಸೇರಿವೆ ಎಂದು ರೈಲ್ವೆ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ರೈಲುಗಳಲ್ಲಿ ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದ್ದು, ಈ ರೈಲುಗಳ ಬಳಕೆ ಅವಲಂಬಿಸಿ ಮುಂದಿನ ದಿನಗಳಲ್ಲಿ ರೈಲು ಸೇವೆ ಮತ್ತಷ್ಟು ವಿಸ್ತರಿಸಲಾಗುವುದು ಎಂದು ತಿಳಿಸಲಾಗಿದೆ.

ಸಂಪೂರ್ಣವಾಗಿ ಕಾಯ್ದಿರಿಸಿದ ಕೆ.ಎಸ್.ಆರ್. ಬೆಂಗಳೂರು - ಧಾರವಾಡ ರೈಲು (2ನೇ ಪುಟಕ್ಕೆ)


**ಹರಿಹರದ ಮುಪ್ಪಣ್ಣ ಸ್ವೀಟ್ ಸ್ಟಾಲ್ ಮಾಲೀಕರಾದ**
**ನೆರವಣಿಗಿ ವಿರುಪಾಕ್ಷಪ್ಪನವರು ನಿಧನ**




ಹರಿಹರ ನಗರದ ಜೆ.ಸಿ. ಬಡಾವಣೆಯ 1ನೇ ಮೇನ್, 1ನೇ ಕ್ರಾಸ್ ನಿವಾಸಿ ಹಾಗೂ ನಗರದ ಶಿವಮೊಗ್ಗ ರಸ್ತೆಯ ರಾಣಿ ಚನ್ನಮ್ಮ ವೃತ್ತದ ಮುಪ್ಪಣ್ಣ ಸ್ವೀಟ್ ಸ್ಟಾಲ್ ಮತ್ತು ಮಲೇಬೆನ್ನೂರು, ನಂದಿಗುಡಿ ರಸ್ತೆ, ಹರಿಹರ ಬೇಕರಿ ಮಾಲೀಕರಾಗಿದ್ದ,

**ನೆರವಣಿಗಿ ವಿರುಪಾಕ್ಷಪ್ಪನವರು**

ದಿನಾಂಕ 5 -12-2020 ರ ಶನಿವಾರದಂದು ಸಂಜೆ 4-30 ಕ್ಕೆ ಸ್ವ ಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 80 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ-ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6-12-2020 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಹರಿಹರ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ
**ನೆರವಣಿಗಿ ವಂಶಸ್ಥರು, ಹರಿಹರ.**






# ಪಶು ಆಸ್ಪತ್ರೆ, ಉಪನೋಂದಣಿ ಕಚೇರಿಗೆ ಶಾಸಕರ ದಿಢೀರ್ ಭೇಟಿ

ಹರಪನಹಳ್ಳಿ, ಡಿ.5- ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಸ್ಥಳೀಯ ಪಶು ಆಸ್ಪತ್ರೆಗೆ ಶಾಸಕ ಜಿ.ಕರುಣಾಕರ ರೆಡ್ಡಿ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಪಶು ಆಸ್ಪತ್ರೆಗೆ ತೆರಳಿದ ಅವರು ಸಿಬ್ಬಂದಿಗಳ ಹಾಜರಾತಿ ಪುಸ್ತಕವನ್ನು ಪರಿಶೀಲಿಸಿದರು. ಕಚೇರಿಗೆ ಬಂದು ಸಮಯ ಆಗಿದ್ದರು ಇನ್ನೂ ಯಾಕೆ ಸಹಿ ಮಾಡಿಲ್ಲ ಎಂದು ಸಿಬ್ಬಂದಿಗಳಿಗೆ ಶಾಸಕರು ಕೇಳಿದರು. ನಂತರ ಪಶು ಆಸ್ಪತ್ರೆಯ ಔಷಧ ದಾಸ್ತಾನು ಕೊಠಡಿಗೆ ಭೇಟಿ ನೀಡಿ, ಕೊಠಡಿಯಲ್ಲಿ ಬೆಳಕು ಇಲ್ಲದಿರುವುದನ್ನು ಕಂಡು ಕನಿಷ್ಠ ಒಂದು ಬಲ್ಪ್ ಹಾಕಿಸಲು ನಿಮಗೆ ಆಗುತ್ತಿಲ್ಲವೇ ಎಂದು ಕೇಳಿದರಲ್ಲದೇ, ಸ್ವಚ್ಛತೆ ಕಾಪಾಡುವಂತೆ ಸಿಬ್ಬಂದಿಗೆ ಸೂಚಿಸಿದರು.




ಕಟ್ಟಡ ಹಳೆಯದಾಗಿದ್ದು ಮಳೆಗಾಲದಲ್ಲಿ ಸೋರುತ್ತಿದೆ. ವಿದ್ಯುತ್ ಸಮಸ್ಯೆ ಇದೆ ಎಂದು ಸಿಬ್ಬಂದಿಗಳು ಶಾಸಕರ ಗಮನಕ್ಕೆ ತಂದರು.

ಚಿಗಟೇರಿ ವ್ಯಾಪ್ತಿಯ ಓಬಳಾಪುರ ಗ್ರಾಮದ 50 ಕುರಿಗಾಹಿಗಳಿಗೆ ಔಷಧಿ ಇಲ್ಲವೆಂದು ಹೇಳಲಾಗಿದೆ. ಹುಲಿಕಟ್ಟೆ ಸೇರಿದಂತೆ ಇತರೆ ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರು, ಕುರಿಗಳಿಗೆ ಸರಿಯಾದ ಚಿಕಿತ್ಸೆ, ಔಷಧಿ ಸಿಗುತ್ತಿಲ್ಲ ಏಕೆ ಎಂದು ಪ್ರಭಾರಿ ವೈದ್ಯೆ ಶ್ರೀದೇವಿಯವರಿಗೆ ಪ್ರಶ್ನಿಸಿದ ಶಾಸಕರು ಕೂಡಲೇ ಸೋಮವಾರದೊಳಗೆ ಔಷಧಿಯನ್ನು ನೀಡಬೇಕು ಎಂದು ಸೂಚಿಸಿದರು.

ಉಪನೋಂದಣಿ ಕಚೇರಿಯಲ್ಲಿ ದಲ್ಲಾಳಿಗಳ ಹಾವಳಿ ಇದ್ದು, ಕೆಲಸ ಮಾಡದೆ ವಿಳಂಬ ಮಾಡಲಾಗುತ್ತಿದೆ ಎಂಬ ಸಾರ್ವಜನಿಕರಿಂದ ದೂರು ಬಂದಿದ್ದು, ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಿದ ಶಾಸಕರು, ಉಪನೋಂದಣಿ ಕಚೇರಿ ಇರುವ ಕಟ್ಟಡ ಹಳೆಯದಾಗಿದೆ. ಸ್ಥಳಾವಕಾಶದ ಕೊರತೆ ಇದೆ. ಸಮಸ್ಯೆ ಕುರಿತು ಮೇಲಾಧಿಕಾರಿಗಳೊಂದಿಗೆ ಚರ್ಚೆ ಮಾಡುವುದಾಗಿ ಶಾಸಕ ಕರುಣಾಕರ ರೆಡ್ಡಿ ಹೇಳಿದರು.

ಈ ಸಂದರ್ಭದಲ್ಲಿ ಎಸ್.ಟಿ. ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಆರ್.ಲೋಕೇಶ್, ತಾಲ್ಲೂಕು ಎಸ್.ಸಿ.. ಮೋರ್ಚಾ ಉಪಾಧ್ಯಕ್ಷ ಭಂಗಿ ಚಂದ್ರಪ್ಪ, ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಮೆಹಬೂಬ ಸಾಬ್, ಗೋಣಿಬಸಪ್ಪ, ರವಿಕುಮಾರ, ಎ.ಪಿ. ನಾಗರಾಜ, ಸಂತೋಷ್ ಇನ್ನಿತರರಿದ್ದರು.

# ಚೀನಾದಿಂದ ಮೊದಲ ಬೆಳಕು ಆಧರಿತ ಕ್ವಾಂಟಂ ಕಂಪ್ಯೂಟರ್

ಬೀಜಿಂಗ್, ಡಿ. 5 – ವಿಶ್ವದ ಮೊದಲ ಬೆಳಕು ಆಧರಿತ ಕ್ವಾಂಟಂ ಕಂಪ್ಯೂಟರ್ ರೂಪಿಸಿರುವುದಾಗಿ ಚೀನಾದ ವಿಜ್ಞಾನಿಗಳು ಹೇಳಿದ್ದು, ಇದು ಹಾಲಿ ಇರುವ ಸಾಂಪ್ರದಾಯಿಕ ಸೂಪರ್‌ಕಂಪ್ಯೂಟರ್‌ಗಳಿಗಿಂತ ಹೆಚ್ಚು ವೇಗವಾಗಿ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ತಿಳಿಸಿದ್ದಾರೆ.

ಇದು ಮಹತ್ವದ ಬೆಳವಣಿಗೆ ಎಂದಿರುವ ಪರಿಣಿತರು, ಹೆಚ್ಚು ಸಶಕ್ತವಾದ ಕಂಪ್ಯೂಟರ್‌ಗಳನ್ನು ರೂಪಿಸುವಲ್ಲಿ ಈ ವಿಧಾನ ನೆರವಾಗಲಿದೆ ಎಂದು ತಿಳಿಸಿದ್ದಾರೆ ಎಂದು ಅಧಿಕೃತ ಮಾಧ್ಯಮದಲ್ಲಿ ಹೇಳಲಾಗಿದೆ.

ಜುಯಿಝಾಂಗ್ ಎಂಬ ಹೆಸರು ಹೊಂದಿರುವ ಈ ಕ್ವಾಂಟಂ ಕಂಪ್ಯೂಟರ್, ತಂತ್ರಜ್ಞಾನದಲ್ಲಿ ಮಹತ್ವದ ಬೆಳವಣಿಗೆ.

ಭೌತ ವಿಜ್ಞಾನ, ಕೃತಕ ಬುದ್ಧಿವಂತಿಕೆ ಹಾಗೂ ಔಷಧೀಯ ವಲಯಗಳಲ್ಲಿನ ಪ್ರಮುಖ ಬೆಳವಣಿಗೆ ಎಂದು ಚೀನಾದ ಸರ್ಕಾರಿ ಪತ್ರಿಕೆಯಾದ ಚೀನಾ ಡೈಲಿ ತಿಳಿಸಿದೆ. ಚೀನಾ ಇತ್ತೀಚಿನ ವರ್ಷಗಳಲ್ಲಿ ಕ್ವಾಂಟಂ ಕಂಪ್ಯೂಟರ್ ವಲಯಕ್ಕೆ ಹೆಚ್ಚಿನ ಹೂಡಿಕೆ ಮಾಡುತ್ತಿದೆ.

# ಹರಿಹರ: ಬಂದ್‌ಗೆ ನೀರಸ ಪ್ರತಿಕ್ರಿಯೆ



ಹರಿಹರ, ಡಿ.5- ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ಖಂಡಿಸಿ ನಗರದ ವಿವಿಧ ಕನ್ನಡ ಪರ ಸಂಘಟನೆಗಳು ನೀಡಿದ್ದ ಬಂದ್ ಕರೆಗೆ ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ನಗರದ ಕನ್ನಡ ರಕ್ಷಣಾ ವೇದಿಕೆ, ಅಖಂಡ ಕರ್ನಾಟಕ ರಕ್ಷಣಾ ವೇದಿಕೆ, ಸೇರಿದಂತೆ 6 ಕ್ಕೂ ಹೆಚ್ಚು ಕನ್ನಡ ಪರ ಸಂಘಟನೆಗಳ ವತಿಯಿಂದ ಬಂದ್‌ಗೆ ಇಂದು ಕರೆ ನೀಡ ಲಾಗಿದ್ದು, ಜನಜೀವನ ಎಂದಿನಂತೆಯೇ ಕಂಡುಬಂದಿತ್ತು.

ಪ್ರತಿಭಟನಾಕಾರರು ಅನೇಕ ವ್ಯಾಪಾರಿ ಕೇಂದ್ರಗಳನ್ನು ಬಂದ್ ಮಾಡಿಸುವುದಕ್ಕೆ ಮುಂದಾದಾಗ ಕೆಲ ವ್ಯಾಪಾರಸ್ಥರು ಅಂಗಡಿಗಳನ್ನು ಬಂದ್ ಮಾಡಿದರೂ, ನಂತರದಲ್ಲಿ ಪ್ರತಿಭಟನಾಕಾರರು ಮುಂದೆ ಸಾಗುತ್ತಿದ್ದಂತೆ ಮತ್ತೆ ಅಂಗಡಿಗಳನ್ನು ತೆರೆದು ಮಾಮೂಲಿಯಂತೆ ವ್ಯಾಪಾರ ವಹಿವಾಟು ನಡೆಸಿದರು. ಎಲ್ಲಾ ವ್ಯಾಪಾರಿ ಮಳಿಗೆಗಳಲ್ಲಿ ದಿನ ನಿತ್ಯದಂತೆ ವ್ಯಾಪಾರ ವಹಿವಾಟು ನಡೆಯಿತು. ಹಣ್ಣು, ಬೀಡಾ ಅಂಗಡಿ, ಚಪ್ಪಲಿ ಅಂಗಡಿಗಳನ್ನು ಬೆಳಗ್ಗೆ ಮಾತ್ರ ಬಂದ್ ಮಾಡಿದ್ದು, ಮಧ್ಯಾಹ್ನ ವ್ಯಾಪಾರ ವಹಿವಾಟು ನಡೆಸಿದವು. ಬಸ್ , ಆಟೋ, ಟ್ಯಾಕ್ಸಿ, ಇನ್ನಿತರೆ ವಾಹನಗಳ ಸಂಚಾರ ಮಾಮೂಲಿಯಾಗಿಯೇ ಇತ್ತು.

ನಗರದ ಮುಖ್ಯ ರಸ್ತೆ, ದೇವಸ್ಥಾನ ರಸ್ತೆ, ಹೆಚ್. ಶಿವಪ್ಪ ವೃತ್ತ, ಪಿ.ಬಿ. ರಸ್ತೆ, ರಾಣಿ ಚೆನ್ನಮ್ಮ ವೃತ್ತದಲ್ಲಿ ವ್ಯಾಪಾರ ವಹಿವಾಟುಗಳು ಎಂದಿನಂತೆ ತಮ್ಮ ಕಾರ್ಯವನ್ನು ನಿರ್ವಹಿಸಿದ್ದು ಕಂಡು ಬಂತು.

ಮುಖಂಡರಾದ ಹೆಚ್. ಕೆ. ಕೊಟ್ರಪ್ಪ ಹಾಗೂ ನಾಗರಾಜ್ ಮೆಹರ್ವಾಡೆ ಮಾತನಾಡಿ, ರಾಜ್ಯದ ಕನ್ನಡಿಗರ ತಾಳ್ಮೆ ಪರೀಕ್ಷಿಸಲು ಸರ್ಕಾರ ಜಾತಿಗೊಂದು ನಿಗಮಗಳ ಪ್ರಾಧಿಕಾರ ರಚಿಸಲು ಮುಂದಾಗಿರುವುದು ಸರಿಯಲ್ಲ. ತಮ್ಮ ಪಕ್ಷದ ಬೆಳವಣಿಗೆಗೆ ಅನುಕೂಲವಾಗಲಿದೆ ಎಂಬ ನಿಟ್ಟಿನಲ್ಲಿ ಮಾತ್ರ ಯೋಚಿಸಿದೆ. ಗಡಿಯ ಬಗ್ಗೆ ಮಹಾರಾಷ್ಟ್ರದ ಶಿವಸೇನೆ, ಎಂ.ಇ.ಎಸ್.ಗಳ ಅಸಭ್ಯ ವರ್ತನೆ ನಮಗೆಲ್ಲಾ ತಿಳಿದದ್ದೆ. ಹೀಗಿರುವಾಗ ಮರಾಠಿಗರ ಪರವಾಗಿ ಸರ್ಕಾರ ಪ್ರಾಧಿಕಾರ ರಚಿಸಲು ಮುಂದಾಗಿರುವುದು ಕೇವಲ ಮತಗಳಿಕೆಗಾಗಿ ಅಷ್ಟೇ. ಸರ್ಕಾರ ಕೂಡಲೇ ಈ ನಿರ್ಧಾರವನ್ನು ಬಿಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಾಗರಾಜ್ ಗೌಡ, ರಾಜು ಆಟೋ, ಲಿಂಗರಾಜ್, ಬಾಲಸುಬ್ರಹ್ಮಣ್ಯ, ಇಲಿಯಾಸ್ ಆಹ್ಮದ್, ರಾಜು, ಗೌಸ್‌ಪೀರ್, ಅರುಣ್, ಖದ್ರೀಶ್, ಶಶಿಕುಮಾರ್, ಕೆ.ಆರ್. ಕೊಟ್ರೇಶ್, ಭೀರಪ್ಪ, ದೇವರಾಜ್, ಬಿ.ಎಂ. ರಹಮತ್‌ವುಲ್ಲಾ, ಹೆಚ್. ಶಿವಪ್ಪ, ಶೇಖ್ ಅಹ್ಮದ್, ಜಿಯಾವುಲ್ಲಾ ಇನ್ನಿತರರಿದ್ದರು.

# ಬಲತ್ಕಾರದಿಂದ ಪಡೆಯುತ್ತಿರುವ ಭೂಮಿ : ಖಂಡನೆ

ರಾಣೇಬೆನ್ನೂರು, ಡಿ.5- ಕೆರೆಗಳಿಗೆ ನೀರು ತುಂಬಿಸುವ ಉದ್ದೇಶದಿಂದ ರೈತರ ಭೂಮಿಯನ್ನು ಬಲತ್ಕಾರದಿಂದ ಕಿತ್ತುಕೊಳ್ಳುತ್ತಿರುವ ನೀತಿಯನ್ನು ಖಂಡಿಸಿ ಹೋರಾಡುತ್ತಿರುವ ಬಿ.ಡಿ. ಹಿರೇಮಠ ಅವರ ಸತ್ಯಾಗ್ರಹಕ್ಕೆ ರಾಜ್ಯ ರೈತ ಸಂಘ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ.

ಶಿಕಾರಿಪುರ ತಾಲ್ಲೂಕಿನ ಉಡಗುಣಿ, ತಾಳಗುಂದ, ಹೊಸೂರು ಮುಂತಾದ ಗ್ರಾಮಗಳ ಕೆರೆಗಳಿಗೆ ಸರಕಾರ ನೀರು ತುಂಬಿಸುವ ಉದ್ದೇಶದಿಂದ ರೈತರ ಭೂಮಿಯನ್ನು ಬಲತ್ಕಾರದಿಂದ ಕಿತ್ತುಕೊಳ್ಳುತ್ತಿರುವ ನೀತಿ ಖಂಡಿಸಿ ಹಿರಿಯ ಹೋರಾಟಗಾರ ಬಿ.ಡಿ. ಹಿರೇಮಠ ಅವರು ಮೂರು ದಿನಗಳಿಂದ ರಟ್ಟಿಹಳ್ಳಿಯಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ಅವರ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸುವುದಾಗಿ ಮತ್ತು ಬಲತ್ಕಾರದ ರೈತ ವಿರೋಧಿ ನೀತಿಯನ್ನು ಸರಕಾರ ಕೈ ಬಿಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು




ನಗರದ ಬಸ್‌ಸ್ಟ್ಯಾಂಡ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಉಪ ತಹಸೀಲ್ದಾರ್ ಹಾದಿಮನಿ ಮುಖಾಂತರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಮನವಿ ಪತ್ರ ಅರ್ಪಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಪಾಟೀಲ ಮಾತನಾಡಿ, ಮೇಲ್ಕಂಡ ನೀರಾವರಿ ಯೋಜನೆಗೆ ಹಾವೇರಿ ಜಿಲ್ಲೆಯ ನೂರಾರು ರೈತರ ಫಲವತ್ತಾದ ಭೂಮಿಯನ್ನು ರೈತರ ವಿರೋಧದ ಮಧ್ಯ ಕಸಿದುಕೊಳ್ಳಲಾಗುತ್ತಿದೆ. ಸರ್ಕಾರದ ಈ ನೀಚ ರೈತ ವಿರೋಧಿ ನೀತಿಯನ್ನು ಖಂಡಿಸಿ, ಹಿರಿಯ ಹೋರಾಟಗಾರ ಬಿ.ಡಿ.ಹಿರೇಮಠ ಅವರು ಮೂರು ದಿನಗಳಿಂದ ಹಮ್ಮಿಕೊಂಡಿರುವ ಉಪವಾಸ ಸತ್ಯಾಗ್ರಹಕ್ಕೆ ಉತ್ತರ ಕರ್ನಾಟಕದ ಹೆಬ್ಬಾಗಿಲು ರಾಣೇಬೆನ್ನೂರಿನಿಂದ ಎಲ್ಲಾ ರೈತಪರ, ಕನ್ನಡಪರ ಸಂಘಟನೆಗಳಿಂದ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇವೆ ಎಂದರು.

25 ವರ್ಷಗಳ ಹಿಂದೆಯೇ ಅಪ್ಪರ್ ತುಂಗಾ ಯೋಜನೆಯಲ್ಲಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಸರ್ಕಾರದಿಂದ ಬರಬೇಕಾದ ಪರಿಹಾರವೇ ಇನ್ನೂ ಬಂದಿಲ್ಲ. ಅಂತಹದ್ದರಲ್ಲಿ ರೈತರ ಭೂಮಿಯನ್ನು ಕಸಿದುಕೊಳ್ಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರಶ್ನಿಸಿದ ರವೀಂದ್ರಗೌಡ ಪಾಟೀಲ, ರೈತರಿಗೆ ಮಾರಕವಾಗಿರುವ ಈ ನೀತಿ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಚಂದ್ರಣ್ಣ ಬೇಡರ, ಹರಿಹರ ಗೌಡ ಪಾಟೀಲ, ಬಿ.ಕೆ. ರಾಜನಹಳ್ಳಿ, ಶಿವಾನಂದ ಬುಳ್ಳಮ್ಮನವರ, ಮಹಮದ್ ಸಾಬ್, ಶಿದ್ದಪ್ಪ ತಿರುಕಪ್ಪ, ಕೆ.ಎಚ್. ಕೂಲೇರ, ಶಿವಣ್ಣ ದೊಡ್ಡನಿ, ಮಂಜುನಾಥ ದುಗ್ಗತ್ತಿ, ಪ್ರದೀಪ ಅಕ್ಕೇರ, ಧರ್ಮಣ್ಣ ಕುಪ್ಪೇಲೂರ, ಎಸ್.ಡಿ. ಹೊನ್ನಕ್ಕಳವರ, ರಾಜು ಓಲೇಕಾರ, ಸಂತೋಷ ಬಮ್ಮಕ್ಕನವರ, ಹಾಲವ್ವ ಬಮ್ಮಕ್ಕನವರ, ಸಂತೋಷ ವಡ್ಡರ ನಾಗರಾಜ ಓಲೇಕಾರ ಮೊದಲಾದವರು ಇದ್ದರು.

# ಕುಂದುವಾಡದಲ್ಲಿ ನಾಳೆ ಲಕ್ಷ ದೀಪೋತ್ಸವ



ದಾವಣಗೆರೆ, ಡಿ.5 - ಇಲ್ಲಿಗೆ ಸಮೀಪದ ಹಳೇ ಕುಂದುವಾಡದಲ್ಲಿರುವ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಕಾರ್ತಿಕ ಮಾಸದ ಅಂಗವಾಗಿ ನಾಡಿದ್ದು ದಿನಾಂಕ 7 ರ ಸೋಮವಾರ ವಿವಿಧ ಪೂಜಾ ಕಾರ್ಯಗಳು ನೆರವೇರಲಿವೆ.

ಸೋಮವಾರ ಬೆಳಿಗ್ಗೆ 8 ಗಂಟೆಯಿಂದ ಕರಿಬಸವೇಶ್ವರ ಸ್ವಾಮಿ ಅಮೃತ ಶಿಲಾ ಮೂರ್ತಿಗೆ ಏಕದಶ ರುದ್ರಾಭಿಷೇಕ, ಮಹಾರುದ್ರಯಾಗ, ಶ್ರೀ ಮಹಾದುರ್ಗಾ ಹೋಮ ನಡೆಯಲಿದ್ದು, ಶ್ರೀ ವಿಜಯ ದುರ್ಗಾ ಪರಮೇಶ್ವರಿ ಉಪಾಸಕರಾದ ಜೆ.ಜಿ. ದಿನೇಶ್ ಗುರೂಜಿ ಸಾನ್ನಿಧ್ಯ ವಹಿಸಲಿದ್ದಾರೆ. ಧರ್ಮಾಧಿಕಾರಿ ಜೆ. ರಾಜಣ್ಣ ಅವರು ನೇತೃತ್ವ ವಹಿಸುವರು.

ಸಂಜೆ 7 ಕ್ಕೆ ಲಕ್ಷ ದೀಪೋತ್ಸವ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಮೇಯರ್ ಬಿ.ಜಿ. ಅಜಯಕುಮಾರ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯರಾದ ಶ್ರೀಮತಿ ಶಿಲ್ಪ ಜಯಪ್ರಕಾಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಪಾಲಾಕ್ಷ, ಉದಯ ಶಿವಕುಮಾರ್ ಅವರುಗಳು ಪಾಲ್ಗೊಳ್ಳಲಿದ್ದಾರೆ.


# ಮೈಸೂರು ವಿಭಾಗದ ರೈಲುಗಳಿಗೆ ಚಾಲನೆ

**(1ನೇ ಪುಟದಿಂದ)** ಡಿ.7ರಿಂದ ಡಿ.16ರ ನಡುವೆ ಸಂಚರಿಸಲಿದೆ. ಇದು ಕೋವಿಡ್ ಪೂರ್ವದಲ್ಲಿ ರೈಲು ಸಂ. 12725 ರೀತಿಯಲ್ಲಿ ಕಾರ್ಯ ನಿರ್ವಹಿಸಲಿದೆ. 02726 ಧಾರವಾಡ - ಕೆ.ಎಸ್.ಆರ್. ಬೆಂಗಳೂರು ಸಹ ಸಂಪೂರ್ಣವಾಗಿ ಕಾಯ್ದಿರಿಸಿದ ರೈಲಾಗಿದ್ದು, ಡಿ.8ರಿಂದ 17ರವರೆಗೆ ಕೋವಿಡ್ ಪೂರ್ವದ ರೈಲು ಸಂಖ್ಯೆ 12726 ರೀತಿಯಲ್ಲಿ ಪ್ರತಿದಿನ ಕಾರ್ಯ ನಿರ್ವಹಿಸಲಿದೆ.

06589 ಸಂಪೂರ್ಣವಾಗಿ ಕಾಯ್ದಿರಿಸಿದ ಕೆ.ಎಸ್. ಆರ್. ಬೆಂಗಳೂರು - ಮೀರಜ್ ರೈಲು ಪ್ರತಿದಿನ ಡಿ.7ರಿಂದ 16ರವರೆಗೆ ಕಾರ್ಯ ನಿರ್ವಹಿಸಲಿದೆ. 06590 ಮೀರಜ್ - ಬೆಂಗಳೂರು ರೈಲು ಡಿ.8ರಿಂದ 17ರವರೆಗೆ ಕಾರ್ಯ ನಿರ್ವಹಿಸಲಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.


॥ ಶ್ರೀ ಶಿರಡಿ ಸಾಯಿನಾಥ ಪ್ರಸನ್ನ ॥ ॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥ ॥ ಶ್ರೀ ಚಿಂಚಲಿ ಮಾಯಮ್ಮದೇವಿ ಪ್ರಸನ್ನ ॥

13ನೇ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಸಿಟಿ ವಾಸಿ **ಹಾಲೇಕಲ್ಲು ಬಿ. ತಿಪ್ಪಣ್ಣನವರು**

ನಿವೃತ್ತ ಮುಖ್ಯೋಪಾಧ್ಯಾಯರು

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳು ಕಳೆದರೂ
ನೀವು ಹಚ್ಚಿಟ್ಟು ಹೋದ ಹಣತೆ ನಿತ್ಯ-ನಿರಂತರ ನಮ್ಮ ಮನೆ
ಮನಗಳನ್ನು ನಂದಾದೀಪವಾಗಿ ಬೆಳಗುತ್ತಿದೆ.
ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರು ನೀವು ಭೌತಿಕವಾಗಿ
ನಮ್ಮ ಕಣ್ಣ ಮುಂದೆ ಇಲ್ಲದಿದ್ದರೂ ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ
ಎಲ್ಲರೊಳಗೊಂದಾಗಿ ಬದುಕಿದ ನೀವು ನಿತ್ಯ ಸ್ಮರಣೀಯರಾಗಿದ್ದೀರಿ

ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ: ಹಾಲೇಕಲ್ಲು ಶ್ರೀಮತಿ ಸಿದ್ದಮ್ಮ ಮತ್ತು ಮಕ್ಕಳು ಹಾಗೂ ಸೊಸೆಯಂದಿರು
ಮೊಮ್ಮಕ್ಕಳಾದ: ಎಸ್.ಆರ್. ಹಾರ್ದಿಕ್, ಎಸ್.ಆರ್. ಪ್ರಣವ್,
ಎಸ್.ಎ.ಅಮೋಘ ಸಾಯಿ, ಎಸ್.ಎ. ಕೊಟ್ರೇಶ್ (ಚಿನ್ಮಯ್) ಹಾಗೂ
ಹಾಲೇಕಲ್ಲು ಸುಂಕದಕಲ್ಲು ವಂಶಸ್ಥರು, ದಾವಣಗೆರೆ.

# 781/41, ಶ್ರೀ ತಂದೆ-ತಾಯಿ ನಿಲಯ, 5ನೇ ಕ್ರಾಸ್, ಬಿ ಬ್ಲಾಕ್, ಚರ್ಚ್ ಹಿಂಭಾಗ, ಸರಸ್ವತಿ ನಗರ, ದಾವಣಗೆರೆ, 9481418009


# ಪಂಚಾಯ್ತಿ ಚುನಾವಣೆಗಾಗಿ ಕೈ ಮುಖಂಡರಿಗೆ ಜವಾಬ್ದಾರಿ

**(1ನೇ ಪುಟದಿಂದ)** ರಾಮಪ್ಪ, ಚನ್ನಗಿರಿ ಜವಾಬ್ದಾರಿಯನ್ನು ಮಾಜಿ ಶಾಸಕ ವಡ್ನಾಳ್ ರಾಜಣ್ಣ, ಹೊನ್ನಾಳಿ ಜವಾಬ್ದಾರಿಯನ್ನು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಹಾಗೂ ಜಗಳೂರಿನ ಜವಾಬ್ದಾರಿಯನ್ನು ಮಾಜಿ ಶಾಸಕ ಅಬ್ದುಲ್ ಜಬ್ಬಾರ್ ಅವರಿಗೆ ನೀಡಲಾಗಿದೆ.

ಹರಪನಹಳ್ಳಿ ಜವಾಬ್ದಾರಿಯನ್ನು ಶಾಸಕ ಅಲ್ಲಂ ವೀರಭದ್ರಪ್ಪ, ಕೂಡ್ಲಿಗಿ ಜವಾಬ್ದಾರಿಯನ್ನು ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಹಡಗಲಿ ಜವಾಬ್ದಾರಿಯನ್ನು ಶಾಸಕ ಪಿ.ಟಿ. ಪರಮೇಶ್ವರನಾಯ್ಕ ಅವರಿಗೆ ನೀಡಲಾಗಿದೆ. ರಾಣೇಬೆನ್ನೂರಿನ ಜವಾಬ್ದಾರಿಯನ್ನು ಮಾಜಿ ಶಾಸಕ ಕೆ.ಬಿ. ಕೋಳಿವಾಡ ಅವರಿಗೆ ವಹಿಸಲಾಗಿದೆ.

# ನಗರದಲ್ಲಿ ಇಂದು ಡಾ.ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ

ಜಿಲ್ಲಾಡಳಿತದ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್‌ರವರ 64ನೇ ಪರಿನಿರ್ವಾಣ ದಿನಾಚರಣೆಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11ಕ್ಕೆ ಆಚರಿಸಲಾಗುವುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶಿವಾನಂದ ಕುಂಬಾರ್ ತಿಳಿಸಿದ್ದಾರೆ.

# ಪ್ರತಿಭಟನೆಗೆ ಸೀಮಿತವಾದ ಬಂದ್

**(1ನೇ ಪುಟದಿಂದ)** ಪ್ರತಿಭಟನೆಯಿಂದ ಎಲ್ಲಿಯೂ ಕಾನೂನು ಸುವ್ಯವಸ್ಥೆ ಹದಗೆಡಲಿಲ್ಲ. ರಾಜ್ಯ ಸರ್ಕಾರ ಬಂದ್‌ಗೆ ಸ್ಪಂದಿಸದ ಕಾರಣ ರಾಜ್ಯ ಸರ್ಕಾರಿ ಬಸ್‌ಗಳು ಎಂದಿನಂತೆ ರಸ್ತೆಗಿಳಿದಿದ್ದವು.

ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳು, ಕೈಗಾರಿಕೆಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿದ್ದವು. ವಾಣಿಜ್ಯ ಚಟುವಟಿಕೆಗೆ ಎಲ್ಲಿಯೂ ಅಡ್ಡಿಯಾಗಲಿಲ್ಲ. ಆರೋಗ್ಯ ಸೇವೆ ಎಂದಿನಂತೆ ಲಭ್ಯವಾಗಿತ್ತು.

ಕನ್ನಡಪರ ಸಂಘಟನೆಗಳು ಮುಖ್ಯಮಂತ್ರಿಯವರ ನಿವಾಸ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಕಚೇರಿಗಳ ಮುತ್ತಿಗೆಗೆ ಕರೆ ನೀಡಿದ್ದವು. ಪ್ರತಿಭಟನಾಕಾರರು ಮುತ್ತಿಗೆ ಹಾಕಲು ಮುಂದಾಗುತ್ತಿದ್ದಂತೆ ಪೊಲೀಸರು ಹೋರಾಟಗಾರರನ್ನು ಬಂಧಿಸುವ ಕೆಲಸ ಮಾಡಿದರು.

ಬರುವ ಗುರುವಾರದಂದು ಮತ್ತೊಂದು ಸಭೆ ನಡೆಸಲು ಕನ್ನಡಪರ ಸಂಘಟನೆಗಳ ಮುಖಂಡರು ತೀರ್ಮಾನಿಸಿದ್ದಾರೆ. ಅಂದಿನ ಸಭೆಯಲ್ಲಿ ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ವಿರೋಧಿಸಿ, ಜೈಲ್ ಭರೋ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧಾರ ತೆಗೆದುಕೊಳ್ಳಲಾಗುವುದು.

ಅಷ್ಟೇ ಅಲ್ಲ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಕಾವೇರಿ ನಿವಾಸಕ್ಕೆ ಮುತ್ತಿಗೆ ಹಾಕಲು ಹೊರಟ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿದರು.


ಸರ್ಕಾರದ ನಿಲುವಿನಿಂದ ಆಕ್ರೋಶಗೊಂಡ ಪ್ರತಿಭಟನಕಾರರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಘೋಷಣೆ ಕೂಗಿದರು.

॥ ಶ್ರೀ ಶಿವನಾರದಮುನಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

**ಶ್ರೀಮತಿ ಹೆಚ್.ಎನ್. ಸಾಕಮ್ಮ ಮತ್ತು ಮಕ್ಕಳು**

ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.



ಜನನ : 03.03.1938 ಮರಣ :16-11-2020

ದಿನಾಂಕ 16-11-2020ನೇ ಸೋಮವಾರ ಮಧ್ಯಾಹ್ನ 3 ಗಂಟೆಗೆ ನನ್ನ ಪೂಜ್ಯ ಪತಿಯವರಾದ **ಶ್ರೀ ನಾರಪ್ಪ ಹೆಚ್.** **ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿಗಳು** ಇವರು ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** **ದಿನಾಂಕ 06-12-2020ನೇ ಭಾನುವಾರ ಬೆಳಿಗ್ಗೆ 11.30 ಕ್ಕೆ** ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ **ನಿವೃತ್ತ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಹೆಚ್.ಎನ್. ಸಾಕಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ನಾರಪ್ಪರ ವಂಶಸ್ಥರು, ಜರೇಕಟ್ಟೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು, ಮೊ. 90666 82343, 98866 44930**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಮೌನ ವ್ರತಕ್ಕೆ ಮುಂದಾದ ರೈತರು 5ನೇ ಸುತ್ತಿನ ಮಾತುಕತೆಯೂ ವಿಫಲ

ನವದೆಹಲಿ, ಡಿ. 5 – ಸರ್ಕಾರ ಹಾಗೂ ಪ್ರತಿಭಟನಾ ನಿರತ ರೈತರ ನಡುವೆ ಐದು ಸುತ್ತುಗಳ ಮಾತುಕತೆ ನಡೆಸಿದರೂ ಸಹ ಯಾವುದೇ ಫಲ ದೊರೆತಿಲ್ಲ. ಕೃಷಿ ಸಂಬಂಧದ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಪಟ್ಟು ಹಿಡಿದಿರುವ ರೈತರು, ಸರ್ಕಾರದ ವಿವರಣೆ ಕೇಳಲು ನಿರಾಕರಿಸಿದ್ದಾರೆ. ಇದರಿಂದಾಗಿ ಸರ್ಕಾರ ಡಿಸೆಂಬರ್ 9ರಂದು ಮತ್ತೊಂದು ಸಭೆ ಕರೆದಿದೆ.

ಸಭೆಯ ಕೊನೆಯ ಹಂತದಲ್ಲಿ ಮೌನ ವ್ರತಧಾರಿಗಳಾದ ರೈತರು, ತಮ್ಮ ಪ್ರಶ್ನೆಗಳಿಗೆ ಹೌದು ಇಲ್ಲವೇ ಇಲ್ಲ ಎಂದಷ್ಟೇ ಉತ್ತರಿಸುವಂತೆ ಆಗ್ರಹಿಸಿದರು.

ಮೂವರು ಕೇಂದ್ರ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ರೈತ ಮುಖಂಡರ ಜೊತೆ ಚರ್ಚೆ ನಡೆಸಿದ್ದಾರೆ. ಮುಂದಿನ ಭೇಟಿ ವೇಳೆಗೆ ನಿಖರ ಪ್ರಸ್ತಾಪಗಳನ್ನು ಮುಂದಿಡಲು ತಮಗೆ ಸಮಯ ಬೇಕು ಎಂದು ಸಚಿವರು ತಿಳಿಸಿದ್ದಾರೆ.

40 ರೈತ ನಾಯಕರು ಸಭೆಯಲ್ಲಿ ಉಪಸ್ಥಿತರಿದ್ದರು. ಮುಖಂಡರು ನಿಖರ ಸಲಹೆಗಳನ್ನು ನೀಡಬೇಕು ಎಂದು ಕೇಳಿದ್ದೇವೆ. ಅವರ ಸಹಕಾರದೊಂದಿಗೆ ಪರಿಹಾರ ಕಂಡುಕೊಳ್ಳುತ್ತೇವೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ತೋಮರ್, ಕನಿಷ್ಠ ಬೆಂಬಲ ಬೆಲೆಯಲ್ಲಿ ಕೃಷಿ ಇಳುವರಿ ಖರೀದಿ ಮುಂದುವರೆಯಲಿದೆ ಹಾಗೂ ಎ.ಪಿ.ಎಂ.ಸಿ.ಗಳನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದು ತಿಳಿಸಲಾಗಿದೆ ಎಂದಿದ್ದಾರೆ.

ಚರ್ಚೆಯಲ್ಲಿ ಭಾಗಿಯಾಗಿದ್ದ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ನಂತರದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಸಭೆಯ ವಿವರ ನೀಡಿದ್ದಾರೆ. ರೈತರ ಮುಂದೆ ಇಡಬೇಕಾದ ಪ್ರಸ್ತಾವನೆಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಈ ನಡುವೆ, ಪ್ರತಿಭಟನೆ ತೀವ್ರಗೊಳಿಸುವುದಾಗಿ ಹೇಳಿರುವ ರೈತರು, ರಾಜಧಾನಿ ದೆಹಲಿಯ ಇನ್ನಷ್ಟು ರಸ್ತೆಗಳನ್ನು ಬಂದ್ ಮಾಡುವುದಾಗಿ ತಿಳಿಸಿದ್ದಾರೆ.

ವಿಜ್ಞಾನ ಭವನದಲ್ಲಿ ಸರ್ಕಾರದ ಜೊತೆ ಮಾತುಕತೆ ನಡೆಸಿದ್ದ ರೈತರು, ಒಂದು ಹಂತದಲ್ಲಿ ಮಾತುಕತೆಯಿಂದ ಎದ್ದು ಹೊರ ನಡೆಯುವುದಾಗಿಯೂ ಎಚ್ಚರಿಸಿದ್ದಾರೆ. ಸಭೆಯ ನಂತರ ಮಾತನಾಡಿರುವ ರೈತ ಮುಖಂಡ ಜೋಗಿಂದರ್ ಸಿಂಗ್ ಉಗ್ರಹಣ್, ಸರ್ಕಾರ ಕಾನೂನಿನಲ್ಲಿ ಬದಲಾವಣೆಗೆ ಹಲವಾರು ಪ್ರಸ್ತಾಪ ಮುಂದಿಟ್ಟಿದೆ. ಆದರೆ, ನಾವು ಕಾನೂನು ವಾಪಸ್ ಪಡೆಯಬೇಕು ಎಂದು ಪಟ್ಟು ಹಿಡಿದಿದ್ದೇವೆ ಎಂದರು.

# ಅಂಗವಿಕಲತೆ ಮೆಟ್ಟಿ ನಿಂತು ಇತರರಿಗೆ ಮಾದರಿಯಾಗಬೇಕು : ಅಜಯ್ ಗುಪ್ತಾಜಿ




ಕುಮಾರಪಟ್ಟಣಂ, ಡಿ.5- ಅಂಗವಿಕಲತೆ ಶಾಪವಲ್ಲ, ಅದು ರೋಗವೂ ಅಲ್ಲ. ಅಂಗವಿಕಲತೆ ಮರೆತು, ಮೆಟ್ಟಿ ನಿಂತು ಸಾರ್ವಜನಿಕರಿಗೆ ಮಾದರಿಯಾಗಿರಿ ಎಂದು ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯ ಮುಖ್ಯಸ್ಥ ಅಜಯಕುಮಾರ್ ಗುಪ್ತಾಜಿ ಕರೆ ನೀಡಿದರು.

ಅವರು ಬಿರ್ಲಾ ಒಡೆತನದ ಸಂಸ್ಥಾಪಕ ಆದಿತ್ಯ ವಿಕ್ರಮ್ ಬಿರ್ಲಾಜಿ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಗ್ರಾಸಿಂ ಜನಸೇವಾ ಟ್ರಸ್ಟ್ ಮತ್ತು ಬೆಂಗಳೂರಿನ ಮಾರ್ವಾಡಿ ಯೂತ್ ಫೆಡರೇಷನ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕೃತಕ ಕಾಲು ಜೋಡಣಾ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು.


ಕಾರ್ಯಕ್ರಮದಲ್ಲಿ ಗ್ರಾಸಿಂ ಡಿವಿಜನ್ ಉಪಾಧ್ಯಕ್ಷ ಅಶೋಕ ಪ್ರಭಾಕರನ್, ಹಣಕಾಸು ವಿಭಾಗದ ಮುಖ್ಯಸ್ಥ ಸುಭಾಷ್ ಶರ್ಮಾ, ಮಾನವ ಸಂಪನ್ಮೂಲ ಮುಖ್ಯಸ್ಥ ಯಶ್ ಶ್ರೋತ್ರಿಯಾ, ಜನಸೇವಾ ಟ್ರಸ್ಟ್ ವ್ಯವಸ್ಥಾಪಕ ದಿನೇಶ್ ನಾಯ್ಕ್, ಉಪ ವ್ಯವಸ್ಥಾಪಕಿ ರೇಣುಕಾ ನಾಗನೂರ, ವೀಣಾ ಕೆಂಚಪ್ಪನವರ, ಡಾ. ಶ್ಯಾಮಲಾ ರಾವ್, ಎನ್. ಮಂಜುನಾಥ್, ಮಾರ್ವಾಡಿ ಯೂತ್ ಫೆಡರೇಷನ್ ಮುಖ್ಯಸ್ಥ ಮುರುಳಿ, ಕಾರ್ಮಿಕ ಸಂಘದ ಉಪಾಧ್ಯಕ್ಷ ಶಿವಪ್ಪ ಕೋಲಕರ್, ರಮೇಶ ಪೂಜಾರ್, ಅಕ್ಬರ್ ಹುಸೇನ್, ಬೀರೇಶ್ ಕುರುಬರ್ ಉಪಸ್ಥಿತರಿದ್ದರು. ಸುಮಾರು 150 ಕ್ಕೂ ಅಧಿಕ ಅಂಗವಿಕಲರಿಗೆ ಕೃತಕ ಕಾಲು ಜೋಡಿಸಲಾಯಿತು.

## ಶತಾಯುಷಿ ಸಾಸಮ್ಮ ನಿಧನ



ದಾವಣಗೆರೆ ಎಸ್.ಎಂ. ಕೃಷ್ಣ ನಗರದ ವಾಸಿ, ಶತಾಯುಷಿ ಸಾಸಮ್ಮ (101) ಅವರು ದಿನಾಂಕ 05.12.2020 ರ ಶನಿವಾರ ಸಂಜೆ 4 ಗಂಟೆಗೆ ನಿಧನರಾಗಿದ್ದಾರೆ. ಮಕ್ಕಳು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.12.2020 ರಂದು ಭಾನುವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಬೆನ್ನೂರು ಸಿದ್ದೇಶ್ ನಿಧನ



ದಾವಣಗೆರೆ ಸಿಟಿ ಆನೆಕೊಂಡ ವಾಸಿ ಬೆನ್ನೂರು ಸಿದ್ದೇಶ್ ಎಂ.(66) ಅವರು ದಿನಾಂಕ : 05.12.2020 ರಂದು ಶನಿವಾರ ಮಧ್ಯಾಹ್ನ 12.52ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸಹೋದರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.12.2020 ರ ರಾತ್ರಿ ನೆರವೇರಿತು.

## ಹರಿಹರದಲ್ಲಿಂದು ಬಿಜೆಪಿ ಸಭೆ

ಬಿಜೆಪಿ ಗ್ರಾಮಾಂತರ ಘಟಕದಿಂದ ಸಭೆಯು ರಾಘವೇಂದ್ರ ಸ್ವಾಮಿ ಮಠದಲ್ಲಿ ಇಂದು ಮಧ್ಯಾಹ್ನ 12 ಕ್ಕೆ ನಡೆಯಲಿದೆ ಎಂದು ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್ ತಿಳಿಸಿದ್ದಾರೆ.

ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ನಿರ್ಮಲಾ ಟಿ. ಮುಕುಂದ, ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ ಮತ್ತಿತರರು ಆಗಮಿಸಲಿದ್ದಾರೆ.

## ಅಗ್ನಿ ಶಾಮಕ ದಳಕ್ಕೆ 13.5 ಲಕ್ಷ ರೂ. 'ಸ್ಮಾರ್ಟ್' ಸಲಕರಣೆ



ದಾವಣಗೆರೆ, ಡಿ. 5 - ಸ್ಮಾರ್ಟ್ ಸಿಟಿ ಯೋಜನೆಯಡಿ ಸುಮಾರು 13.5 ಲಕ್ಷ ರೂ.ಗಳ ಮೌಲ್ಯದ ಉಪಕರಣಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ಅಗ್ನಿಶಾಮಕ ಇಲಾಖೆಗೆ ಹಸ್ತಾಂತರಿಸಿದ್ದಾರೆ. ಜಿಲ್ಲಾಡಳಿತ ಭವನ ಆವರಣದಲ್ಲಿ ಈ ಸಮಾರಂಭ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಮೇಯರ್ ಬಿ.ಜಿ. ಅಜಯ್ ಕುಮಾರ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ ಮತ್ತಿತರರು ಉಪಸ್ಥಿತರಿದ್ದರು.

## ಐಎಂಎ ಹಗರಣ : ರೋಷನ್ ಬೇಗ್‌ಗೆ ಜಾಮೀನು

ಬೆಂಗಳೂರು, ಡಿ. 5 - ಐಎಂಎ ಕಂಪನಿಯಿಂದ ಹೂಡಿಕೆದಾರರಿಗೆ ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾಜಿ ಸಚಿವ ರೋಷನ್ ಬೇಗ್‌ಗೆ ಸಿಬಿಐ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ. ರೋಷನ್‌ಬೇಗ್ ತನಿಖೆಗೆ ಸಹಕರಿಸಿದ್ದಾರೆ. ಈಗಾಗಲೇ ತನಿಖೆ ಮುಕ್ತಾಯವಾಗಿದೆ ಎಂದು ಬೇಗ್ ಪರ ವಕೀಲರು ವಾದ ಮಂಡಿಸಿದ್ದರು. ಈ ಹಿನ್ನೆಲೆಯಲ್ಲಿ ಷರತ್ತುಬದ್ಧ ಜಾಮೀನು ನೀಡಿರುವ ನ್ಯಾಯಾಲಯ ಪ್ರತಿ ಎರಡನೇ ಮತ್ತು ನಾಲ್ಕನೇ ಸೋಮವಾರ ಸಿಬಿಐ ಮುಂದೆ ಹಾಜರಾಗಬೇಕು. ಒಂದು ವೇಳೆ ಬೇರೆ ದಿನ ನೋಟಿಸ್ ನೀಡಿದರೆ, ತನಿಖೆಗೆ ಹಾಜರಾಗಬೇಕೆಂದು ಸೂಚಿಸಿದೆ.

### ಕಾಂಗ್ರೆಸ್ ಪಕ್ಷದಿಂದ ಗ್ರಾಮ ಪಂಚಾಯತ್ ಚುನಾವಣೆಗೆ ಸಿದ್ಧತೆ

# ಗ್ರಾಮಸ್ವರಾಜ್ ಹೆಸರೇಳಲು ಬಿಜೆಪಿಗೆ ನೈತಿಕತೆ ಇಲ್ಲ

ದಾವಣಗೆರೆ, ಡಿ. 5 - ಮಹಾತ್ಮ ಗಾಂಧಿಜೀಯವರ ಕನಸಿನ ಗ್ರಾಮ ಸ್ವರಾಜ್ ಅನ್ನು ಕಾಂಗ್ರೆಸ್ ಪಕ್ಷ ತನ್ನ ಆಡಳಿತ ಅನುಸರಿಸಿ ಗ್ರಾಮಗಳ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದೆ. ಆದರೆ, ಬಿಜೆಪಿ ಪಕ್ಷ ಆಡಳಿತ ವಿಕೇಂದ್ರಿಕರಣ ಮತ್ತು ಮೀಸಲಾತಿಗೆ ವಿರುದ್ಧವಾಗಿದ್ದು, ಗ್ರಾಮಸ್ವರಾಜ್ ಹೆಸರೇಳಲು ಬಿಜೆಪಿಗೆ ನೈತಿಕತೆ ಇಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಖಂಡಿಸಿತು.



ಜಿಲ್ಲಾ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಗ್ರಾಮ ಪಂಚಾಯತ್ ಚುನಾವಣೆಯ ಹಿನ್ನೆಲೆಯಲ್ಲಿ ನಿನ್ನೆ ನಡೆದ ಪಕ್ಷದ ಪ್ರಮುಖರ ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖಂಡರುಗಳು ಬಿಜೆಪಿ ಗ್ರಾಮಸ್ವರಾಜ್ ಹೆಸರಿನಲ್ಲಿ ಗ್ರಾಮೀಣ ಭಾಗದ ಜನರನ್ನು ಮೋಸಗೊಳಿಸಲು ಹೊರಟಿದೆ ಎಂದು ಆಪಾದಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್ ಮಾತನಾಡಿ, ಬಿಜೆಪಿ ಈಗ ಜಾರಿಗೆ ತಂದಿರುವ ಎಪಿಎಂಸಿ ಕಾಯ್ದೆಯಿಂದಾಗಿ ರೈತರಿಗೆ ಅನಾನುಕೂಲ ಆಗಿರುವ ಉದಾಹರಣೆಯೊಂದನ್ನು ವಿವರಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ರೈತರ ಮೇಲೆ ದಬ್ಬಾಳಿಕೆಗಳು ಹೆಚ್ಚಾಗಿವೆ. ಈ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಜನಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ಕಕ್ಕರಗೊಳ್ಳ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಕೆ.ಪರಶುರಾಮ್ ಮಾಗಾನಹಳ್ಳಿ ಮಾತನಾಡಿ, ದೇಶದ ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಮೂರು ಹಂತಗಳಲ್ಲಿ ಅಧಿಕಾರ ವಿಕೇಂದ್ರಿಕರಣ ಮಾಡುವ ಮೂಲಕ ಗ್ರಾಮಗಳ ಅಭಿವೃದ್ಧಿಗೆ ನಾಂದಿ ಹಾಡಿರುವುದು ಕಾಂಗ್ರೆಸ್ ಪಕ್ಷ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಎಸ್.ಸಿ.ಮೋರ್ಚಾ ಅಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ ಮಾತನಾಡಿ, ಪಕ್ಷದ ಯಾರೇ ಅಭ್ಯರ್ಥಿಗಳಾದರೂ ಸಹ ಅವರನ್ನು ಬೆಂಬಲಿಸುವಂತೆ ವರಿಷ್ಠರು ಕಾರ್ಯಕರ್ತರನ್ನು ಮನವೊಲಿಸಬೇಕೆಂದು ಮನವಿ ಮಾಡಿದರು. ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್.ಬಸವಂತಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷದ ಮತಗಳಿದ್ದು, ಅವುಗಳನ್ನು ಕ್ರೋಢೀಕರಣಗೊಳಿಸಲು ನಾವುಗಳು ಮುಂದಾಗಬೇಕೆಂದರು.

ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಮಾತನಾಡಿ, ಗ್ರಾಮಸ್ವರಾಜ್ ಹೆಸರಿನಲ್ಲಿ ರೈತರಿಗೆ ಮೋಸ ಮಾಡಲು ಹೊರಟಿರುವ ಬಿಜೆಪಿಯನ್ನು ತಡೆಯುವ ಮೂಲಕ ಜನ ವಿರೋಧಿ ನೀತಿಯನ್ನು ಖಂಡಿಸಬೇಕೆಂದು ಕರೆ ನೀಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಎಪಿಎಂಸಿ ಅಧ್ಯಕ್ಷ ಅಣಜಿ ಚಂದ್ರಶೇಖರ್, ಶಾಮನೂರು ಟಿ.ಬಸವರಾಜ್, ಅಯೂಬ್ ಪೈಲ್ವಾನ್, ಎಸ್.ಮಲ್ಲಿಕಾರ್ಜುನ್, ನಂಜಾನಾಯ್ಕ ಮತ್ತಿತರರಿದ್ದರು.

# ಗ್ರಾಮ ಮಟ್ಟದಿಂದ ಪಕ್ಷ ಸಂಘಟಿಸಿ ಸದೃಢಗೊಳಿಸಬೇಕು

### ಜಗಳೂರು : ಬಿಜೆಪಿಯ ಅಭ್ಯಾಸ ವರ್ಗ ಕಾರ್ಯಕ್ರಮದಲ್ಲಿ ಕಾರ್ಯಕರ್ತರಿಗೆ ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಕರೆ

ಜಗಳೂರು, ಡಿ.5- ಗ್ರಾಮಮಟ್ಟದಿಂದ ಸಂಘಟನೆ ಬಲಪಡಿಸಿ ಬಿಜೆಪಿ ಪಕ್ಷವನ್ನು ಸದೃಢಗೊಳಿಸಬೇಕು ಎಂದು ಸಂಸದ ಜಿಎಂ ಸಿದ್ದೇಶ್ವರ ಕರೆ ನೀಡಿದರು.

ತಾಲ್ಲೂಕಿನ ಕಣ್ಣಕುಪ್ಪೆ ಗವಿಮಠದ ಸಭಾಂಗಣದಲ್ಲಿ ಪಕ್ಷದಿಂದ ಹಮ್ಮಿಕೊಂಡಿದ್ದ ಎರಡು ದಿನಗಳ ಅಭ್ಯಾಸ ವರ್ಗ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಮೇಲ್ಮಟ್ಟದಲ್ಲಿ ಬಿಜೆಪಿ ಅಧಿಕಾರದಲ್ಲಿದೆ, ಮಧ್ಯಭಾಗದವರೆಗೂ ಪಕ್ಷ ಸಂಘಟನೆ ವಿಸ್ತರಿಸಿ ಅಧಿಕಾರ ಪಡೆದಿದ್ದೇವೆ ಎಂದರು.

ರಾಜ್ಯದಲ್ಲಿ ಬಿಜೆಪಿ ಪಕ್ಷ ಎರಡನೇ ಬಾರಿ ಅಧಿಕಾರಕ್ಕೆ ಬಂದು ಆಡಳಿತ ನಡೆಸುತ್ತಿದ್ದರೂ ಕೂಡ ಸಂಪೂರ್ಣ ಬಹುಮತ ಗಳಿಸಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಬಿಜೆಪಿ ಪಕ್ಷ ತಳಮಟ್ಟದಿಂದ ಬಲವರ್ಧನೆಗೊಳ್ಳಬೇಕಿದೆ ಎಂದರು.





ಇದುವರೆಗೂ ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯ ಆಡಳಿತದಲ್ಲಿ ಕೆಲವೆಡೆ ಕಾಂಗ್ರೆಸ್ ಪಾಲಾಗಿವೆ, ಕಾಂಗ್ರೆಸ್ ಬೆಂಬಲಿತವಾಗಿವೆ ಅನ್ನುವುದು ಸತ್ಯ ಸಂಗತಿಯಾಗಿದೆ. ಹೀಗಾಗಿ ಅಧಿಕಾರ ಬಹಳ ಕಡೆ ನಮ್ಮ ವಶದಲ್ಲಿಲ್ಲ. ಈ ದೆಸೆಯಿಂದ ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷವನ್ನು ಎಲ್ಲೆಡೆ ವಿಸ್ತರಿಸಿ ಅಧಿಕಾರದ ಚುಕ್ಕಾಣಿ ಹಿಡಿಯಲು ವರಿಷ್ಠರ ಸಮ್ಮುಖದಲ್ಲಿ ಪಕ್ಷ ತೀರ್ಮಾನಿಸಿದ್ದು 8 ಕ್ಷೇತ್ರ, 9 ಮಂಡಲದ ಗ್ರಾಮೀಣ ಭಾಗಗಳಲ್ಲಿ ಯುವ ಜನರನ್ನು ತಲುಪಿ, ಪಕ್ಷ ಸಂಘಟನೆ ಬಲಗೊಳಿಸಲು ಪ್ರಶಿಕ್ಷಣ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಕ್ಷೇತ್ರದ ಅಭಿವೃದ್ದಿ ನನ್ನ ಕನಸಾಗಿದೆ. ಕೆರೆಗಳಿಗೆ ನೀರು ಬರುವ ಪೂರ್ವ ಯೋಜಿತವಾಗಿ ಗ್ರಾಮಗಳಲ್ಲಿನ ಕೆರೆಗಳಲ್ಲಿ ಹೂಳೆತ್ತಿ ಸ್ವಚ್ಛಗೊಳಿಸಲಾಗಿತ್ತು. ಇದೀಗ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ನೀರು ಬರಲಿದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಉಪಾಧ್ಯಕ್ಷ ಡಿ.ವಿ. ನಾಗಪ್ಪ ,ಮಂಡಲ ಅಧ್ಯಕ್ಷ ಪಲ್ಲಾಗಟ್ಟೆ ಮಹೇಶ್, ಜಿ.ಪಂ. ಸದಸ್ಯರಾದ ಎಸ್ ಕೆ ಮಂಜುನಾಥ್, ಯರಬಳ್ಳಿ ಸಿದ್ದಪ್ಪ, ಜಿಪಂ ಮಾಜಿ ಸದಸ್ಯ ಸೊಕ್ಕೆ ನಾಗರಾಜ್, ತಾಪಂ ಸದಸ್ಯ ಸಿದ್ದೇಶ್, ಪಪಂ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಎಸ್.ಟಿ. ಮೋರ್ಚಾದ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಸ್ಮಾರ್ಟ್ ಸಿಟಿಯಿಂದ ಬೆಂಕಿ ನಂದಿಸುವ ಫೋಮಿಂಗ್ ವಾಹನ

ದಾವಣಗೆರೆ, ಡಿ. 4 - ಸ್ಮಾರ್ಟ್ ಸಿಟಿ ಯೋಜನೆಯಡಿ ಸುಮಾರು 1 ಕೋಟಿ ರೂ.ಗಳ ವೆಚ್ಚದ ಬೆಂಕಿ ನಂದಿಸುವ ಸಲಕರಣೆಗಳನ್ನು ಅಗ್ನಿಶಾಮಕ ದಳಕ್ಕೆ ಪೂರೈಸಲಾಗುತ್ತಿದ್ದು, ಇದರಲ್ಲಿ ಫೋಮಿಂಗ್ ವಾಹನ ಸಹ ಸೇರಿದೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ ತಿಳಿಸಿದ್ದಾರೆ.

ಸಾಮಾನ್ಯ ಅಗ್ನಿಶಾಮಕ ವಿಧಾನದಲ್ಲಿ 20 ಸಾವಿರ ಲೀಟರ್‌ನಿಂದ ಆಗುವ ಪರಿಣಾಮ, ಫೋಮ್ ಮೂಲಕ ಕೇವಲ 5 ಸಾವಿರ ಲೀಟರ್‌ನಿಂದ ಆಗುತ್ತದೆ ಎಂದವರು ವಿವರಿಸಿದ್ದಾರೆ.

**ನೀರಿಗಿಂತ ನಾಲ್ಕು ಪಟ್ಟು ಹೆಚ್ಚು ಕ್ಷಮತೆ - ಬಸವಪ್ರಭು ಶರ್ಮ ಅಗ್ನಿಶಾಮಕ ಅಧಿಕಾರಿ**

ಪ್ರಸಕ್ತ ನೀರು ಹಾಗೂ ಫೋಮ್ ಪ್ರತ್ಯೇಕವಾಗಿರುತ್ತವೆ. ಅಗತ್ಯವಾದ ಸಂದರ್ಭದಲ್ಲಿ ಫೋಮ್ ಯಂತ್ರವನ್ನು ಅಳವಡಿಕೆ ಮಾಡಿಕೊಳ್ಳಬೇಕಾಗುತ್ತದೆ. ಸ್ಮಾರ್ಟ್ ಸಿಟಿ ಪೂರೈಸಲಿರುವ ಯಂತ್ರ ಫೋಮ್ ಸಿದ್ಧವಾಗಿಯೇ ಬರುತ್ತದೆ. ಇದರಲ್ಲಿ 500 ಲೀಟರ್‌ನಷ್ಟು ಫೋಮ್ ಇರುತ್ತದೆ ಎಂದವರು ಹೇಳಿದ್ದಾರೆ.

ಈ ಬಗ್ಗೆ ವಿವರ ನೀಡಿರುವ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಶುಕ್ರವಾರದಂದು 13.5 ಲಕ್ಷ ರೂ.ಗಳ ಬೆಂಕಿ ನಂದಿಸುವ ಉಪಕರಣಗಳನ್ನು ಅಗ್ನಿಶಾಮಕ ದಳಕ್ಕೆ ನೀಡಲಾಗಿದೆ. ಇನ್ನೊಂದು ತಿಂಗಳಲ್ಲಿ ಫೋಮಿಂಗ್ ವಾಹನ ಸೇರಿದಂತೆ ಒಟ್ಟು 1 ಕೋಟಿ ರೂ. ಮೌಲ್ಯದ ಉಪಕರಣಗಳನ್ನು ನೀಡಲಾಗುವುದು ಎಂದು ಹೇಳಿದ್ದಾರೆ. ಒಂದು ಬೊಲೆರೋ ಜೀಪ್, ಹೆಚ್ಚಿನ ಪ್ರಮಾಣದಲ್ಲಿ ನೀರು ಸೆಳೆಯುವ ಮೂಲಕ ಪ್ರವಾಹದಲ್ಲಿ ನೆರವಾಗುವ ಹಾಗೂ ಬೆಂಕಿ ನಂದಿಸಲು ಉಪಯುಕ್ತವಾಗಿರುವ 4 ಪೋರ್ಟಬಲ್ ಪೆಟ್ರೋಲ್ ಪಂಪ್, ರೆಸ್ಕ್ಯೂ ಸಾ, ಹತ್ತು ಉನ್ನತ ಟಾರ್ಚ್‌ಗಳು ಹಾಗೂ 20 ಫೈರ್ ಬೀಟರ್‌ಗಳನ್ನು ಅಗ್ನಿಶಾಮಕ ದಳಕ್ಕೆ ಶುಕ್ರವಾರ ಸಚಿವ ಭೈರತಿ ಬಸವರಾಜ್ ಅವರು ಹಸ್ತಾಂತರಿಸಿದ್ದಾರೆ.

## ಗ್ರಾಮ ಪಂಚಾಯ್ತಿ ಚುನಾವಣೆ ಗಂಭೀರವಾಗಿ ಪರಿಗಣಿಸಿ : ಡಿಕೆಶಿ

ಬೆಂಗಳೂರು, ಡಿ. 5 - ಗ್ರಾಮ ಪಂಚಾಯಿತಿ ಚುನಾವಣೆಯನ್ನು ಗಂಭೀರ ಹಾಗೂ ಜವಾಬ್ದಾರಿಯುತವಾಗಿ ತೆಗೆದುಕೊಂಡು ಕೆಲಸ ಮಾಡುವಂತೆ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕರೆ ನೀಡಿದ್ದಾರೆ.

ಯಾರು ತಮ್ಮ ಬೂತ್‌ಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗೆ ಮುನ್ನಡೆ ಕೊಡಿಸುತ್ತಾರೋ ಅವರೇ ನಾಯಕರು ಎಂದು ಹೇಳಿದ್ದಾರೆ.

ಪಕ್ಷದ ಸಿದ್ಧಾಂತದಡಿಯೇ ಕಾರ್ಯಕರ್ತರು ಕೆಲಸ ಮಾಡಬೇಕು. ಶಾಸಕರು, ಸಂಸದರಿಗೆ ಇಲ್ಲದ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ಇದೆ. 27 ಇಲಾಖೆಗಳಲ್ಲಿ ನೇರವಾಗಿ ಸಹಾಯ ಮಾಡುವ ಅವಕಾಶವಿದೆ. ಹೀಗಾಗಿ ಚುನಾವಣೆಯನ್ನು ಬಹಳ ಜವಾಬ್ದಾರಿಯುತವಾಗಿ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ. ಪಂಚಾಯಿತಿಗಳಲ್ಲಿ ಪಕ್ಷದ ಅಭ್ಯರ್ಥಿ ಯಾರಾಗಬೇಕೆಂದು ಅಲ್ಲಿನ ಕಾರ್ಯಕರ್ತರೇ ತೀರ್ಮಾನ ತೆಗೆದುಕೊಂಡು, ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದವರು ಹೇಳಿದ್ದಾರೆ.

ಕಾರ್ಯಕರ್ತರಲ್ಲಿ ಸಮನ್ವಯತೆ ಸಾಧಿಸುವ ಉದ್ದೇಶದಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಿಗೆ ವೀಕ್ಷಕರನ್ನು ನೇಮಿಸಲಾಗಿದ್ದು, ಶಿವಕುಮಾರ್ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ.

## ಕರೂರಿನಲ್ಲಿ ಇಂದು ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ

ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ನಗರ ಘಟಕದಿಂದ ಇಂದು ಬೆಳಿಗ್ಗೆ 11 ಗಂಟೆಗೆ ನಗರದ 45 ನೇ ವಾರ್ಡಿನ ಕರೂರು ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 64ನೇ ಪರಿನಿರ್ವಾಣ ಕಾರ್ಯಕ್ರಮ ನಡೆಯಲಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಎನ್. ಮಂಜಣ್ಣ 'ಡಾ॥ ಬಿ.ಆರ್. ಅಂಬೇಡ್ಕರ್ ವಿಚಾರಧಾರೆ ಹಾಗೂ ಪ್ರಸಕ್ತ ದಲಿತರಲ್ಲಿ ಶೈಕ್ಷಣಿಕ ವ್ಯವಸ್ಥೆ' ಕುರಿತು ಮಾತನಾಡಲಿದ್ದು, ಪಾಲಿಕೆ ಸದಸ್ಯ ಉದಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಕೌಸರ್ ರೇಷ್ಮಾ, ಪೊಲೀಸ್ ಉಪ ನಿರೀಕ್ಷಕ ಟಿ.ಆರ್. ಕೃಷ್ಣಪ್ಪ, ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಟಿ.ರವಿಕುಮಾರ್, ತಾಲ್ಲೂಕು ಸಂಚಾಲಕ ಹೆಚ್.ಮಲ್ಲಿಕಾರ್ಜುನ್ ಸೇರಿದಂತೆ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಹರಿಹರ : ಇಂದು ಉಚಿತ ಕಾರ್ಯಾಗಾರ

ಮಂಡಲೂರು ಎಜುಕೇಶನ್ ಸೊಸೈಟಿ ಮತ್ತು ಶ್ರೀ ಚಾಣಕ್ಯ ಕೋಚಿಂಗ್ ಸೆಂಟರ್ ವತಿಯಿಂದ ವಿವಿಧ ಹುದ್ದೆಗಳ ಪರೀಕ್ಷಾ ತಯಾರಿಗೆ ಸಂಬಂಧಿಸಿದಂತೆ ನಗರದ ಗುರುಭವನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಉಚಿತ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ಕಾರ್ಯಾಗಾರವನ್ನು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಬಿ.ಸಿ. ತಹಶೀಲ್ದಾರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್‌ಜೆವಿಪಿ ಕಾಲೇಜು ಮುಖ್ಯಸ್ಥ ಎಸ್.ವಿ. ಸಿದ್ದಯ್ಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕಿ ಶ್ವೇತಾ ವೀರೇಶ್ ಕತ್ತಲಗೇರಿ, ವಕೀಲರಾದ ಎನ್. ಮೀನಾಕ್ಷಿ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಹೆಚ್. ಚಿದಂಬರ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಬಿಎಸ್ಸೆನ್ನೆಲ್ ಕಾರ್ಯಾಗಾರ

ದಾವಣಗೆರೆ ಡಿ.5 - ಬಿಎಸ್ಸೆನ್ನೆಲ್ ದೂರವಾಣಿ ಸಂಪರ್ಕ ಸೇವೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಗ್ರಾಹಕರಿಗೆ ಕಾರ್ಯಾಗಾರವನ್ನು ಗೂಗಲ್ ಮೀಟ್ ಮೂಲಕ ನಾಡಿದ್ದು ದಿನಾಂಕ 7 ರ ಸೋಮವಾರ ಬೆಳಿಗ್ಗೆ 10.30 ರಿಂದ 11.30 ರವರೆಗೆ ಏರ್ಪಡಿಸಲಾಗಿದೆ. ಗ್ರಾಹಕರು https://meet.google.com ಲಿಂಕ್ ಕ್ಲಿಕ್ ಮಾಡಿ ಆನ್‌ಲೈನ್ ಮೂಲಕ ವರ್ಚ್ಯುವಲ್ ಸಭೆಯಲ್ಲಿ ಪಾಲ್ಗೊಳ್ಳಬಹುದು. ಬಿಎಸ್ಸೆನ್ನೆಲ್ ಸೇವೆಗೆ ಸಂಬಂಧಿಸಿದಂತೆ ಯಾವುದಾದರು ತೊಂದರೆಗಳಿದ್ದಲ್ಲಿ ಗ್ರಾಹಕರು ನಾಳೆ ದಿನಾಂಕ 6 ರೊಳಗಾಗಿ sdemisdvg@gmail.com ವಿಳಾಸಕ್ಕೆ ಇ-ಮೇಲ್ ಮಾಡಬಹುದೆಂದು ಬಿಎಸ್ಸೆನ್ನೆಲ್ ಸಹಾಯಕ ಜನರಲ್ ಮ್ಯಾನೇಜರ್ ತಿಳಿಸಿದ್ದಾರೆ.

## ರೈತರಲ್ಲಿ ಸ್ಪರ್ಧಾತ್ಮಕತೆ ಬೆಳೆಸಲು ಬೆಳೆ ತರಬೇತಿ

ಬೆಂಗಳೂರು, ಡಿ. 5 - ಅಸಂಘಟಿತ ವಲಯದಲ್ಲಿರುವ ಸಣ್ಣ ಆಹಾರ ಸಂಸ್ಕರಣಾ ಉದ್ದಿಮೆಗಳನ್ನು, ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೈತರಿಗೆ ಬೆಳೆ ತರಬೇತಿ ನೀಡಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದ್ದಾರೆ.

ಆತ್ಮನಿರ್ಭರ್ ಭಾರತ ಅಭಿಯಾನದ ಭಾಗವಾಗಿ ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಉದ್ದಿಮೆಗಳ ಮಂತ್ರಾಲಯವು ಪ್ರಧಾನ ಮಂತ್ರಿ ಸಣ್ಣ ಆಹಾರ ಸಂಸ್ಕರಣಾ ಉದ್ಯಮಗಳ ಕ್ರಮಬದ್ಧಗೊಳಿಸುವಿಕೆ ಯೋಜನೆಯನ್ನು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಅಸಂಘಟಿತ ವಲಯದಲ್ಲಿರುವ ಸಣ್ಣ ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಿಎಫ್ ಟಿಆರ್‌ಐ (ಕೌನ್ಸಿಲ್ ಆಫ್ ಸೈಂಟಿಫಿಕ್ ಮತ್ತು ಇಂಡಸ್ಟ್ರಿಯಲ್ ರಿಸರ್ಚ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ, ಮೈಸೂರು) ಮೈಸೂರಿನಲ್ಲಿ ರೈತರಿಗೆ ತರಬೇತಿ ನೀಡುವ ಬಗ್ಗೆ ಸಿಎಫ್ ಟಿಆರ್‌ಐ ಮುಖ್ಯಸ್ಥರು ಹಾಗೂ ವಿಜ್ಞಾನಿಗಳೊಂದಿಗೆ ಮಹತ್ವದ ಸಭೆ ನಡೆಸುವ ಸಂದರ್ಭದಲ್ಲಿ ಈ ಸಲಹೆ, ಸೂಚನೆ ನೀಡಿದರು.

ಜನವರಿ 11 ರಿಂದ ಮಾರ್ಚ್ 30 ರವರೆಗೆ ತರಬೇತಿ ನಡೆಸಲು ಉದ್ದೇಶಿಸಲಾಗಿದ್ದು, ಕೃಷಿ ಇಲಾಖೆಯ ಕೆಪೆಕ್ (ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ) 50 ಮಂದಿಯಂತೆ ಪ್ರತಿ ತಾಲ್ಲೂಕಿನಿಂದ 2 ರೈತರನ್ನು ಆಯ್ಕೆಮಾಡಿ ಒಂದು ಗುಂಪು ರಚಿಸಿ ಒಟ್ಟು 500 ಜನರಿಗೆ ತರಬೇತಿ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು, 6 ದಿನ ನಡೆಯುವ ಈ ತರಬೇತಿಯಲ್ಲಿ ಕೊನೆಯ 2 ದಿನಗಳನ್ನು ಮಾರ್ಕೆಟಿಂಗ್, ಬ್ರಾಂಡ್ ಗಾಗಿ ಹೆಚ್ಚಿನ ಒತ್ತು ನೀಡಲು ಕೃಷಿ ಸಚಿವರು ಸಲಹೆ ನೀಡಿದರು. ವಿಶೇಷವಾಗಿ ಮೆಕ್ಕೆಜೋಳ, ತೊಗರಿ ಹಾಗೂ ಸಿರಿಧಾನ್ಯಗಳ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಸಿದರು.

## 2020ನೇ ಸಾಲಿನ ಕೃಷಿ ಬಿಲ್ ಹಿಂಪಡೆಗೆ ಆಗ್ರಹ

ದಾವಣಗೆರೆ, ಡಿ.5- 2020ನೇ ಸಾಲಿನ ಕೃಷಿ ಬಿಲ್ ಹಿಂಪಡೆಯುವಂತೆ ಭಾರತೀಯ ರಾಷ್ಟ್ರೀಯ ಯುವ ಕಾಂಗ್ರೆಸ್ ವಕ್ತಾರ ಹೆಚ್.ಜೆ. ಮೈನುದ್ದೀನ್ ಆಗ್ರಹಿಸಿದರು.

130 ಕೋಟಿಗಿಂತಲೂ ಹೆಚ್ಚು ಜನರಿಗೆ ಅನ್ನದಾತರಾಗಿರುವಂತಹ ರೈತರು ಈಗಾಗಲೇ ನೂರಾರು ಕಷ್ಟಗಳನ್ನು ಎದುರಿಸುತ್ತಿರುವ ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ವಿಧಿಸಿರುವ 2020 ನೇ ಸಾಲಿನ ಕೃಷಿ ಬಿಲ್ಲನ್ನು ಹಿಂಪಡೆಯಬೇಕೆಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ 2022 ಕ್ಕೆ ರೈತರ ಆದಾಯವನ್ನು ದುಪ್ಪಟ್ಟು ಮಾಡುತ್ತೇವೆ ಎಂದು ನಮ್ಮ ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆಶ್ವಾಸನೆ ನೀಡಿದ್ದರು.

ಆದರೆ, 2019-20ರ ಆರ್ಥಿಕ ಸರ್ವೆ ಪ್ರಕಾರ 2016-17ರಲ್ಲಿ ಕೃಷಿ ಅಭಿವೃದ್ಧಿ ಶೇ. 6.3ರಷ್ಟು ಹೊಂದಿದ್ದು, 2019-20ರ ಪ್ರಕಾರ ಶೇ. 2.8 ರಷ್ಟು ಹೊಂದಿರುತ್ತದೆ. ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಇಳಿಕೆಯಾಗುತ್ತಿದ್ದು, ಯಾವುದೇ ರೀತಿಯಲ್ಲಿ ಪ್ರಗತಿ ಹೊಂದುತ್ತಿಲ್ಲ. ಆದ್ದರಿಂದ ಕೃಷಿ ಬಿಲ್‌ನಲ್ಲಿ ರೈತರಿಗೆ ಅನುಕೂಲವಾಗುವಂತಹ ಯಾವುದೇ ಅಂಶವನ್ನು ಹೊಂದಿರದೆ, ಬಂಡವಾಳ ಶಾಹಿಗಳ ಪರವಾಗಿ ಈ ಕೃಷಿ ಬಿಲ್ ಇದ್ದು, ರೈತರು ಇನ್ನೂ ಪರಿತಪಿಸುವ ಪರಿಸ್ಥಿತಿ ಎದುರಾಗಿದೆ. ಇದನ್ನು ಪ್ರತಿಭಟಿಸಲು ಬರುವ ರೈತರಿಗೆ ಪ್ರತಿಭಟನೆಗೆ ಅವಕಾಶ ಕೊಡದೇ ಅವರುಗಳನ್ನು ಅಲ್ಲಿಯೇ ಬಂಧಿಸುವ ಮತ್ತು ಅವರ ಮೇಲೆ ದೌರ್ಜನ್ಯ ನಡೆಯುತ್ತಲಿದೆ ಎಂದು ಆರೋಪಿಸಿದರು.

ಈ ದೇಶದ ಜಿಡಿಪಿಯಲ್ಲಿ ಶೇ.17ರಷ್ಟು ಆದಾಯ ಕೃಷಿ ಮೂಲದಿಂದಲೇ ಬರುತ್ತಿದ್ದು, ಕೃಷಿ ಬಿಲ್‌ನಲ್ಲಿ ಎಂಎಸ್ ಪಿ ಕೂಡ ಬಂದಿಲ್ಲ. ಒಬ್ಬ ಪಾನ್ ಕಾರ್ಡ್ ಹೊಂದಿರುವಂತವನು ರೈತರ ಬೆಳೆಗಳನ್ನು ಖರೀದಿಸಬಹುದಾಗಿದೆ.

ಪಾನ್ ಕಾರ್ಡ್ ಹೊಂದಿರುವ ವ್ಯಕ್ತಿ ಮೋಸ ಮಾಡಿದರೆ ರೈತರು ತಮಗಾದ ಅನ್ಯಾಯವನ್ನು ಪೊಲೀಸ್ ಠಾಣೆಯಲ್ಲಾಗಲೀ, ನ್ಯಾಯಾಲಯದಲ್ಲಾಗಲೀ ಹೇಳಿಕೊಳ್ಳಲು ಬರುವುದಿಲ್ಲ. ಇಂತಹ ಅನೇಕ ಅಂಶಗಳು ಕಿಸಾನ್ ಬಿಲ್ಲಿನಲ್ಲಿ ಜಾರಿಗೆ ತಂದಿದ್ದು, ಕೂಡಲೇ ಕಿಸಾನ್ ಬಿಲ್ಲನ್ನು ಹಿಂಪಡೆಯಬೇಕೆಂದರು.

ಪತ್ರಿಕಾಗೋಷ್ಠಿಯಲ್ಲಿ ಮೊಹಮ್ಮದ್ ಸಾಧಿಕ್, ಸಾಗರ್, ಬಾಷಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೋವಿಡ್ ತಪಾಸಣೆಗೆ ಸಹಕರಿಸಲು ಡಿಸಿ ಮನವಿ

ದಾವಣಗೆರೆ, ಡಿ.5- ಕೋವಿಡ್ ರೋಗವನ್ನು ನಿಯಂತ್ರಿಸುವ ಸಲುವಾಗಿ ಸರ್ವೇಕ್ಷಣಾ ಸಿಬ್ಬಂದಿಗಳು ಸಾರ್ವಜನಿಕರ ಮನೆ ಬಾಗಿಲಿಗೆ ಬಂದಂತಹ ಸಂದರ್ಭದಲ್ಲಿ ಸಾರ್ವಜನಿಕರು ಮುಂದೆ ನಿಂತು ತಪಾಸಣೆಗೆ ಸಹಕರಿಸದೇ ಇರುವುದು ಜಿಲ್ಲೆಯಾದ್ಯಂತ ಕಂಡುಬಂದಿದೆ.

ಕೋವಿಡ್ ರೋಗವನ್ನು ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿದಲ್ಲಿ ಅಗತ್ಯ ಚಿಕಿತ್ಸೆ ನೀಡಿ ಸಂಭವಿಸಬಹುದಾದ ಸಾವುಗಳನ್ನು ತಪ್ಪಿಸಬಹುದಾಗಿದೆ. ರೋಗ ಲಕ್ಷಣಗಳು ಇದ್ದಾಗ್ಯೂ ಸಹ ಸರ್ಕಾರದ ನಿಯಮಾವಳಿಗಳ ಪ್ರಕಾರ ತಪಾಸಣೆಗೆ ಒಳಪಡಿಸಿಕೊಳ್ಳದೆ ಮನೆಯಲ್ಲಿಯೇ ಇದ್ದುಕೊಂಡು ರೋಗ ಲಕ್ಷಣ ಉಲ್ಬಣವಾದ ಸಂದರ್ಭದಲ್ಲಿ ಆಸ್ಪತ್ರೆಗಳಿಗೆ ಬರುತ್ತಿರುವುದು ಕಂಡುಬಂದಿದೆ.

ಸಾರ್ವಜನಿಕರು ಕೋವಿಡ್ ನಿಯಂತ್ರಣದ ಸಲುವಾಗಿ ತಮ್ಮ ವಾರ್ಡ್, ಗ್ರಾಮಗಳ ಮನೆ ಬಾಗಿಲಿಗೆ ಸರ್ವೇಕ್ಷಣಾ ಸಿಬ್ಬಂದಿಗಳು ತಪಾಸಣೆಗೆ ಬಂದಾಗ ತಪಾಸಣೆಗೆ ಒಳಡುವಂತೆ ಜಿಲ್ಲಾಧಿಕಾರಿ ಕೋರಿದ್ದಾರೆ.

## ಮೀನು ಉತ್ಪನ್ನ, ಮಾರಾಟಗಾರರ ಸಭೆ

ಹರಪನಹಳ್ಳಿ, ಡಿ.5- ಪಟ್ಟಣದ ಮೀನು ಉತ್ಪನ್ನ ಮತ್ತು ಮಾರಾಟಗಾರರ ಸಹಕಾರ ಸಂಘದ ಕಚೇರಿಯಲ್ಲಿ ಇದೇ ದಿನಾಂಕ 19 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಮೀನು ಉತ್ಪನ್ನ ಮತ್ತು ಮಾರಾಟಗಾರರ ಸಹಕಾರ ಸಂಘದ ಮಹಾಸಭೆ ನಡೆಯಲಿದೆ.

## ಬಡ ದೇವಾಂಗ ಪದವಿ ವಿದ್ಯಾರ್ಥಿಗಳಿಗೆ ಶುಲ್ಕ ನೆರವು

ದಾವಣಗೆರೆ, ಡಿ.5- ಬಿಕಾಂ, ಬಿಎ, ಬಿಎಸ್ಸಿ, ಫೈನ್ ಆರ್ಟ್ಸ್, ಐಟಿಐ, ಡಿಪ್ಲೋಮಾ ಇನ್ ಪ್ಯಾರಾ ಮೆಡಿಕಲ್ ಸೈನ್ಸ್ ಸೇರಿದಂತೆ ಪದವಿಗಳ ವ್ಯಾಸಂಗಕ್ಕಾಗಿ ಸರ್ಕಾರಿ ಕಾಲೇಜುಗಳಿಗೆ ಸೇರ ಬಯಸುವ ದೇವಾಂಗ ಸಮಾಜದ ಬಡ ವಿದ್ಯಾರ್ಥಿಗಳಿಗೆ ದೇವಾಂಗ ವಿದ್ಯಾರ್ಥಿ ನಿಲಯದಿಂದ ಪೂರ್ಣ ಕಾಲೇಜು ಶುಲ್ಕ ಭರಿಸಲಾಗುವುದು.

ಹೆಚ್ಚಿನ ಮಾಹಿತಿಗೆ ಅಧ್ಯಕ್ಷರು, ಡಾ. ದೇವೇಂದ್ರಪ್ಪ-9845232378, ಕೆ.ಜಿ. ಏಕಾಂಬರಪ್ಪ-9448812703, ಸಹ ಕಾರ್ಯದರ್ಶಿ ಜಿ.ಟಿ. ಕುಮಾರ್-9844390973 ಸಂಪರ್ಕಿಸುವುದು.

## ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರಾದ ದಾವಣಗೆರೆ ನಗರದ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿಯಾದ **ಶ್ರೀ ಶಂಕರ್ ಎನ್. ವಿಠಲ್‌ಕರ್** ರವರ ಪರವಾಗಿ ವಕೀಲರಾದ **ಚೇತನ್‌ಕುಮಾರ್ ಬಿ.ಜಿ.** ಆದ ನಾನು ಸಾರ್ವಜನಿಕರ ಗಮನಕ್ಕೆ ತಿಳಿಸುವುದೇನೆಂದರೆ,

ಈ ಹಿಂದೆ **ರಾಜಶೇಖರ್ ಬಿನ್ ಬಸಪ್ಪ** ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ ಇವರಿಂದ ಈ ಕೆಳಗೆ ತಿಳಿಸಿದ ಷೆಡ್ಯೂಲ್ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಳ್ಳಲು **ದಿನಾಂಕ : 30.10.2010** ರಂದು ಕ್ರಯದ ಕರಾರನ್ನು ಮಾಡಿಕೊಂಡಿದ್ದು ಈ ಕ್ರಯದ ಕರಾರಿನಂತೆ ಕ್ರಯಪತ್ರ ಮಾಡಿಕೊಡಲು ವಿಫಲವಾಗಿದ್ದರಿಂದ ನನ್ನ ಕಕ್ಷಿದಾರರಾದ **ಶಂಕರ್ ಎನ್. ವಿಠಲ್‌ಕರ್** ಇವರು ದಾವಣಗೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಮ್ ಇವರ ನ್ಯಾಯಾಲಯದಲ್ಲಿ **OS. No. 46/2017** ನಿರ್ದಿಷ್ಟ ಪರಿಹಾರದ ದಾವೆ ಸಲ್ಲಿಸಿದ್ದು ಇರುತ್ತದೆ. ಈ ದಾವೆಯಲ್ಲಿ ಎದುರುದಾರರಾದ ರಾಜಶೇಖರ್ ಬಿನ್ ಬಸಪ್ಪ ಮತ್ತು ನನ್ನ ಕಕ್ಷಿದಾರರಾದ **ಶ್ರೀ ಶಂಕರ್. ಎನ್.ವಿಠಲ್‌ಕರ್** ರವರು ರಾಜೀ ಮಾಡಿಕೊಂಡಿದ್ದು, ಸದರಿ ರಾಜೀ ಅರ್ಜಿಯಂತೆ **ರಾಜಶೇಖರ್ ಬಿನ್ ಬಸಪ್ಪ** ರವರು ಕ್ರಯದ ಕರಾರು ಪತ್ರದಲ್ಲಿನ ಮುಂಗಡ ಹಣಕ್ಕೆ ಶೇಕಡ 8 ರಷ್ಟು ಬಡ್ಡಿಯನ್ನು 1 ವರ್ಷದ ಅವಧಿಯೊಳಗೆ ನೀಡುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ಈ ದಿನದವರೆಗೂ ಎದುರುದಾರರಾದ ರಾಜಶೇಖರ್ ಬಿನ್ ಬಸಪ್ಪ ರವರು ನನ್ನ ಕಕ್ಷಿದಾರರಿಗೆ ಅಸಲು ಮತ್ತು ಬಡ್ಡಿಯ ಹಣವನ್ನು ನೀಡಿರುವುದಿಲ್ಲ. ಈ ರಾಜೀ ಅರ್ಜಿ 4ನೇ ಷರತ್ತಿನಂತೆ ಈ ದಾವೆಯ ಷೆಡ್ಯೂಲ್ ಸ್ವತ್ತನ್ನು ರಾಜಶೇಖರ್ ರವರು ಮಾರಾಟ ಮಾಡುವ ಅಥವಾ ಬೇರೆಯವರಿಗೆ ಪರಭಾರೆ ಮಾಡಬೇಕಾದ ಸಂದರ್ಭದಲ್ಲಿ ನನ್ನ ಕಕ್ಷಿದಾರರಿಂದ ವಾದಿಯ ಲಿಖಿತ ಸಮ್ಮತಿ ಪಡೆಯತಕ್ಕದ್ದು ಎಂದು ಸಮ್ಮತಿಸಿರುತ್ತಾರೆ.

ಈ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ Ex **218/2019** ಪ್ರಕರಣ ಮಾನ್ಯ ದಾವಣಗೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಮ್ ಇವರ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದೆ.

ಆದಾಗ್ಯೂ, **ರಾಜಶೇಖರ್** ರವರು ಸದರಿ ಪೆಡೂಲ್ (ದಾವಾ ಸ್ವತ್ತು)ನ್ನು ನನ್ನ ಕಕ್ಷಿದಾರರಾದ **ಶಂಕರ್.ಎನ್. ವಿಠಲ್‌ಕರ್** ರವರಿಂದ ಲಿಖಿತ ಒಪ್ಪಿಗೆ ಇಲ್ಲದೇ ಮಾರಾಟ ಮಾಡಲು ಹಕ್ಕು ಇಲ್ಲದಿದ್ದರೂ ಷೆಡ್ಯೂಲ್ ಸ್ವತ್ತನ್ನು ಪರಭಾರೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಆದ್ದರಿಂದ, **ರಾಜಶೇಖರ್**‌ರವರಿಂದ ಮತ್ತು ಅವರಿಂದ ಅಧಿಕಾರ ಪತ್ರ (ಜಿ.ಪಿ.ಎ) ಪಡೆದ ಯಾವುದೇ ವ್ಯಕ್ತಿಯಿಂದ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ವ್ಯವಹಾರ ಮಾಡದಂತೆ ಈ ಮೂಲಕ ಸಾರ್ವಜನಿಕ ತಿಳುವಳಿಕೆ ನೋಟೀಸನ್ನು ಹೊರಡಿಸಲಾಗಿದೆ.

ಆದಾಗ್ಯೂ ಸಾರ್ವಜನಿಕರು ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಕುರಿತಾಗಿ ವ್ಯವಹರಿಸಿದಲ್ಲಿ ನನ್ನ ಕಕ್ಷಿದಾರರ ಹಕ್ಕಿಗೆ ಚ್ಯುತಿ ಬಂದಂತಾಗುತ್ತದೆ. ಅಲ್ಲದೇ ಅಂತಹವರು ಯಾವುದೇ ರೀತಿಯ ಹಕ್ಕು, ಸ್ವಾಧೀನ ಹೊಂದಲು ಕಾನೂನಿನ ಅಡಿಯಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ, ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಕುರಿತಾಗಿ ಸಾರ್ವಜನಿಕರು ಯಾವುದೇ ರೀತಿಯ ವ್ಯವಹಾರ ಮಾಡದಂತೆ ಹೊರಡಿಸಿರುವ ಸಾರ್ವಜನಿಕ ತಿಳುವಳಿಕೆ ನೋಟೀಸ್.

**ಷೆಡ್ಯೂಲ್ :**

**ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಸೇರಿದ ದಾವಣಗೆರೆ ತಾಲ್ಲೂಕು ದಾವಣಗೆರೆ ಜಿಲ್ಲೆ, ದೊಡ್ಡಬೂದಿಹಾಳ್ ಗ್ರಾಮದಲ್ಲಿ ಬರುವ ಕೃಷಿ ಜಮೀನು ರಿ.ಸ.ನಂ.98/ಪಿ1(ರಿ.ಸ.ನಂ.98/3) 1 ಎಕರೆ 28 ಗುಂಟೆ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ :ರಿ.ಸ.ನಂ.99 ಜಮೀನು, ಪಶ್ಚಿಮಕ್ಕೆ : 30 ಅಡಿ ರಸ್ತೆ, ರಾಜಶೇಖರ್‌ರವರ ಉಳಿದ ಜಮೀನು, ಉತ್ತರಕ್ಕೆ : ಸರ್ವೆ ನಂ.98 ಕುಮಾರ್‌ರವರ ಜಮೀನು, ದಕ್ಷಿಣಕ್ಕೆ : ದೇವರಹಟ್ಟಿ ಬಸಪ್ಪನವರ ಜಮೀನು.**

**ಶಂಕರ್ ಎನ್. ವಿಠಲ್‌ಕರ್**
ಕಕ್ಷಿದಾರರು

**ಚೇತನ್‌ಕುಮಾರ್ ಬಿ.ಜಿ.**
ವಕೀಲರು, ದಾವಣಗೆರೆ.

# ರಾಶಿ ಭವಿಷ್ಯ

**ದಿನಾಂಕ : 06.12.2020 ರಿಂದ 12.12.2020**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೆಲವೊಮ್ಮೆ ನಿಮ್ಮ ಕೈಲಾಗದ ಕೆಲಸಗಳನ್ನು ಮಾಡಲು ಹೋಗಿ ಕೈ ಸುಟ್ಟುಕೊಳ್ಳುವ ಸಂಭವ. ಪರರ ಪ್ರೇರಣೆಯಿಂದ ರಾಜಕೀಯ ರಂಗದಲ್ಲಿ ಆಸಕ್ತಿ ಮೂಡದೆ. ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ರಂಗ ಉತ್ತಮವಲ್ಲ. ಆರಂಭದಿಂದ ಮಧ್ಯದ ವರೆಗೆ ಹಣದ ಹರಿವು ಸಾಧಾರಣವಾಗಿರುವುದರಿಂದ ಖರ್ಚಿನ ಮೇಲೆ ಹಿಡಿತವಿರಲಿ. ಉತ್ತಮ, ಗಣ್ಯ ವ್ಯಕ್ತಿಗಳು ಮಾಧ್ಯಮಗಳ ಮುಂದೆ ಮಾತನಾಡುವಾಗ ಮಾತಿನ ಮೇಲೆ ಹತೋಟಿ ಇರಲಿ. ಮಿಠಾಯಿ ಮಾರಾಟಗಾರರಿಗೆ ಹೆಚ್ಚಿನ ವಹಿವಾಟು. ಷೇರು ವ್ಯವಹಾರ ದಲ್ಲಿ ಲಾಭ. ಆರೋಗ್ಯದ ವಿಷಯದಲ್ಲಿ ಉದಾಸೀನ ಬೇಡ. ಸಾಧ್ಯವಾದಷ್ಟು ಅನ್ನದಾನ ಮಾಡಿ. ಗುರುಚರಿತ್ರೆ ಪಾರಾಯಣ ಮಾಡಿ. ಸೋಮ, ಮಂಗಳ, ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಯಾವುದೇ ಕೆಲಸಗಳನ್ನು ಮಾಡುವ ಮೊದಲು ಸ್ವಂತ ನಿರ್ಧಾರ ತೆಗೆದು ಕೊಳ್ಳಿ. ಮತ್ತೊಬ್ಬರ ಒತ್ತಡಕ್ಕೆ ಮಣಿಯಬೇಡಿ. ಖಾಸಗಿ ನೌಕರರ ವೃತ್ತಿಯಲ್ಲಿ ಹೊಂದಾಣಿಕೆ ಅನಿವಾರ್ಯ. ಪ್ರಸಾರ ಮಾಧ್ಯಮದಲ್ಲಿ ಕೆಲಸ ಮಾಡುವವರು ಕರ್ತವ್ಯದಲ್ಲಿ ಎಚ್ಚರ ದಿಂದಿರಿ. ಕೋರ್ಟು, ಕಛೇರಿ ಎಂದು ವೃಥಾ ಅಲೆಯಬೇಕಾದೀತು. ಸರ್ಕಾರಿ ಮೇಲಾಧಿಕಾರಿಗಳು ಮಂತ್ರಿ ಮಹೋದಯರ ವಿರುದ್ಧ ತಿರುಗಿ ಬೀಳುವ ಸಾಹಸ ಮಾಡ ಬೇಡಿ. ಕವಿ, ಸಾಹಿತಿಗಳಿಗೆ ಮಾನ, ಸನ್ಮಾನಗಳು ಹೆಚ್ಚಾಗಲಿವೆ. ದೈನಂದಿನ ಜೀವನದಲ್ಲಿ ಹೊಂದಾಣಿಕೆ ಅನಿವಾರ್ಯ. ಹೆಚ್ಚಿನ ಆದಾಯ ಅರಸಿದಲ್ಲಿ ನಿರಾಸೆ ಕಟ್ಟಿಟ್ಟ ಬುತ್ತಿ. ಲೇವಾದೇವಿ ವ್ಯವಹಾರ ಬೇಡ. ಕೃಷಿಕ ಮಿತ್ರರಿಗೆ ಸರ್ಕಾರದಿಂದ ಸಿಗಬೇಕಾದ ಎಲ್ಲಾ ಸೌಲಭ್ಯಗಳು ಸಿಗಲಿವೆ. ಗಣಪತಿಯನ್ನು ಗರಿಕೆಯಿಂದ ವಿಶೇಷವಾಗಿ ಆರಾಧಿಸಿ. ಬುಧ, ಗುರು, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ನಿಮ್ಮ ಪ್ರತಿಯೊಂದು ಕೆಲಸಗಳಿಗೆ ಮಕ್ಕಳಿಂದ ಸಾಕಷ್ಟು ಧನ ಸಹಾಯ ನಿರೀಕ್ಷಿಸಬಹುದು. ನಿವೇಶನ ಇತ್ಯಾದಿ ಆಸ್ತಿ ಖರೀದಿ ವಿಚಾರವಿದ್ದಲ್ಲಿ ಈಗ ಪ್ರಯತ್ನಿಸಿ. ಮಡದಿ ಆರೋಗ್ಯಕ್ಕೆಂದು ತುಸು ಹೆಚ್ಚಿನ ಹಣ ಖರ್ಚಾಗಬಹುದು. ಸರ್ಕಾರಿ ಅಭಿಯಂತರರಿಗೆ ಮುಂಬಡ್ತಿಯೊಂದಿಗೆ ವೇತನದಲ್ಲಿ ಹೆಚ್ಚಳ. ವ್ಯಾಪಾರಿಗಳಿಗೆ ವಹಿವಾಟಿನ ಬಗ್ಗೆ ಹಿರಿಯರು ಹಾಗೂ ಅನುಭವಿಗಳ ಸಲಹೆ ಕೇಳುವುದರಿಂದ ಆಗುವ ನಷ್ಟದಿಂದ ಪಾರಾಗಬಹುದು. ನೆರೆಹೊರೆಯವರೊಂದಿಗೆ ಅನಾವಶ್ಯಕ ಜಗಳ ಬೇಡ. ಕಾರ್ಮಿಕ ವರ್ಗದವರಿಗೆ ಬರಬೇಕಾದ ಬಾಕಿ ವೇತನ ತಡವಾಗಿ ಬರಲಿದೆ. ಮನೆಯ ಸದಸ್ಯರೊಂದಿಗೆ ಮನಸ್ತಾಪ ಬೇಡ. ಚಿಕ್ಕಮಕ್ಕಳಿಗೆ ಶೀತ ಬಾಧೆ ಇತ್ಯಾದಿ ಆರೋಗ್ಯ ಸಮಸ್ಯೆ ಕಾಡಬಹುದು. ನ್ಯಾಯಾಲಯದ ವ್ಯಾಜ್ಯಗಳು ಮತ್ತೆ ಮುಂದೆ ಹೋಗಲಿವೆ. ಹನುಮಾನ್ ಚಾಲೀಸ ಪಠಿಸಿ. ಭಾನು, ಮಂಗಳ, ಬುಧ ಶುಭ ದಿನಗಳು

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಅರ್ಧಕ್ಕೆ ನಿಂತು ಹೋಗಿದ್ದ ಹೊಸಮನೆ ನಿರ್ಮಾಣ ಕೆಲಸಕ್ಕೆ ಅನಿರೀಕ್ಷಿತ ಮೂಲಗಳಿಂದ ದೊರೆಯುವ ಆರ್ಥಿಕ ನೆರವು ದುರುಪಯೋಗವಾಗದಂತೆ ನೋಡಿಕೊಳ್ಳಿ. ಕುಟುಂಬದ ಸದಸ್ಯರೊಂದಿಗಿದ್ದ ವೈಮನಸ್ಸು ದೂರವಾಗಲು ಹಿರಿಯರ ನೆರವು ಪಡೆದುಕೊಳ್ಳಿ. ಕಂಗೆಟ್ಟಿದ್ದ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ದೊರೆಯಲಿದೆ. ಸೋದರಿಯ ಮನೆಯಲ್ಲಿ ವ್ಯವಹಾರದಲ್ಲಿ ಪಾಲುದಾರರ ಅಭಿಪ್ರಾಯಕ್ಕೂ ಮನ್ನಣೆ ಕೊಡುವುದರಿಂದ ನಿಮಗೆ ಹೆಚ್ಚಿನ ಲಾಭ. ಉದ್ಯಮಿಗಳು ತಮ್ಮ ಎದುರಾಳಿಗಳನ್ನು ಸಮರ್ಥವಾಗಿ ಎದುರಿಸುವರು. ನವದಂಪತಿಗಳು ಸಹನೆಯಿಂದಿರಿ. ವಿಜ್ಞಾನಿಗಳು ಮಹತ್ತರವಾದ ಸಂಶೋಧನೆಯೊಂದನ್ನು ನಡೆಸಿ ಪ್ರಸಿದ್ಧಿ ಪಡೆಯುವರು. ಅತಿಯಾದ ತಿರುಗಾಟ ಯಾವ ಕಾರಣಕ್ಕೂ ಒಳ್ಳೆಯದಲ್ಲ. ಯೋಗ-ಧ್ಯಾನ ಮಾಡುವುದು ಒಳಿತು. ಸೋಮ, ಬುಧ, ಶುಕ್ರ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನಿಮ್ಮ ಸಮಯಪ್ರಜ್ಞೆಯಿಂದ ಸಂಸ್ಥೆಗೆ ಆಗಬಹುದಾದ ದೊಡ್ಡ ನಷ್ಟ ತಪ್ಪಿಸುವಿರಿ. ಜೊತೆಗೆ ಯೋಗ್ಯ ಪ್ರತಿಫಲ ಪಡೆಯುವಿರಿ. ಕುಸಿದಿದ್ದ ಹಣಕಾಸಿನ ಪರಿಸ್ಥಿತಿ ಚೇತರಿಸಿಕೊಳ್ಳಲಿದೆ. ಅವರಿವರ ಮಾತುಗಳಿಗೆ ಗಮನ ಕೊಡದೆ ಆತ್ಮವಿಶ್ವಾಸದಿಂದ ಮುನ್ನಡೆಯಿರಿ. ವ್ಯವಹಾರದಲ್ಲಿ ತುಸು ಏರಿಳಿಕೆಯಾದರೂ ಚಿಂತೆ ಬೇಡ. ನಿಮ್ಮೊಂದಿಗೆ ದ್ರೋಹ ಬಗೆಯುತ್ತಿದ್ದವರಿಗೆ ಸರಿಯಾದ ಪಾಠ ಕಲಿಸುವ ಅವಕಾಶ ನಿಮಗೆ ಸಿಗಲಿದೆ. ಅತೀ ಮುಖ್ಯ ಕೆಲಸ ಮುಂದೂಡಬೇಡಿ. ಮಕ್ಕಳ ವಿದ್ಯಾಭ್ಯಾಸದ ಚಿಂತೆ ದೂರವಾಗಲಿದೆ. ಮತ್ತೊಬ್ಬರ ವೈಯಕ್ತಿಕ ವಿಚಾರದಲ್ಲಿ ಪ್ರವೇಶ ಮಾಡಬೇಡಿ. ಗೃಹನಿರ್ಮಾಣ ಸಾಮಗ್ರಿ ವ್ಯಾಪಾರಿಗಳಿಗೆ ಹೆಚ್ಚಿನ ವಹಿವಾಟು. ಮೋಜಿನ ಕೂಟಗಳು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಭಾನು, ಮಂಗಳ, ಗುರು ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದು, ಯಾವುದೇ ರೀತಿಯ ಹೊಸ ಯೋಜನೆ ಹಮ್ಮಿಕೊಳ್ಳಲು ಅಡ್ಡಿಯಿಲ್ಲ. ನಯವಾದ ಮಾತುಗಳಿಂದಲೇ ಎಂತಹ ಸೋಮಾರಿಯಿಂದಲೂ ಕೆಲಸ ತೆಗೆಯುವ ಕಲೆ ನಿಮಗೆ ಕರಗತವಾಗಲಿದೆ. ಸ್ಥಿರಾಸ್ತಿಯನ್ನು ಕೊಳ್ಳಲು ಅವಕಾಶ ಒದಗಿ ಬರಲಿದೆ. ಸಂತಾನಾಪೇಕ್ಷಿಗಳಿಗೆ ಈ ವಾರ ತುಸು ನಿರಾಸೆ ಯಾಗಬಹುದು. ಹಿರಿಯರ ಆಶೀರ್ವಾದದಿಂದ ಬರುವ ಹಣವನ್ನು ನಿಸ್ಸಂಕೋಚ ವಾಗಿತೆಗೆದುಕೊಳ್ಳಿ. ನ್ಯಾಯಾಲಯದ ಕೇಸುಗಳು ಈ ಬಾರಿ ನಿಮ್ಮ ವಿರುದ್ಧವಾದೂ ಚಿಂತೆ ಬೇಡ. ಸೋದರನೊಂದಿಗೆ ವಾಗ್ವಾದ ಬೇಡ. ಖಾಸಗಿ ಕಂಪನಿ ನೌಕರರಿಗೆ ವೇತನದಲ್ಲಿ ಹೆಚ್ಚಳ. ಹೈನುಗಾರಿಕೆಯಿಂದ ಹೆಚ್ಚಿನ ಆದಾಯ. ಶೀತ ಸಂಬಂಧಿ ಸಮಸ್ಯೆ ಕಾಡಲಿದೆ. ದುಡ್ಡು ಕಾಸಿನಲ್ಲಿ ಮೋಸ ಹೋಗುವ ಸಂಭವ, ಎಚ್ಚರ. ಭಾನು, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಉನ್ನತಾಧಿಕಾರಿಗಳು ಎಷ್ಟೇ ಪ್ರಾಮಾಣಿಕರಾಗಿದ್ದರೂ ರಾಜಕಾರಣಿಗಳ ಉಪದ್ರವ ತಪ್ಪಿದ್ದಲ್ಲ. ಆದ್ದರಿಂದ ಕರ್ತವ್ಯ ನಿರ್ವಹಣೆಯಲ್ಲಿ ಎಚ್ಚರವಿರಲಿ. ಸಂಬಂಧಗಳ ಮಧ್ಯೆಯಿದ್ದ ವೈಷಮ್ಯ ದೂರವಾಗಲಿದೆ. ಸ್ನೇಹಿತರೊಂದಿಗೆ ಕಾಠಿಣ್ಯದ ಮಾತು ಬೇಡ. ಸೋದರಿಯ ಮಕ್ಕಳ ಅಭಿವೃದ್ಧಿಗೆ ಶ್ರಮ. ವ್ಯವಹಾರದಲ್ಲಿ ಪಾಲುದಾರರ ಹಾಗೂ ನಿಮ್ಮ ನಡುವಿನ ದ್ವಂದ್ವ ನಿಲುವಿನಿಂದ ತುಸು ಹಿನ್ನಡೆ. ವಿದ್ಯುತ್ ಅಥವಾ ಹರಿತ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರದಿಂದಿರಿ. ಕೌಟುಂಬಿಕ ವಿಷಯ ಆತ್ಮೀಯರೊಂದಿಗೆ ಮಾತ್ರ ಚರ್ಚಿಸಿ. ಸದ್ಯದ ಪರಿಸ್ಥಿತಿಯಲ್ಲಿ ಇರುವ ಆದಾಯದೊಂದಿಗೆ ನಿರ್ವಹಣೆ ಮಾಡಿಕೊಂಡು ಹೋಗಿ. ವಾರದ ಮಧ್ಯದಲ್ಲಿ ಕ್ರಮೇಣ ಏರಿಕೆ. ದೂರ ಪ್ರಯಾಣ ಅನಿವಾರ್ಯ. ಸಹೋದ್ಯೋಗಿಗಳೊಂದಿಗೆ ಸಹಕರಿಸಿಕೊಂಡು ಹೋದಲ್ಲಿ ಎಲ್ಲಾ ಔದ್ಯೋಗಿಕ ಸಮಸ್ಯೆಗಳಿಗೆ ಪರಿಹಾರ ಕಂಡುಬರಲು ಸಾಧ್ಯ. ಆರೋಗ್ಯ ಅಲಕ್ಷಿಸಬೇಡಿ. ಸೋಮ, ಮಂಗಳ, ಗುರು ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಎಷ್ಟೇ ಕಷ್ಟಪಟ್ಟರೂ ಆದಾಯದ ಗತಿ ಮಂದವಾಗಲಿದೆ. ಖರ್ಚಿನ ಮೇಲೆ ಕಡಿವಾಣ ಹಾಕಿ. ವೃತ್ತಿಯಲ್ಲಿ ಮೇಲೆ ಬರುತ್ತಿರುವ ನಿಮ್ಮ ಏಳಿಗೆ ಮೇಲಾಧಿಕಾರಿಗಳನ್ನೇ ಕರುಬುವಂತೆ ಮಾಡಲಿದೆ. ಅವರು ನಿಮ್ಮ ಮೇಲೆ ಇಲ್ಲಸಲ್ಲದ ಆಪಾದನೆ ಹೊರಿಸುವರು. ಕೈಗಾರಿಕೋದ್ಯಮಿಗಳಿಗೆ ಕಾರ್ಮಿಕ ಸಮಸ್ಯೆ ಎದುರಾಗಬಹುದು. ಸ್ವಾಭಿಮಾನ ಒಳ್ಳೆಯದೇ ಆದರೂ ದುರಭಿಮಾನ ಅಷ್ಟು ಒಳ್ಳೆಯದಲ್ಲ. ವೈಯಕ್ತಿಕ ಆದಾಯದಲ್ಲಿ ಏರಿಕೆ. ಪ್ರಾಪ್ತ ವಯಸ್ಕರಾದ ಮಕ್ಕಳನ್ನು ವ್ಯವಹಾರದಲ್ಲಿ ತೊಡಗಿಸಿಕೊಳ್ಳುವುದರಿಂದ ನೆಮ್ಮದಿ. ರೈತಾಪಿ ಮಿತ್ರರು ಕೃಷಿಯಲ್ಲಿ ಬದಲಾವಣೆ ಮಾಡಿಕೊಂಡಲ್ಲಿ ಹೆಚ್ಚಿನ ಆದಾಯ. ಹಿರಿಯರ ಹರಕೆ ಪೂರೈಸಲು ಯತ್ನಿಸಿ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರಿಂದ ಪ್ರತಿಭೆ ಬೆಳಕಿಗೆ ಬರಲಿದೆ. ದೂರ ಪ್ರಯಾಣ ಖಂಡಿತಾ ಬೇಡ. ಸೋಮ, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಮನೆಯಲ್ಲಿ ಹಿರಿಯರು ಅರಿತೋ, ಮರೆತೋ ಆಡಿದ ನಿಷ್ಠೂರದ ಮಾತಿನಿಂದ ಅಶಾಂತಿ. ಬರಬಹುದಾದ ಸವಾಲು ಎಂತಹದ್ದೇ ಆಗಿದ್ದರೂ ಎಲ್ಲರ ಸಹಕಾರದಿಂದ ಎದುರಿಸಲು ಮಾನಸಿಕವಾಗಿ ಈಗಲೇ ಸಿದ್ಧರಾಗಿರುವುದು ಉತ್ತಮ. ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕಿ. ಸೋದರನು ಅಪರೂಪದ ಪುರಾತನ ವಸ್ತುಗಳನ್ನು ವಿದೇಶದಿಂದ ತರುವನು. ಹಿರಿಯರಿಂದ ಬರಬೇಕಾದ ಆಸ್ತಿ ನಿಮ್ಮ ಕೈ ಸೇರಲಿದೆ. ಮಹಿಳಾ ಉದ್ಯಮಿಗಳಿಗೆ ಸರ್ಕಾರದಿಂದ ಎಲ್ಲಾ ರೀತಿಯ ನೆರವು. ಯೋಜನಾ ಬದ್ಧವಾದ ಕೆಲಸಗಳಿಗೆ ಮಾತ್ರ ಪ್ರಾಮುಖ್ಯತೆ ಕೊಡಿ. ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕಂತೆ ಫಲಿತಾಂಶ ಪಡೆಯುವರು. ರಾಜಕಾರಣದಿಂದ ದೂರವಿರಿ. ಆದಾಯದ ಮೂಲ ಹೆಚ್ಚಿಸಿ ಕೊಳ್ಳಲು ಸಾಹಸಪಡುವಿರಿ. ನೆಗಡಿ, ಕೆಮ್ಮ ಇತ್ಯಾದಿ ಉದಾಸೀನ ಬೇಡ. ಭಾನು,ಮಂಗಳ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ದಂಪತಿಗಳಲ್ಲಿ ತಪ್ಪು ಕಲ್ಪನೆಯಿಂದ ಮೂಡಿದ್ದ ಭಿನ್ನಾಭಿಪ್ರಾಯ ದೂರವಾಗಲಿದೆ. ಮಧ್ಯವರ್ತಿ ಕೆಲಸ ಮಾಡುವವರಿಗೆ ಹೆಚ್ಚಿನ ಕಮೀಷನ್ ದೊರೆಯಲಿದೆ. ಅಪರಿಚಿತರೊಂದಿಗೆ ಲೇವಾದೇವಿ ವ್ಯವಹಾರ ಖಂಡಿತಾ ಬೇಡ. ಅನಿರೀಕ್ಷಿತ ಪ್ರಸಂಗಗಳಲ್ಲಿ ಹಿರಿಯರ ನೆರವು ಪಡೆಯಿರಿ. ಅರೆಕಾಲಿಕ ಕೆಲಸಗಾರರಿಗೆ ಕೆಲಸ ಖಾಯಂ ಆಗುವ ಸಂಭವ. ಆಯ-ವ್ಯಯ ಸಮಪ್ರಮಾಣದಲ್ಲಿರುವುದರಿಂದ ಉಳಿತಾಯದ ನಿರೀಕ್ಷೆ ಬೇಡ. ಆರ್ಥಿಕ ಮೂಲ ಕಂಡುಕೊಳ್ಳದೆ ಹೊಸಮನೆ ಕಟ್ಟುವ ಅಥವಾ ಮನೆ ರಿಪೇರಿ ಕೆಲಸಕ್ಕೆ ಕೈ ಹಾಕಬೇಡಿ. ಅತಿಯಾದ ಸುಖಭೋಜನ ಅನಾರೋಗ್ಯಕ್ಕೆ ಕಾರಣವಾದೀತು. ಪ್ರೇಮಿಗಳು ಸಂಯಮದಿಂದ ವರ್ತಿಸದೇ ಹೋದಲ್ಲಿ ಮುಂದೆ ಪಶ್ಚತ್ತಾಪ ಪಡಬೇಕಾದೀತು. ಉದ್ಯಮಿಗಳಿಗೆ ಲೆಕ್ಕಾಧಿಕಾರಿಗಳಿಂದ ಕಿರಿಕಿರಿ. ಆರೋಗ್ಯ ಇಲಾಖೆ ನೌಕರರಿಗೆ ಸಾರ್ವಜನಿಕವಾಗಿ ವಿಶೇಷ ಸನ್ಮಾನ. ಅವಿವಾಹಿತರಿಗೆ ಕಂಕಣ ಭಾಗ್ಯ. ಬುಧ, ಶುಕ್ರ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಅತಿ ಬಳಲಿಕೆ, ಆಯಾಸದಿಂದ ಬಳಲುತ್ತಿದ್ದ ನಿಮಗೆ ಈ ವಾರ ತುಸು ಶ್ರಮ ಪರಿಹಾರವಾಗಲಿದೆ. ಅಂದುಕೊಂಡ ಕೆಲಸಗಳು ಮುಗಿಯಲಿವೆ. ಕೃಷಿಕ ಜನರು ಹರಿತ ಉಪಕರಣ ಬಳಸುವಾಗ ಎಚ್ಚರ. ದೊಡ್ಡಮಟ್ಟದ ಕಾರ್ಖಾನೆ ನಡೆಸುವವರು ಕಾರ್ಮಿಕರ ಮೇಲೆ ಒತ್ತಡ ತಂದಲ್ಲಿ ಮಾತ್ರ ಉತ್ಪಾದನೆ ಹೆಚ್ಚಬಹುದು. ಸಂತಾನಾಪೇಕ್ಷಿಗಳಿಗೆ ಸಿಹಿ ಸುದ್ದಿ, ಖಾಸಗಿ ಕಂಪನಿ ನೌಕರರು ವರ್ಗಾವರ್ಗಿಗಳಿಗೆ ಮಾನಸಿಕ ಸಿದ್ಧರಾಗಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಪಾಲುದಾರರ ನಡುವೆ ಭಿನ್ನಾಭಿಪ್ರಾಯ ಮೂಡದಂತೆ ಎಚ್ಚರಿಕೆ ವಹಿಸಿ. ಹಣ್ಣು-ತರಕಾರಿ, ಹೈನುಗಾರಿಕೆ ಇತ್ಯಾದಿಗಳು ಈ ವಾರವೆಲ್ಲಾ ಲಾಭದಾಯಕವಾಗಿ ನಡೆಯಲಿವೆ. ಹಳೇ ಕಾಯಿಲೆಗಳು ಮರುಕಳಿಸದಂತೆ ಎಚ್ಚರವಹಿಸಿ. ಆದಾಯ ಸಾಧಾರಣ. ಖರ್ಚಿನಲ್ಲಿ ಹಿಡಿತವಿರಲಿ. ಸೋಮ, ಬುಧ, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಈ ಹಿಂದೆ ಉತ್ಸಾಹದಿಂದ ಆರಂಭಿಸಿದ ಎಲೆಕ್ಟ್ರಾನಿಕ್ ಉದ್ಯಮ ಲಾಭದಾಯಕವಾಗಿ ಮುಂದುವರೆಯಲಿದೆ. ಆದಾಯದ ಮೂಲಗಳು ಸಾಕಷ್ಟು ಗೋಚರಿಸಲಿವೆ. ಅಲಂಕಾರಿಕ ವಸ್ತುಗಳ ವ್ಯಾಪಾರಿಗಳಿಗೆ ಭರ್ಜರಿ ವಹಿವಾಟು. ಕೆಲಸಗಾರರಿಗೆ ಸೂಕ್ತ ಸೂಚನೆಗಳನ್ನು ಕೊಡುವುದು ಲೇಸು. ಮೇಲಾಧಿಕಾರಿಗಳು ಸರ್ಕಾರಕ್ಕೆ ಕೊಡಬೇಕಾದ ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸದಿದ್ದಲ್ಲಿ ತೊಂದರೆಯಾದೀತು. ವಾಹನ ಮಾರಾಟದಲ್ಲಿ ತುಸು ಹಿನ್ನಡೆ. ಸಾಲ ತೀರಿಸುವ ಅವಕಾಶ ಸದುಪಯೋಗಪಡಿಸಿಕೊಳ್ಳಿ. ಆಡುವ ಮಾತಿನಲ್ಲಿ ತಪ್ಪಿದ್ದರೆ ಸಂಬಂಧಗಳು ಹಳಸಬಹುದು. ಪುಣ್ಯಕ್ಷೇತ್ರ ದರ್ಶನ ಭಾಗ್ಯ ಕಳೆದುಕೊಳ್ಳಬೇಡಿ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಭಾನು, ಗುರು, ಶುಕ್ರ ಶುಭ ದಿನಗಳು.

## ರಾಣೇಬೆನ್ನೂರು : ಖನ್ನೂರ ಶಾಲೆಯಲ್ಲಿ ಕನಕ ಜಯಂತಿ

ರಾಣೇಬೆನ್ನೂರು, ಡಿ.5- ಖನ್ನೂರ ವಿದ್ಯಾನಿಕೇತನ ಶಾಲೆಯಲ್ಲಿ ಆನ್‌ಲೈನ್ ಮೂಲಕ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ವಿದ್ಯಾರ್ಥಿ ಎ.ಕೆ.ಆರ್. ಶೋಯೇಬ್, ಪ್ರೀ ಪ್ರೈಮರಿ ಮುಖ್ಯ ಶಿಕ್ಷಕಿ ಲೀಲಾವತಿ ಭಾಷಣ ಮಾಡಿ ದರು. ಪ್ರಾಂಶುಪಾಲ ಡಾ. ಮಹಾಂತೇಶ್ ಆರ್. ಕಮ್ಮಾರ, ಅಧ್ಯಕ್ಷ ಎಂ.ಎಂ. ಖನ್ನೂರ ಕಾರ್ಯಕ್ರಮ ಕುರಿತು ಮಾತನಾಡಿದರು. ಉಪಾಧ್ಯಕ್ಷೆ ಸುಲೋಚನಾ ಎಂ. ಖನ್ನೂರ, ಕಾರ್ಯದರ್ಶಿ ಡಾ. ಪ್ರವೀಣ ಎಂ. ಖನ್ನೂರ, ಖಜಾಂಚಿ ಡಾ. ಶೈಲಶ್ರೀ ಪಿ.ಖನ್ನೂರ ಮಾರ್ಗ ದರ್ಶನದಲ್ಲಿ ಕಾರ್ಯಕ್ರಮ ನಡೆಯಿತು.

# ಕೂಡ್ಲಿಗಿಯಲ್ಲಿ 'ಸಕ್ಕರೆ ಆರತಿಯ ಪರಿಷೆ - ಗೌರಿಹಬ್ಬ'

ಕೂಡ್ಲಿಗಿ, ಡಿ.5- ಗೌರಿಹಬ್ಬ ಎಂದರೆ ಅಣ್ಣ-ತಂಗಿಯರ ಹಾಗೂ ಸೊಸೆ ಮಾವಂದಿರ ಭಾವನಾತ್ಮಕ ಸಂಬಂಧಕ್ಕೆ ಬೆಸುಗೆ ಹಾಕುವ ಹಬ್ಬ ಎನ್ನಲಾಗುತ್ತಿದೆ. ಕೆಲವು ಪ್ರತಿಷ್ಠಿತ ಮನೆಗಳಲ್ಲಿ ಹಾಗೂ ದೇವಸ್ಥಾನಗಳಲ್ಲಿ ಮಾತ್ರ ಪ್ರತಿಷ್ಠಾಪಿಸುವ ಗೌರಮ್ಮನ ವಿಗ್ರಹಕ್ಕೆ ಗೌರಿ ಹುಣ್ಣಿಮೆ ರಾತ್ರಿಯಂದು ಸಕ್ಕರೆ ಗೊಂಬೆಗಳಿಂದ ಆರತಿ ಬೆಳಗುವ ಮೂಲಕ ಹಬ್ಬ ಪರಿಪೂರ್ಣವಾಗಲಿದೆ. ಮಕ್ಕಳು, ಹೆಂಗಳೆಯರು ಗೌರಿಗೆ ಆರತಿ ಬೆಳಗಲು ಓಡಾಡುವ ಹೆಣ್ಣು ಮಕ್ಕಳ ಸಂಭ್ರಮ ಹೇಳತೀರದು. ಸಕ್ಕರೆ ಗೊಂಬೆಗಳಿರುವ ತಟ್ಟೆಯಲ್ಲಿ ದೀಪ ಹಚ್ಚಿಕೊಂಡು ಗೌರಮ್ಮನ ವಿಗ್ರಹಕ್ಕೆ ಆರತಿ ಎತ್ತಿ, ಆ ಬಳಿಕ ಕುಟುಂಬದ ಸದಸ್ಯರಿಗೆ, ನೆರೆ-ಹೊರೆಯವರಿಗೆ, ಸಂಬಂಧಿಕರಿಗೆ ಆರತಿ ಬೆಳಗುವ ಸಂಪ್ರದಾಯ ಕಾಣಬಹುದಾಗಿದೆ.

ಹಲವು ಕುಟುಂಬಗಳು ಕೆಲವೆಡೆ ಗೌರಿಹಬ್ಬಕ್ಕಿಂತ ತಿಂಗಳ ಮೊದಲೇ ಸಕ್ಕರೆ ಗೊಂಬೆಗಳ ತಯಾರಿಕೆಯಲ್ಲಿ ತೊಡಗುತ್ತಾರೆ.



**ಸಕ್ಕರೆ ಗೊಂಬೆ ತಯಾರಿಕೆ ಒಂದು ಕಲೆ :** ಶುದ್ಧ ಸಕ್ಕರೆಗೆ ತಕ್ಕಂತೆ ನೀರು, ನಿಂಬೆರಸ, ಹಾಲು, ಏಲಕ್ಕಿ ಹಾಕಿ ಒಲೆಯ ಮೇಲೆ ಹದ ಬರುವ ಹಾಗೆ ಕಾಯಿಸಲಾಗುತ್ತದೆ. ಆ ಬಳಿಕ ಅದನ್ನು ಗೊಂಬೆ ತಯಾರಿಕೆಯ ಕಟ್ಟಿಗೆ ಅಚ್ಚುಗಳಿಗೆ ಹಾಕಿದಾಗ ಕೆಲವೇ ಸಮಯದಲ್ಲಿ ಬಗೆಬಗೆಯ ಗೊಂಬೆಗಳು ಸಿದ್ಧವಾಗುತ್ತವೆ.

**ಆಕರ್ಷಿಸುವ ವಿನ್ಯಾಸಗಳು :** ಜನರಲ್ಲಿರುವ ಭಕ್ತಿ, ಭಾವನೆಗಳಿಗೆ ತಕ್ಕಂತೆ ಶಿವ, ಪಾರ್ವತಿ, ಒಂಟೆ, ಆನೆ, ರಥ, ಅರ್ಜುನನ ಬಿಲ್ಲು, ಮಂಟಪ, ಆಂಜನೇಯ, ಬಸವಣ್ಣ, ವಿವಿಧ ರೀತಿಯ ಪಶುಪಕ್ಷಿಗಳು ಹೀಗೆ ಅನೇಕ ಕಲಾಕೃತಿಗಳಲ್ಲಿ ವಿವಿಧ ಬಣ್ಣಗಳಲ್ಲಿ ಆಕರ್ಷಿಸುತ್ತವೆ.

ಹೊಸದಾಗಿ ಮದುವೆ ನಿಶ್ಚಯಗೊಂಡ ವರನ ಕಡೆಯವರು ವಧುವಿನ ಮನೆಗೆ ಗೌರಿ ಹುಣ್ಣಿಮೆಯಂದು ದಂಡಿಯ ಜೊತೆಗೆ ಸಕ್ಕರೆ ಗೊಂಬೆಗಳನ್ನು ತೆಗೆದುಕೊಂಡು ಬರುವ ಸಂಪ್ರದಾಯವಿದೆ.

ಸಕ್ಕರೆ ಆರತಿ ತಯಾರಕ ಕೂಡ್ಲಿಗಿ ಪಟ್ಟಣದ ವಡ್ರಳ್ಳಿ ಸೋಮಣ್ಣ ತಿಳಿಸಿದಂತೆ, ಗೌರಿ ಹುಣ್ಣಿಮೆ ಇನ್ನೂ ಎರಡು ದಿನ ಬಾಕಿ ಇರುವಾಗಲೇ ಸಕ್ಕರೆ ಆರತಿಗಳನ್ನು ತಯಾರಿಸಿ ಮಾರುಕಟ್ಟೆಯಲ್ಲಿ ಮಾರಲಾಗುವುದು ಎನ್ನುತ್ತಾರೆ. ಸಕ್ಕರೆ ಗೊಂಬೆಯ ಆರತಿಗಳು ಕೆ.ಜಿ.ಗೆ 80 ರಿಂದ 140 ರೂ, ಬಣ್ಣ ಬಣ್ಣ ದಂಡಿಗಳು ಒಂದಕ್ಕೆ 40 ರಿಂದ 50 ರೂ. ಕೊಲುಂಗುರ 25 ರಿಂದ 40 ರೂ.ಗೆ ಮಾರಾಟವಾಗುತ್ತಿದ್ದವು.

ಈ ವರ್ಷವೂ ದರದಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಸದ್ಯ ಕೆ.ಜಿಗೆ 100 ರೂ. ರಿಂದ 120 ರೂ.ವರೆಗೂ ಮಾರಾಟ ಮಾಡಲಾಗುತ್ತದೆ. ಹಬ್ಬದ ದಿನದಂದು 120 ರಿಂದ 160 ರೂ.ಗೆ ಸಕ್ಕರೆ ಆರತಿಗಳನ್ನು ಮಾರಾಟ ಮಾಡಲಾಗುತ್ತದೆ ಎನ್ನುತ್ತಾರೆ.

ವ್ಯಾಪಾರಸ್ಥರು, ಕೂಡ್ಲಿಗಿ ಪಟ್ಟಣದಲ್ಲಿ ಐದಾರು ತಯಾರಕರಿದ್ದಾರೆ, ತಾಲ್ಲೂಕಿನಾದ್ಯಂತ ಒಟ್ಟಾರೆ ನೂರಾರು ಸಕ್ಕರೆ ಆರತಿ ತಯಾರಕರಿದ್ದಾರೆ. ಬೆಲೆ ಸೇರಿದಂತೆ ತಯಾರಿಕೆಯಲ್ಲಿ ಬಳಸಲಾಗುವ ವಿವಿಧ ವಸ್ತುಗಳ ಬೆಲೆ ಏರಿಕೆಯಾಗಿರುವುದರಿಂದ ಸಹಜವಾಗಿ ಗೊಂಬೆಗಳ ಬೆಲೆ ಹೆಚ್ಚಾಗಿದೆ ಎನ್ನುತ್ತಾರವರು. ನಮಗೆ ಲಾಭ ಗಳಿಕೆ ಉದ್ದೇಶವಿಲ್ಲ ತಲೆತಲಾಂತರದಿಂದ ಮಾಡಿಕೊಂಡು ಬಂದಿದ್ದು, ಸಂಪ್ರದಾಯ ಪಾಲನೆಗಾಗಿ ಗೊಂಬೆ ತಯಾರಿಕೆಯಲ್ಲಿ ತೊಡಗಿರುವುದಾಗಿ ವಡ್ರಳ್ಳಿ ಸೋಮಪ್ಪ ಹಾಗೂ ಕುಟುಂಬ ಹೇಳುತ್ತಾರೆ.

# ಅತ್ಯಾಚಾರ, ಕೊಲೆ ಆರೋಪಿಗಳ ಬಂಧನಕ್ಕೆ ಎಐಎಸ್‌ಎಫ್ ಆಗ್ರಹ




ಜಗಳೂರು, ಡಿ.5- ಬಂಜಾರ ಸಮುದಾಯದ ಅಪ್ರಾಪ್ತ ಬಾಲಕಿ ಆರತಿಬಾಯಿಯ ಮೇಲೆ ಅತ್ಯಾಚಾರ ಮಾಡಿ ಬರ್ಬರವಾಗಿ ಕೊಲೆ ಮಾಡಿರುವವರನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಎಐಎಸ್‌ಎಫ್ ತಾಲ್ಲೂಕು ಅಧ್ಯಕ್ಷ ಯುವರಾಜು ಒತ್ತಾಯಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಘೋಷಣೆ ಕೂಗಿದ ಪ್ರತಿಭಟನಾಕಾರರು, ಕೊಲೆ ಮಾಡಿರುವವರನ್ನು ಕೂಡಲೇ ಬಂಧಿಸಬೇಕು ಎಂದು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಹೊಟ್ಟೆಪಾಡಿಗಾಗಿ ದುಡಿಯಲು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ತಾಳೆಬಸಾಪುರ ತಾಂಡಾದವರು ದೂರದ ಮಂಡ್ಯ ಜಿಲ್ಲೆಗೆ ಕುಟುಂಬದವರ ಜೊತೆ ವಲಸೆ ಹೋಗಿದ್ದ ಸಂದರ್ಭದಲ್ಲಿ ಆರತಿಬಾಯಿಯ ಮೇಲೆ ಅತ್ಯಾಚಾರ ಮಾಡಿ ಕೊಲೆಮಾಡಿದ್ದು ಇಂತಹ ಹೇಯ ಕೃತ್ಯಗಳು ಮರುಕಳಿಸದಂತೆ ಕ್ರಮ ವಹಿಸಬೇಕು ಎಂದರು. ಅತ್ಯಾಚಾರವೆಸಗಿ ಬರ್ಬರ ಕೊಲೆ ಮಾಡಿರುವವರನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು. ತಕ್ಷಣ ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಪ್ರಾರಂಭಿಸಬೇಕು. ಮೃತ ಆರತಿಬಾಯಿ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ನೀಡಬೇಕು ಮತ್ತು ವಲಸೆ ಸಮುದಾಯಕ್ಕೆ ಸೂಕ್ತ ರಕ್ಷಣೆ ಹಾಗೂ ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಮಂಜು ಐಹೊಳೆ, ಸದಸ್ಯರಾದ ಆಂಜನೇಯ, ಮೇಘ, ಜ್ಯೋತಿ, ಮನೋಜ್, ಗೌತಮ್, ಸಚಿನ್ ಹಾಜರಿದ್ದರು.

# ಯತ್ನಾಳ್ ಭಾವಚಿತ್ರಕ್ಕೆ ಸಗಣಿ ಸೇವೆ

(1ನೇ ಪುಟದಿಂದ) ಬಂತು.

**ಕನ್ನಡ ಪರ ಸಂಘಟನೆಗಳ ಪ್ರತಿಭಟನೆ :** ನಗರದ ಜಯದೇವ ವೃತ್ತದಲ್ಲಿ ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಿ, ಮರಾಠ ನಿಗಮ ಸ್ಥಾಪಿಸದಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದವು.

ಮುಂಜಾನೆ 6.30ರ ವೇಳೆಗೆ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಕನ್ನಡ ಪರ ಸಂಘಟನೆಗಳ ಒಕ್ಕೂಟದಿಂದ ಜಯದೇವ ವೃತ್ತದಲ್ಲಿ ಉರುಳು ಸೇವೆ ನಡೆಸಲಾಯಿತು. ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಕೆ.ಜಿ. ಬಸವರಾಜ್, ರಾಜೇಂದ್ರ ಬಂಗೇರ, ಪೂಜಾರ್, ಸೋಮಶೇಖರ್ ಆದಾಪುರ, ನಾಗರಾಜ್, ಫಕ್ರುದ್ದೀನ್ ಇತರರು ಉರುಳು ಸೇವೆ ನಡೆಸಿದರು. ಟಿ. ಶಿವಕುಮಾರ್, ಕೆ.ಟಿ. ಗೋಪಾಲಗೌಡರು, ಶಿವರಾಜ್, ಶಿವಪುತ್ರ ಮೊದಲಾದವರಿದ್ದರು. ನಂತರ ಬಸವನಗೌಡ ಪಾಟೀಲ್ ಯತ್ನಾಳ್ ಭಾವಚಿತ್ರಕ್ಕೆ ಸಗಣಿ ಎರಚುವ ಮೂಲಕ ಪ್ರತಿಭಟನೆ ನಡೆಯಿತು. ಉಪ ವಿಭಾಗಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ, ನಂತರ ಮನವಿ ಸಲ್ಲಿಸಲಾಯಿತು. ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಮಂಜುಳಮ್ಮ, ರೇಖಾ ಮಂಜುನಾಥ್, ದ್ರಾಕ್ಷಾಯಣಮ್ಮ, ಶುಭಮಂಗಳ, ಸಂತೋಷ್ ಕುಮಾರ್, ವಿಜಯೇಂದ್ರ ಪಾಮೇನಹಳ್ಳಿ, ನಾಗರಾಜ್, ಅಜಯ್, ನಾಗರಾಜ್ ಗೌಡ ಹಾಗೂ ಇತರರು ಉಪಸ್ಥಿತರಿದ್ದರು.

# ಹರಪನಹಳ್ಳಿ : ಅತ್ಯಾಚಾರ ಖಂಡಿಸಿ ಪ್ರತಿಭಟನೆ



ಹರಪನಹಳ್ಳಿ, ಡಿ.5. - ಕಬ್ಬು ಕಟಾವು ಮಾಡಲು ವಲಸೆ ಹೋಗಿದ್ದ ಬಾಲಕಿಯ ಮೇಲೆ ದುಷ್ಕರ್ಮಿಗಳು ಅತ್ಯಾಚಾರಗೈದು ಕೊಲೆ ಮಾಡಿರುವ ನರಹಂತಕರನ್ನು ಗಲ್ಲು ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿ, ತಾಲ್ಲೂಕು ಬಂಜಾರ್ ಸಮಾಜದ ವತಿಯಿಂದ ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಬಂಜಾರ್ ಸಮಾಜದ ಹಿರಿಯ ಮುಖಂಡ ಎಂ.ಪಿ. ನಾಯ್ಕ್, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ಎಸ್.ಪಿ.ಲಿಂಬ್ಯಾನಾಯ್ಕ ಅವರುಗಳು ಮಾತನಾಡಿ, ನರಹಂತಕರನ್ನು ಬಂಧಿಸಿ ಗಲ್ಲಿಗೇರಿಸಬೇಕು ಮತ್ತು ನೊಂದ ಕುಟುಂಬಕ್ಕೆ ಸರ್ಕಾರ ಕೂಡಲೇ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಮಾಜದ ಗುರುಗಳಾದ ಶ್ರೀ ಗೋಸಾಯಿ ಬಾಬಾ, ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷ ಎಲ್. ಮಂಜ್ಯಾನಾಯ್ಕ, ಮುಖಂಡರಾದ ಬಿ.ವೈ.ವೆಂಕಟೇಶ್ ನಾಯ್ಕ, ಬಂಡ್ರಿ ತಾಂಡಾ ರವಿನಾಯ್ಕ, ಗೋಪಿನಾಯ್ಕ, ಪಿ.ಶಿವಕುಮಾರ್‌ನಾಯ್ಕ, ಗೋರ್ ಸೇನಾ ರಾಜುನಾಯ್ಕ, ಹರೀಶ್ ನಾಯ್ಕ, ಪೂರ್ಯಾನಾಯ್ಕ, ಪಂಪನಾಯ್ಕ, ಮಂಜ್ಯಾನಾಯ್ಕ, ಎಲ್. ಹಾಲೇಶ್ ನಾಯ್ಕ, ಕೊಟ್ರೇಶ್ ನಾಯ್ಕ, ರಮೇಶ್ ನಾಯ್ಕ, ಸಿ.ಸಿ. ರಾಮಚಂದ್ರ ನಾಯ್ಕ, ಜಗ್ಯಾನಾಯ್ಕ್, ವೀರ್ಯಾನಾಯ್ಕ, ಈಶ್ವರ್ ನಾಯ್ಕ, ಬಸವರಾಜ್ ನಾಯ್ಕ, ಪ್ರಕಾಶ್ ನಾಯ್ಕ, ಭಜನಾನಾಯ್ಕ, ಯುವರಾಜ್ ನಾಯ್ಕ, ರವಿನಾಯ್ಕ, ಸುನೀಲ್ ಕುಮಾರ್ ಸೇರಿದಂತೆ ಇತರರು ಇದ್ದರು

# ಪತ್ರಿಕಾ ವಿತರಕರಿಂದ ಕನ್ನಡ ರಾಜ್ಯೋತ್ಸವ ಆಚರಣೆ



ದಾವಣಗೆರೆ, ಡಿ.5- ನಗರದ ಪತ್ರಿಕಾ ವಿತರಕರು 65 ನೇ ಕನ್ನಡ ರಾಜ್ಯೋತ್ಸವ ಆಚರಿಸಿದರು. ಈ ಸಂದರ್ಭದಲ್ಲಿ ಪತ್ರಿಕಾ ವಿತರಕರ ಸ್ನೇಹ ಬಳಗದ ನಿಂಗಪ್ಪ, ಎ.ಎನ್. ಕೃಷ್ಣಮೂರ್ತಿ ಹಾಗೂ ಟಿ.ಪಿ. ನಾಗರಾಜ್, ಪ್ರದೀಪ್, ಲೋಕೇಶ್, ಶರತ್, ಬಸವರಾಜ್, ಮಂಜುನಾಥ್, ರಘುರಾಮ್, ರವಿ, ಪತ್ರಿಕಾ ಪ್ರತಿನಿಧಿಗಳಾದ ನಿತ್ಯಾನಂದ, ಕಾಮತ್, ಚಂದ್ರು ಅರುಣ್ ಕುಮಾರ್, ಗಂಗಾಧರ್, ಆನಂದ್, ರಮೇಶ್ ವತನ್ ಇತರರು ಭಾಗವಹಿಸಿದ್ದರು

# ರೈತರ ಹೋರಾಟಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಬೆಂಬಲ




ದಾವಣಗೆರೆ, ಡಿ.5- ದೆಹಲಿಯಲ್ಲಿನ ರೈತರ ಹೋರಾಟ ಬೆಂಬಲಿಸಿ ಹಾಗೂ ಕೇಂದ್ರ ಸರ್ಕಾರದ ನಡೆ ವಿರೋಧಿಸಿ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರು ನಗರದಲ್ಲಿ ನಿನ್ನೆ ಪ್ರತಿಭಟನೆ ನಡೆಸಿದರು.

ಮಹಾತ್ಮ ಗಾಂಧಿ ವೃತ್ತದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಸಿಯುಸಿ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಹೋರಾಟದಲ್ಲಿ ಪಾಲ್ಗೊಳ್ಳಲು ದೆಹಲಿಗೆ ಆಗಮಿಸುತ್ತಿರುವ ರೈತರನ್ನು ಪೊಲೀಸರ ಮೂಲಕ ರೈತ ಹೋರಾಟವನ್ನು ಹತ್ತಿಕ್ಕುವ ಕೆಲಸವನ್ನು ಮಾಡುತ್ತಿರುವ ಕೇಂದ್ರ ಸರ್ಕಾರದ ನಡೆ ಸರಿಯಲ್ಲ ಎಂದು ತೀವ್ರವಾಗಿ ವಿರೋಧಿಸಿದರು.

ಕೂಡಲೇ ರೈತರ ಬೇಡಿಕೆಗಳಾದ ನೂತನ ಕೃಷಿ ಕಾಯ್ದೆ ಅಡಿಯಲ್ಲಿ ಜಾರಿಗೆ ತಂದಿರುವ ಎಪಿಎಂಸಿ ಕಾಯ್ದೆ, ವಿದೇಶಿ ಬೀಜ ಕಾಯ್ದೆ, ಭೂಸುಧಾರಣಾ ಹೆಸರಿನಲ್ಲಿ ರೈತಾಪಿ ಜನರನ್ನು ಬೀದಿಗೆ ತಳ್ಳುವ ಕಾಯ್ದೆ, ರೈತರಿಗೆ ಮಾರಕವಾಗುವ ಕಾಯ್ದೆಗಳನ್ನು ಹಿಂಪಡೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ, ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಲ್ಲಮ್ಮ, ಖಜಾಂಚಿ ವಿಶಾಲಾಕ್ಷಿ ಮೃತ್ಯುಂಜಯ, ರೇಣುಕಮ್ಮ, ಸಿ.ಬಿ. ಕಾಳಮ್ಮ, ಕೆ. ಸುಧಾ, ಅಂಬುಜ, ಜ್ಯೋತಿ, ರಾಧಾ, ಮಂಗಳ, ಭಾಗ್ಯಲಕ್ಷ್ಮಿ, ಅಂಜಿನಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

# ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ನಗರದಲ್ಲಿ ಸೈಕಲ್ ಜಾಥಾ




ದಾವಣಗೆರೆ, ಡಿ.5- ಜಿಲ್ಲಾ ಪೊಲೀಸ್ ಮತ್ತು ಆರ್ ಟಿಓ ಇಲಾಖೆ ಜಂಟಿಯಲ್ಲಿ ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ಇಂದು ನಗರದ ಜಯದೇವ ವೃತ್ತದಿಂದ ನಗರದ ವಿವಿಧ ಮುಖ್ಯ ರಸ್ತೆಗಳಲ್ಲಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಪೊಲೀಸ್ ಅಧೀಕ್ಷಕ ಹನುಮಂತರಾಯ ಅವರು ಸೈಕಲ್ ಸವಾರಿ ಮಾಡುವ ಮುಖೇನ ಜಾಥಾಕ್ಕೆ ಚಾಲನೆ ನೀಡಿದರು. ನಕಲಿಗೆ ಆಸೆಪಟ್ಟು ಅಸಲಿ ಕಳೆದುಕೊಳ್ಳದಿರಿ ಜೋಕೆ, ಮಕ್ಕಳ ಕಾನೂನು ಬಲು ಕಠಿಣ ಜೋಕೆ, ಎಲ್ಲಾ ಕಳೆದುಕೊಳ್ಳುವ ಮುನ್ನ ಪ್ರಜ್ಞಾವಂತರಾಗುವುದು ಚನ್ನ, ದುರಾಸೆಯ ಸಹವಾಸ ಮನೆ-ಮಂದಿ ಉಪವಾಸ ಎಂಬಿತ್ಯಾದಿ ಅಪರಾಧ ಕುರಿತ ಮುನ್ನೆಚ್ಚರಿಕಾ ಸಂದೇಶದ ವಾಕ್ಯ ಗಳುಳ್ಳ ಫಲಕಗಳನ್ನು ಸೈಕಲ್ ನಲ್ಲಿ ಪ್ರದರ್ಶಿಸುತ್ತಾ ಜನ ಜಾಗೃತಿ ಮೂಡಿಸಲಾಯಿತು.

ಸೈಕಲ್ ಜಾಥಾದಲ್ಲಿ ಆರ್.ಟಿ.ಓ ಅಧಿಕಾರಿ ಶ್ರೀಧರ್, ಪೊಲೀಸ್ ಉಪಾಧೀಕ್ಷಕ ನಾಗೇಶ್ ಐತಾಳ್, ಪ್ರಶಾಂತ್ ಜಿ. ಮುನ್ನೋಳಿ, ಪಿ.ಬಿ. ಪ್ರಕಾಶ್, ನರಸಿಂಹ ವಿ ತಾಮ್ರಧ್ವಜ, ಪೊಲೀಸ್ ನಿರೀಕ್ಷಕರುಗಳಾದ ಗಜೇಂದ್ರಪ್ಪ, ಗುರುಬಸವರಾಜ, ಸತೀಶ್ ಕುಮಾರ್, ಕಿರಣ್ ಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ರಾಣೇಬೆನ್ನೂರಿನ ಸ್ನೇಹ ದೀಪ ಸಂಸ್ಥೆಯಲ್ಲಿ ವಿಕಲಚೇತನರ ದಿನಾಚರಣೆ



ರಾಣೇಬೆನ್ನೂರು, ಡಿ.5- ಸ್ನೇಹದೀಪ ಅಂಧ ಅಂಗವಿಕಲರ ಸಂಸ್ಥೆಯಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟಕರಾಗಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಬಿ.ಜಿ. ಪ್ರಮೋದ ಆಗಮಿಸಿದ್ದರು. ಸ್ನೇಹದೀಪ ಅಂಧ ಅಂಗವಿಕಲರ ಸಂಸ್ಥೆಯ ನಿರ್ದೇಶಕ ಡಾ. ಗಿರೀಶ್ ಕೆಂಚಪ್ಪನವರ ಅಧ್ಯಕ್ಷತೆ ವಹಿಸಿದ್ದರು.

ವಕೀಲರ ಸಂಘದ ಅಧ್ಯಕ್ಷ ಎಂ.ಬಿ. ಗೌಡಪ್ಪಗೌಡ್ರ, ವಿಠಲ ವೈ. ಪುರಾಣಿಕ, ಸಹಾಯಕ ಲೆಕ್ಕಾಧಿಕಾರಿಗಳು (ಹೆಸ್ಕಾಂ) ರಾಜ್ ಚಂದ್ರಪ್ಪ, ವೆಂಕೀಸ್ ಚಿಕನ್ ಫ್ಯಾಕ್ಟರಿ ಲೆಕ್ಕಪತ್ರ ವಿಭಾಗದ ಅರುಣ್ ಕೋಳೂರು, ಮೆಕ್ಯಾನಿಕಲ್ ಎಂಜಿನಿಯರ್ ಹನುಮಂತಪ್ಪ ಮತ್ತಿತರರು ಭಾಗವಹಿಸಿದ್ದರು.

ವಕೀಲ ಎಂ.ಬಿ. ಜಾಡರ್ ಇವರು ವಿಕಲಚೇತನರಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಇರುವ ಸೌಲಭ್ಯಗಳ ಬಗ್ಗೆ ತಿಳಿಸಿಕೊಟ್ಟರು. ರಾಣೇಬೆನ್ನೂರು ತಾಲ್ಲೂಕು ಸೇವಾ ಸಮಿತಿ, ರಾಣೇಬೆನ್ನೂರು ನ್ಯಾಯವಾದಿಗಳ ಸಂಘ ಹಾಗೂ ಸ್ನೇಹದೀಪ ಅಂಧ, ಅಂಗವಿಕಲರ ಸಂಸ್ಥೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಕಾನೂನು ಅರಿವು, ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

# ಸೈನಿಕ ಶಾಲೆ : ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ


ದಾವಣಗೆರೆ, ಡಿ. 5- ಅಖಿಲ ಭಾರತ ಸೈನಿಕ ಶಾಲಾ ಪರೀಕ್ಷೆ (ಎಐಎಸ್‌ಎಸ್‌ಇಇ) 2021ಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿ ವಿಸ್ತರಿಸಲಾಗಿದೆ.

ಅರ್ಜಿದಾರರಿಗೆ ಜಾತಿ/ವರ್ಗ ಪ್ರಮಾಣ ಪತ್ರ ಪಡೆದು ಸಲ್ಲಿಸುವಲ್ಲಿ ಆಗುತ್ತಿದ್ದ ತೊಂದರೆಯ ಹಿನ್ನೆಲೆಯಲ್ಲಿ ಅರ್ಜಿ ಅವಧಿ ವಿಸ್ತರಿಸಿದ್ದು ಇದೇ ದಿನಾಂಕ 18 ರ ಸಂಜೆ 5 ಗಂಟೆವರೆಗೆ ಅರ್ಜಿ ಸಲ್ಲಿಸಬಹುದಾಗಿದ್ದು ದಿನಾಂಕ 12 ರ ರಾತ್ರಿ 11.50 ರವರೆಗೆ ಶುಲ್ಕ ಭರಿಸಬಹುದು. ಡಿಸೆಂಬರ್ 3ನೇ ವಾರ ಕರೆಕ್ಷನ್ ವಿಂಡೋ ಅವಧಿಯಾಗಿದೆ.

ಹೆಚ್ಚಿನ ಮಾಹಿತಿಗಾಗಿ ಎನ್‌ಟಿಎ ವೆಬ್‌ಸೈಟ್ www.nta.ac.in ಹಾಗೂ ಎನ್‌ಟಿಎ ಹೆಲ್ಪ್‌ಡೆಸ್ಕ್ ಸಂಖ್ಯೆ 012068951200 ಅಥವಾ ಎನ್‌ಟಿಎ aissee@nta.ac.in ನ್ನು ವೀಕ್ಷಿಸಬಹುದು.

## ಪದವಾಣಿ-10

ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**

02) ಮುಖ ಮೇಲಾಗಿ, ಬೆನ್ನು ಹಚ್ಚಿ ಮಲಗಿ 3
05) ಉಗುರನ್ನು ಕೆಂಪು ಮಾಡಲು ಹಚ್ಚುವ ಗೋರಂಟಿ ಕೊನೆಗೆ ದೀರ್ಘವಾಗಿದೆ 4
07) ಪಾದರಸವುಳ್ಳ ಸಮತಳ ಪರೀಕ್ಷಿಸುವ ಒಂದು ಸಾಧನ 4
09) ದೇಹಕ್ಕೆ ಸಂಬಂಧಿಸಿದ ಕೆಲಸ ಕೊನೆಗೆ ದೀರ್ಘವಾಗಿದೆ 3
10) ಕಾಲವನ್ನು ತಿಳಿಸುವ ಯಂತ್ರ 4
12) ಕೊನೆಗಿರುವ ಯೋಗಿಯಿಂದ ದೊರೆತ ಸೋಡಿ 4
15) ಮಿತ್ರತ್ವ ಎಂಬರ್ಥದ ಮತ್ತೊಂದು ಪದ 4
18) ಜೋಗದಲ್ಲಿ ನೀರು ಧುಮುಕ್ಕುವ ಸ್ಥಳ 4
20) ಸ್ತ್ರೀಯರ ರೂಪ, ಗುಣಗಳಿಗೆ ತಕ್ಕಂತಹ ಒಂದು ಜಾತಿ 3
21) ವಾಂತಿ ಬರುವಿಕೆಯ ಪರ್ಯಾಯ ಪದ ಕೊನೆಗೆ ದೀರ್ಘವಾಗಿದೆ 4
22) ಬನಾರಸ ಪಟ್ಟಣವನ್ನು ಹೀಗೂ ಕರೆಯುವುದುಂಟು 4
24) ಇದು ಒಂದು ಬಗೆಯ ಲೋಹ 3

**ಮೇಲಿನಿಂದ ಕೆಳಕ್ಕೆ :**

01) ಇದು ಪಟ್ಟಣವಲ್ಲ, ಸಣ್ಣಹಳ್ಳಿ 2
02) ಒಪ್ಪಿಗೆ, ಸಮ್ಮತಿ 4
03) ಅಡುಗೆಗಾಗಿ ಬಳಸುವ ಬಗೆ ಬಗೆಯ ಕಾಯಿಪಲ್ಯ, ಸೊಪ್ಪು 4
04) ಮನೆಯ ಒಳಗಡೆ ಸಾಮಗ್ರಿಗಳನ್ನು ಇಡಲು ಮಾಡಿದ ಒಳ ಅಂತಸ್ತು 2
06) ಒಂದು ಚಿಕ್ಕ ತಮಟೆಯೂ ಹೌದು, ನಾಣ್ಯವೂ ಹೌದು 3
08) ಇದು ಪಶ್ಚಿಮ ಘಟ್ಟದ ಒಂದು ಪರ್ವತ ಪ್ರದೇಶ 3
10) ವೀಳ್ಯದೆಲೆಯನ್ನು ಮಡಿಸಿದ ತಾಂಬೂಲ/24 ನಿಮಿಷ ಕಾಲ/ಬಟ್ಟೆಯ ಮಡಿಕೆ 3
11) ಸಿದ್ಧತೆ ಮಾಡಿಕೊಳ್ಳುವಿಕೆ ಅಸ್ತವ್ಯಸ್ತವಾಗಿದೆ 3
13) ಅಡುಗೆಗೆ ಉಪಯೋಗಿಸುವ ಒಂದು ಸುಗಂಧ ದ್ರವ್ಯ ಚೆಲ್ಲಾಪಿಲ್ಲಿಯಾಗಿದೆ 3
14) ಬಾವಿಯಿಂದ ನೀರೆತ್ತುವ ಸಾಧನ 2
16) ಉದ್ದವಾಗಿ ಬಾಗಿರುವ ತುತ್ತೂರಿ ತಲೆಕೆಳಗಾಗಿದೆ 3
17)ಯಮನಿಂದ ಬ್ರಹ್ಮಜ್ಞಾನ ಪಡೆದ ಈ ಬಾಲಕ ವಾಜಶ್ರವ ಋಷಿಯ ಮಗ 4
18) ಇದು ಯಾವ ವಾರವೂ ಅಲ್ಲ. ಯಜ್ಞೋಪವೀತ 4
19) ಮೂರಕ್ಷರದ ವಿಷ ಕೊನೆಗೆ ದೀರ್ಘವಾಗಿದೆ. 3
21) ನುಡಿಸುವ ಸಂಗೀತದ ಸಾಧನ 2
23) ಗ್ರಾಮದೇವತೆಗೆ ಮಾಡುವ ಒಂದು ಬಗೆಯ ಸೇವೆ 2

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ – 09ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ದಾವಣಗೆರೆ 3) ಕಂಬಳ 5) ಲಂಬ 6) ಬೇಸರಿಕೇ 7) ಪವಾಡ 9) ಶಬರ 11) ವ್ಯಸನ 13) ಸಂತಸ 16) ಭಕ್ತಿಗೀತೆ 18) ನಸ್ಯ 19) ಸಮೀಕ್ಷೆ 20) ರಂಗಮಂದಿರ

ಮೇಲಿನಿಂದ ಕೆಳಕ್ಕೆ : 1) ದಾರಿದೀಪ 2) ಗೆಲಿಸ (ಸಲಿಗೆ) 3) ಕಂಬ 4) ಳವದ (ದವಳ) 5) ಲಂಕೇಶ 6) ಬೇಡ 8) ವಾಯವ್ಯ 10) ರಕುತ 12) ನಭಸ್ಯ 13) ಸಂತೆ 14) ಸರಕಾರ 15) ಮಾನಸ 17) ಗೀಜಗ 18) ನಕ್ಷೆ

## ಕನ್ನಡ ಸಾಧಕರಿಗೆ ಬಿಎಸ್‌ಸಿ ಸನ್ಮಾನ



ದಾವಣಗೆರೆ, ಡಿ.5- ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಗರದ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಶ್ರೀಮತಿ ಜಸ್ಟಿನ್ ಡಿ'ಸೌಜ, ಛಾಯಾಗ್ರಾಹಕ ವಿವೇಕ್, ಸಮಾನ ಮನಸ್ಕರ ಸೇವಾ ಸಮಿತಿ ಸಂಸ್ಥಾಪಕ ಅಧ್ಯಕ್ಷ ಅಬ್ದುಲ್ ಸತ್ತಾರ್ ಸಾಬ್ ಅವರುಗಳನ್ನು ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್‌ನ ಶಾಖೆಯಾದ ಬಿ.ಎಸ್.ಸಿ. ಎಕ್ಸ್‌ಕ್ಲೂಸಿವ್ ಶೋರೂಂ ಮಳಿಗೆಯ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಮಾಲೀಕರಾದ ಬಿ.ಯು. ಚಂದ್ರಶೇಖರ್, ಶ್ರೀಮತಿ ಮಧು ಚಂದ್ರಶೇಖರ್, ಬಿ.ಸಿ. ವಿವೇಕ್ ಮತ್ತಿತರರು ಉಪಸ್ಥಿತರಿದ್ದರು. ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಕಾರ್ಯಕ್ರಮ ನಿರೂಪಿಸಿದರು.

## ಹರಪನಹಳ್ಳಿ: ಸಾಧಕರಿಗೆ ಸನ್ಮಾನ



ಹರಪನಹಳ್ಳಿ, ಡಿ.5- ಪಟ್ಟಣದ ವಾಲ್ಮೀಕಿ ನಗರದ ದೊಡ್ಡ ಗರಡಿಕೇರಿಯ ಜರ್ಮಲಿ ದುರುಗಮ್ಮ ದೇವಿಯ ಕಳಸಾರೋಹಣ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮದ ನಿಮಿತ್ತ ವಿವಿಧ ರಂಗಗಳಲ್ಲಿ ಸಾಧನೆಗೈದ ಮಹನೀಯರಿಗೆ ಸನ್ಮಾನಿಸಲಾಯಿತು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ, ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತ್‌ಕರ್, ಅಧ್ಯಕ್ಷೆ ನಿಟ್ಟೂರು ಭೀಮವ್ವ. ಬಿಜೆಪಿ ತಾಲ್ಲೂಕು ಅಧ್ಯಕ್ಷ ಕೆ.ಎಂ. ಬಸವರಾಜಯ್ಯ, ಪುರಸಭೆ ಸದಸ್ಯರುಗ ಳಾದ ಟಿ. ವೆಂಕಟೇಶ, ಎಂ.ವಿ. ಅಂಜಿನಪ್ಪ, ಉದ್ದಾರ ಗಣೇಶ, ಕಿರಣ ಕುಮಾರ್. ಎಂ.ಕೆ. ಜಾವೀದ್. ಎಚ್. ಕೊಟ್ರೇಶ್. ಮುಖಂಡರಾದ ಎಂ.ಪಿ. ನಾಯ್ಕ, ಬಾಗಳಿ ಕೊಟ್ರೇಶಪ್ಪ, ನೀಲಗುಂದ ವಾಗೀಶ, ಚಿಕ್ಕೇರಿ ಬಸಪ್ಪ, ತಾಲ್ಲೂಕು ಬಿಜೆಪಿ ಪುರಸಭೆ ಮಾಜಿ ಸದಸ್ಯ ಎಂ. ದುರುಗಪ್ಪ, ಮುಖಂಡರಾದ ಬಾಣದ ಅಂಜಿನಪ್ಪ, ರಾಯದುರ್ಗದ ದುರುಗಪ್ಪ. ಎಂ. ಉಚ್ಚೆಂಗೆಪ್ಪ, ಮ್ಯಾಕಿ ದುರುಗಪ್ಪ, ನಿಟ್ಟೂರು ದೊಡ್ಡಹಾಲಪ್ಪ, ಕೆ. ಅಂಜಿನಪ್ಪ, ಕಮ್ಮಾರ ಹಾಲಪ್ಪ, ಚಿನ್ನುಡಿಗಿ ನಾಗರಾಜ, ಗಿಡ್ಡಳ್ಳಿ ಬಸವರಾಜ, ಮ್ಯಾಕಿ ಸಣ್ಣಹಾಲಪ್ಪ ಇನ್ನಿತರರಿದ್ದರು.

## ಸಾಧನಾ ಟ್ರಸ್ಟ್‌ನಿಂದ ರಾಜ್ಯೋತ್ಸವ

ದಾವಣಗೆರೆ, ಡಿ.5- ಕರ್ನಾಟಕ ಮಹಿಳಾ ಮತ್ತು ಮಕ್ಕಳ ಸಾಧನಾ ಅಭಿವೃದ್ಧಿ ಚಾರಿಟೇಬಲ್ ಟ್ರಸ್ಟ್‌ವತಿಯಿಂದ ಸಾಧನ ಅನಾಥಾಶ್ರಮ ಮತ್ತು ವೃದ್ಧಾಶ್ರಮದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಯಿತು. ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಡಾ. ಪುಷ್ಪಲತಾ ಪವಿತ್ರರಾಜ್ ಅಧ್ಯಕ್ಷತೆ ವಹಿಸಿದ್ದರು. ಗುರು, ಶರೀಫ್, ಚಂದ್ರಪ್ರಭಾ. ಅನುಶ್ರೀ ಉಪಸ್ಥಿತರಿದ್ದರು.

# ನದಾಫ್ - ಪಿಂಜಾರ್ ಜನಾಂಗಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯ



ದಾವಣಗೆರೆ, ಡಿ.5- ಸಂಪೂರ್ಣ ಶ್ರಮಿಕ ಸಮಾಜವೆನಿಸಿರುವ ನದಾಫ್ - ಪಿಂಜಾರ್ ಸಮಾಜಕ್ಕೆ ಮೂಲಭೂತ ಸೌಕರ್ಯ ಕಲ್ಪಿಸುವುದು ಹಾಗೂ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯಿಸಿ, ಕರ್ನಾಟಕ ರಾಜ್ಯ ನದಾಫ್ ಪಿಂಜಾರ್ ಸಂಘದ ಜಿಲ್ಲಾ ಮತ್ತು ನಗರ ಘಟಕದಿಂದ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಸಂಪೂರ್ಣ ಆರ್ಥಿಕ ಅಸಮಾನತೆಯಿಂದ ಅತ್ಯಂತ ದುಸ್ಥಿತಿಯಲ್ಲಿದ್ದರೂ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಅತೀ ಹಿಂದುಳಿದ ಸಮಾಜವೆನಿಸಿದ್ದರೂ ಆಳುವ ಸರ್ಕಾರಗಳ ಕೃಪೆಗೆ ಪಾತ್ರವಾಗದೇ ಇರುವುದು ವಿಷಾದನೀಯ. ಸರ್ಕಾರದ ಆದೇಶ ಸಂಖ್ಯೆ ಸ.ಕ.ಇ. 150 ಬಿ.ಸಿ.ಎ., 94 ದಿನಾಂಕ 17-09-1994ರ ಆದೇಶದಂತೆ ಪ್ರವರ್ಗ-1ರಡಿಯಲ್ಲಿ ಜಾತಿ ಸೂಚಕ ಪ್ರಮಾಣ ಪತ್ರ ಹಾಗೂ ಆದಾಯ ದೃಢೀಕರಣ ಪತ್ರ ನೀಡುವಲ್ಲಿ ತೊಂದರೆಯನ್ನು ಅನುಭವಿಸಬೇಕಿದೆ. ಈ ವ್ಯತ್ಯಾಸದಿಂದ ಸಮಾಜದ ಮಕ್ಕಳ ಶೈಕ್ಷಣಿಕ ವ್ಯವಸ್ಥೆಗೆ ಧಕ್ಕೆಯಾಗಲಿದೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ನಮ್ಮ ಸಮಾಜ ಅಭಿವೃದ್ಧಿಯಾಗಲು ಸರ್ಕಾರ ಪ್ರತ್ಯೇಕ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದರೆ ತನ್ಮೂಲಕ ಸಮಾಜ ಅಭಿವೃದ್ಧಿಯ ಪಥದತ್ತ ಸಾಗಲು ಅನುಕೂಲವಾಗುತ್ತದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

**ಪ್ರಮುಖ ಬೇಡಿಕೆಗಳು:** ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ, ಸ್ವಯಂ ಉದ್ಯೋಗಕ್ಕಾಗಿ ಸಬ್ಸಿಡಿ ಸಹಿತ ಸಾಲ, ಹಾಸಿಗೆ, ದಿಂಬು ಇತ್ಯಾದಿ ಯಂತ್ರ ಸಾಮಗ್ರಿಗಳನ್ನು ಸರ್ಕಾರ ಉಚಿತವಾಗಿ ನೀಡುವುದು, ಹತ್ತಿಯನ್ನು ರಿಯಾಯಿತಿ ದರದಲ್ಲಿ ಒದಗಿಸುವುದು, ಬಡವರಿಗೆ ಆಶ್ರಯ ಮನೆಗಳನ್ನು ನೀಡುವುದು, ಕುಶಲಕರ್ಮಿಗಳನ್ನು ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿಸಿ ಸೌಲಭ್ಯಗಳನ್ನು ಒದಗಿಸುವುದು, ಇ.ಎಸ್.ಐ ಸೌಲಭ್ಯವನ್ನು ಒದಗಿಸುವುದು, ಉನ್ನತ ಶಿಕ್ಷಣ ಅಂದರೆ ವೈದ್ಯಕೀಯ, ತಾಂತ್ರಿಕ ಶಿಕ್ಷಣ ಪಡೆಯಲು ಸರ್ಕಾರ ಉಚಿತ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸುವುದು ಸೇರಿದಂತೆ, ವಿವಿಧ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಜೆ.ಹೆಚ್. ಉಕ್ಕಡಗಾತ್ರಿ, ಅಪರ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಿ ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ನಗರ ಘಟಕದ ಅಧ್ಯಕ್ಷ ಎ.ಆರ್. ಅನ್ವರ್ ಹುಸೇನ್, ಉಪಾಧ್ಯಕ್ಷ ಮಹ್ಮದ್ ಅಲಿ, ವಿಭಾಗೀಯ ಉಪಾಧ್ಯಕ್ಷ ಡಿ.ಬಿ. ಹಸನ್‌ಪೀರ್, ಎ.ಫಕ್ರುದ್ದೀನ್, ಶೌಕತ್ ಅಲಿ ಮತ್ತಿತರರು ಉಪಸ್ಥಿತರಿದ್ದರು.

## ಕಾಡುಗೊಲ್ಲ ಜನಾಂಗದ ಅಭಿವೃದ್ಧಿ ನಿಗಮಕ್ಕೆ ಸಿಗದ ಅನುದಾನ: ಆರೋಪ

ದಾವಣಗೆರೆ, ಡಿ.5- ಕಾಡುಗೊಲ್ಲ ಜನಾಂಗದ ಅಭಿವೃದ್ಧಿ ನಿಗಮವನ್ನು ಹೆಸರಿಗೆ ಮಾತ್ರ ಸ್ಥಾಪಿಸಿದ್ದು, ನಿಗಮಕ್ಕೆ ಅನುದಾನ ನೀಡದೇ ರಾಜ್ಯ ಸರ್ಕಾರವು ಕಾಡುಗೊಲ್ಲ ಜನಾಂಗವನ್ನು ಕಡೆಗಣಿಸಿದೆ ಎಂದು ಕರ್ನಾಟಕ ರಾಜ್ಯ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಸಿ. ಶಿವು ಯಾದವ್ ಆರೋಪಿಸಿದರು.

ಶಿರಾ ಉಪ ಚುನಾವಣೆಯ ಕಾರಣ ತರಾತುರಿಯಲ್ಲಿ ಕಾಡುಗೊಲ್ಲ ಜನಾಂಗದ ಅಭಿವೃದ್ಧಿ ನಿಗಮವನ್ನು ಹೆಸರಿಗೆ ಮಾತ್ರ ಸ್ಥಾಪಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅದಕ್ಕೆ ಅಧ್ಯಕ್ಷರು, ಪದಾಧಿಕಾರಿಗಳ ನೇಮಕ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಬೇರೆ ಸಮಾಜದ ನಿಗಮವನ್ನು ಘೋಷಿಸಿ ತಕ್ಷಣ ಅನುದಾನ ಮಂಜೂರು ಮಾಡಿದಂತೆ ಕಾಡುಗೊಲ್ಲ ಜನಾಂಗದ ನಿಗಮಕ್ಕೆ ಅನುದಾನ ನೀಡಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಕಾಡುಗೊಲ್ಲ ಸಮಾಜವನ್ನು ಪ್ರತಿನಿಧಿಸುವ ಒಬ್ಬ ಶಾಸಕ, ವಿಧಾನ ಪರಿಷತ್ ಸದಸ್ಯರು ಇಲ್ಲ. ಕಾಡುಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ 2014ರಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಬಳಿಕ ಈ ಬಗ್ಗೆ ತಿಳಿದಿಲ್ಲ ಎಂದರು.

ನಾಳೆ ದಿನಾಂಕ 6ರ ಭಾನುವಾರ ಯಾದವ ಸಮಾಜದ ಮುಖಂಡ ಡಿ.ಟಿ. ಶ್ರೀನಿವಾಸ್ ಕರೆದಿರುವ ಸಭೆಗೂ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘಕ್ಕೂ ಯಾವುದೇ ಸಂಬಂಧವಿಲ್ಲ ಎಂದರು.

ಸಂಘದ ಮಾರ್ಗದರ್ಶಕ ಮಲ್ಲಿಕಾರ್ಜುನ ಕಲಮರಹಳ್ಳಿ ಮಾತನಾಡಿ, ಕಾಡುಗೊಲ್ಲರು ಅಚ್ಚ ಕನ್ನಡದ ಬುಡಕಟ್ಟು ಸಮುದಾಯ. ಯಾದವ ಗೊಲ್ಲರೇ ಬೇರೆ, ಕಾಡುಗೊಲ್ಲರೇ ಬೇರೆ. ಎಲ್ಲವೂ ಒಂದೇ ಎಂದು ಯಾದವ ಸಮಾಜದ ಮುಖಂಡರು ಗೊಂದಲ ಸೃಷ್ಟಿಸುತ್ತಿದ್ದಾರೆ. ಸಮುದಾಯವನ್ನು ಎಸ್‌ಟಿಗೆ ಸೇರಿಸಲು ಅಡ್ಡಿಪಡಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಎಸ್. ತಿಮ್ಮಯ್ಯ, ಎಸ್.ಎನ್. ಗಂಗಾಧರಪ್ಪ, ಶೇಷಪ್ಪ, ಪ್ರವೀಣ್, ಪ್ರಕಾಶ್ ಇದ್ದರು.

## ಅನ್‌ಮೋಲ್‌ನಲ್ಲಿ ಕನಕದಾಸ ಜಯಂತಿ

ದಾವಣಗೆರೆ, ಡಿ. 5- ಅನ್‌ಮೋಲ್ ವಿದ್ಯಾಸಂಸ್ಥೆಯಲ್ಲಿ 'ಕನಕದಾಸ ಜಯಂತಿ' ಆಚರಿಸಲಾಯಿತು. ಅನ್‌ಮೋಲ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಉಮೇಶ್ ಅವರು ಕನಕದಾಸರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಕ ಎಂ. ಸಂಗಪ್ಪ, ಕಂಪ್ಯೂಟರ್ ಶಿಕ್ಷಕ ಎಂ.ಪಿ. ಶಿವಕುಮಾರ್, ಕಿರಣ್ ಕುಮಾರ್ ಹಾಗೂ ಅಕೌಂಟೆಂಟ್ ವಿಜಯ್ ಕುಮಾರ್ ಭಾಗವಹಿಸಿದ್ದರು.

## ಎಡಪಕ್ಷಗಳ ಬೆಂಬಲ

**(1ನೇ ಪುಟದಿಂದ)** ಎಐಎಫ್‌ಬಿಯ ದೇಬಬ್ರತ ಬಿಸ್ವಾಸ್ ಹಾಗೂ ಆರ್‌ಎಸ್ ಪಿಯ ಮನೋಜ್ ಭಟ್ಟಾಚಾರ್ಯ ಸಹಿ ಹಾಕಿದ್ದಾರೆ. ವಿವಾದಿತ ಮೂರು ಕೃಷಿ ಕಾಯ್ದೆಗಳು ಹಾಗೂ 2020ರ ವಿದ್ಯುತ್ ಮಸೂದೆ ತಿದ್ದುಪಡಿಯನ್ನು ಎಡಪಕ್ಷಗಳು ವಿರೋಧಿಸುತ್ತಿದ್ದು, ಇವುಗಳನ್ನು ವಾಪಸ್ ಪಡೆಯಬೇಕು ಎಂದೂ ಸಹ ಆಗ್ರಹಿಸಲಾಗಿದೆ.

## ಕೊರೊನಾ ಲಸಿಕೆ ಪಡೆದಿದ್ದ ಸಚಿವಗೆ ಸೋಂಕು

**(1ನೇ ಪುಟದಿಂದ)** ದಾಖಲಾಗಿದ್ದೇನೆ. ನನ್ನ ನಿಕಟ ಸಂಪರ್ಕಕ್ಕೆ ಬಂದವರೂ ಕೊರೊನಾ ಪರೀಕ್ಷೆಗೆ ಒಳಗಾಗಿ ಎಂದು ವಿಜ್ ಟ್ವೀಟ್ ಮಾಡಿದ್ದಾರೆ.

ನನಗೆ ಗಂಟಲು ನೋವು, ಜ್ವರ ಹಾಗೂ ಮೈ ನೋವು ಬಂದಿದೆ.

ಒಟ್ಟಾರೆ ನನ್ನ ಆರೋಗ್ಯ ಸ್ಥಿರವಾಗಿದೆ ಎಂದು ವಿಜ್ ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವಾಲಯ, ಮೊದಲ ಡೋಸ್ ನೀಡಿದ ನಿರ್ದಿಷ್ಟ ದಿನಗಳ ನಂತರ ಎರಡನೇ ಡೋಸ್ ನೀಡಲಾಗುತ್ತದೆ. ಸಚಿವರು ಕೇವಲ ಮೊದಲ ಡೋಸ್ ಪಡೆದಿದ್ದಾರೆ ಎಂದು ತಿಳಿಸಿದೆ.

## ದಿನದ ಚುಟುಕು

ಅಂದು, ಫಸಲು ತಿನ್ನಬಾರದೆಂದು
ಎತ್ತು, ಎಮ್ಮೆಗಳ ಬಾಯಿಗೆ ಕುಕ್ಕೆ...
ಇಂದು, ರೋಗ ಹರಡಬೇಡಿರೆಂದು
ಮನುಜರ ಬಾಯಿಗೆ ಗವಸು ಕೊಕ್ಕೆ!!

- ವೀಕೆಎಂ

## ಮನದ ಚಾಂಚಲ್ಯ ಬಿಡಿಸೊ ಹರಿಯೇ

ಕ್ಷಣಮಾತ್ರದಲ್ಲಿ ಉಬ್ಬಿ ಹಿಗ್ಗುವುದು
ಕ್ಷಣಾರ್ಧದಲ್ಲಿ ಕುಗ್ಗಿ ಸೊರಗುವುದು
ಕಣಕಣದಲೂ ಭಯ ತುಂಬಿರುವುದು
ತಣಿಯದ ಆನಂದ ಅವಿತಿರುವುದು

ಮನವ ಹಿಡಿಯುವ ಪರಿಯು ಯಾವುದಯ್ಯ
ಮನದ ಚಾಂಚಲ್ಯವನು ನೀನು ಬಿಡಿಸಯ್ಯ
ಮನದಲ್ಲಿ ನಿನ್ನನು ತೋರಿಸಯ್ಯ
ಮನಸಿಜ ಪಿತನೆ ಅನುಗ್ರಹಿಸಯ್ಯ

ಕಾನನದಿ ಕಳೆದ್ಹೋದ ಮಗುವಿನಂತೆ
ಬಾನಲ್ಲಿ ಮರೆಯಾದ ನೀರ ಹನಿಯಂತೆ
ತನ್ನನ್ನು ತಾ ಮರೆತ ಮಾನವನಂತೆ
ತನುಮನ ನಲುಗಿದೆ ಹುಳುವಿನಂತೆ

ಕಣ್ಣು ಕಟ್ಟಿ ಬಿಟ್ಟ ಕುದುರೆಯಂತೆ ಪಯಣ
ಬಣ್ಣದಾ ಬಯಲೋ ಮುಂದೆ ಪ್ರತಾಪವೋ
ಅಣ್ಣ ಕರೆದೊಯ್ದೆಡೆ ನಡೆಯಲೇಬೇಕು
ತಣ್ಣಗೆ ಬಂದುದನುಭವಿಸಬೇಕು

ನೀನು ನಡೆಸಬೇಕು ಭವಕಳೆಯಬೇಕು
ನೀನು ಉದಯಿಸಿ ಕತ್ತಲ ತರಿಯಬೇಕು
ನೀನೆ ಸಿರಿಹರಿ ಸಲಹಿ ಪೊರೆಯಬೇಕು
ನೀನೆ ಗತಿ ಎಂದವರ ಕಾಯಬೇಕು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ನಿಸರ್ಗ ನೀ ಸಗ್ಗ

ಪರಿಸರದ ಮೇಲಣ ಅನಾಚಾರ
ನಿರಂತರ ನಡೆಯುವ ಅತ್ಯಾಚಾರ
ಕಂಡು ಕಂಡು ಬೇಸತ್ತು ಭೂರಮೆ
ಕಣ್ಣೀರು ಸುರಿಸಿದಳು ವರ್ಷಧಾರೆಯಲಿ
ಜಾಡಿಸಿ ಕೊಡವಿದಳು ಭೂಕಂಪದಲ್ಲಿ
ಚಂಡಿ ಚಾಮುಂಡಿಯಾದಳು ಮಾರುತದಲ್ಲಿ
ಬೆಂಕಿಯನುಗುಳಿದಳು ಲಾವಾರಸದಲ್ಲಿ
ಗರ್ಜಿಸಿ ಗುಡುಗಿದಳು ಸಿಡಿಲಿನಲ್ಲಿ
ಅರಿವಾಗಲೇ ಇಲ್ಲವಲ್ಲ ಮಂದ ಮಂಡೆಗೆ
ನನ್ನದಲ್ಲದ ಅಣು ಅಣುವಿನ ಕಣ
ಮಣ್ಣ ಮಣ್ಣ ಕಣಕು ನಮ್ಮದಿತ್ತು ಋಣ
ದ್ವೇಷ ದಳ್ಳುರಿಯಲ್ಲಿ ಬಂದ ಪಾಪಕೆ
ಬೆಪ್ಪುತಕ್ಕಡಿಯಾದೆ ವೈರಾಣುವಿನಾಟಕೆ
ಕ್ರಿಮಿ,ಕೀಟ,ಪ್ರಾಣಿಗಳನ್ನು ತಿಂದೆ
ಸಂತತಿಯ ನಾಶ ಮಾಡಿ ಕೊಂದೆ
ದಿಗ್ಬಂಧನದಲ್ಲಿ ಸಿಲುಕಿ ನೀ ನೊಂದೆ !
ಮಾಡಿದ್ದುಣ್ಣೋ ಮಹಾರಾಯ...
ನೀ ಮಾಡಿದ ಪಾಪದ ಫಲ
ಸಿಕ್ಕಿತಲ್ಲವೇ ನಿನಗೆ ಪ್ರತಿಫಲ !!
ಅರಿವಾಗಲಿ ಹೇ... ಮನುಜಾ
ನಿಸರ್ಗದ ಮುಂದೆ ನಾನು- ನೀನು
ಏನೇನು ಅಲ್ಲ-- ಏನೇನೂ ಅಲ್ಲ !!!
ನಿಸರ್ಗವೇ ಸಗ್ಗ- ಆಗದಿರಲಿ ನರಕ.

- ವೀಣಾ ಕೃಷ್ಣಮೂರ್ತಿ

# ಕರವೇ ಸ್ವಾಭಿಮಾನಿ ಬಣದಿಂದ ಮಲೇಬೆನ್ನೂರಿನಲ್ಲಿ ರಾಜ್ಯೋತ್ಸವ



ಮಲೇಬೆನ್ನೂರು, ಡಿ.5- ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಇವರ ವತಿಯಿಂದ ಭಾನುವಾರ ಮಲೇಬೆನ್ನೂರು ಮಹಿಳಾ ಘಟಕವನ್ನು ಉದ್ಘಾಟಿಸಿ, ಇಲ್ಲಿನ ನೀರಾವರಿ ಇಲಾಖೆ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಪರ ಹೋರಾಟಗಾರ ಸಾಬೀರ್ ಜಯಸಿಂಹ ಅವರು, ಕನ್ನಡ ಭಾಷೆ ಸುಮಾರು ಎರಡು ನೂರು ವರ್ಷಗಳ ಇತಿಹಾಸ ಹೊಂದಿರುವ ಭಾಷೆಯಾಗಿದ್ದು, ವಿಶ್ವ ಲಿಪಿಗಳ ರಾಣಿ ನಮ್ಮ ನುಡಿ, ಇಂತಹ ಭಾಷೆ ನೆಲ ಜಲ ಸಂರಕ್ಷಣೆಗಾಗಿ ಇವತ್ತು ಮಲೇಬೆನ್ನೂರು ಪಟ್ಟಣದಲ್ಲಿ ಮಹಿಳಾ ಘಟಕ ಸ್ಥಾಪನೆ ಆಗಿರುವುದು ಬಹಳ ಸಂತೋಷದ ವಿಚಾರ ಎಂದು ಹೇಳಿದರು.

ಪಿಎಸ್‌ಐ ವೀರಬಸಪ್ಪ ಮಾತನಾಡಿ, ಮಹಿಳೆಯರು ವಾಟ್ಸಾಪ್, ಫೇಸ್‌ಬುಕ್ ನಂತಹ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಭಾವಚಿತ್ರಗಳನ್ನು ಹಾಕುವಾಗ ಯೋಚಿಸಿ ಹಾಕಿ ಎಂದು ಎಚ್ಚರಿಸಿದರು.

ಮಹಿಳೆಯರು ತಮ್ಮ ಬ್ಯಾಂಕ್ ದಾಖಲೆಗಳನ್ನು ಯಾವುದೇ ಕಾರಣಕ್ಕೂ ಬೇರೆಯವರಿಗೆ ತಿಳಿಸಬಾರದು. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿನ ಅಪರಾಧ ಕೃತ್ಯಗಳಿಗೆ ಮಹಿಳೆಯರೇ ಹೆಚ್ಚು ಬಲಿಪಶುಗಳಾಗುತ್ತಿದ್ದಾರೆ. ಈ ಕಾರಣದಿಂದ ಮಹಿಳೆಯರು ಜಾಗೃತರಾಗಬೇಕೆಂದರು.

ರಾಜ್ಯ ಮಹಿಳಾ ಘಟಕದ ಸಂಚಾಲಕರಾದ ಸುವರ್ಣಮ್ಮ ಅವರು, ಸಂಘಟನೆಯ ಉದ್ದೇಶಗಳನ್ನು ವಿವರಿಸಿದರು. ಪುರಸಭೆ ಅಧ್ಯಕ್ಷೆ ನಹೀದಾ ಅಂಜುಂ, ಹಾಲಿವಾಣದ ಎಸ್. ಜಿ.ಪರಮೇಶ್ವರಪ್ಪ, ತಾಲ್ಲೂಕು ಘಟಕದ ಅಧ್ಯಕ್ಷರಾದ ಚೌಡಮ್ಮ, ಜಿಲ್ಲಾ ಕಾರ್ಯದರ್ಶಿ ಅಂಬಿಕಾ, ಪುರಸಭೆ ಸದಸ್ಯ ಭಾನುವಳ್ಳಿ ಸುರೇಶ್, ಕುಂಬಳೂರು ಸದಾಶಿವ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮಕ್ಕಳ ಲೋಕದಲ್ಲಿ ರಾಜ್ಯೋತ್ಸವ-ಮಕ್ಕಳ ಹಬ್ಬ



ದಾವಣಗೆರೆ, ಡಿ.5- ಶ್ರೀ ಸಿದ್ಧಗಂಗಾ ಮಕ್ಕಳ ಲೋಕದಲ್ಲಿ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳ ಕವಿಗೋಷ್ಠಿ ಆಚರಿಸಲಾಯಿತು.

ಮೂರು ದಿನಗಳ ಕಾಲ ಮಕ್ಕಳ ಹಬ್ಬ ನಡೆಯಿತು. ನಿತ್ಯಶ್ರೀ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಸೇಂಟ್‌ಜಾನ್ಸ್ ಶಾಲೆಯ ಅಕ್ಷತಾ ಬಿಎಂಪಿಗೆ 125 ಅಂಕ ಲಭಿಸಿತು. ಸಂಗೀತ ಗುರುಗಳಾದ ರುಕ್ಮಾಬಾಯಿ ಅವರಿಗೆ ಕಲಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಕ್ಕಳಲೋಕ ಸ್ಥಾಪಕ ಕೆ.ಎನ್. ಸ್ವಾಮಿ ಗೌರವಿಸಿದರು.

ಡಾ. ಚರಿತಾ 75 ಬಡಮಕ್ಕಳನ್ನು ಪರೀಕ್ಷಿಸಿ, ಸಲಹೆ ನೀಡಿದರು. ಮಕ್ಕಳಿಗೆ ರಂಗೋಲಿ ಸ್ಪರ್ಧೆ ನಡೆಸಲಾಯಿತು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಸಿ.ಕೆ. ರುದ್ರಾಕ್ಷಿಬಾಯಿ ಮಾರ್ಗದರ್ಶನ ಮಾಡಿದರು.

ಕಥಾ ಸ್ಪರ್ಧೆಯಲ್ಲಿ ಕೆ.ಟಿ. ಅನುಶ್ರೀ ಪ್ರಥಮ ಬಹುಮಾನ, ನಿತ್ಯಶ್ರೀ ಕೊಂತೆಕಲ್ ಪ್ರಥಮ, ಕನ್ನಡ ಬರವಣಿಗೆ ಸ್ಪರ್ಧೆಯಲ್ಲಿ ಯು. ಸಿಂಚನ ಪ್ರಥಮ, ರಂಗೋಲಿ ಸ್ಪರ್ಧೆಯಲ್ಲಿ ಪೂರ್ಣಿಮಾ ಪ್ರಥಮ, ಅರ್ಪಿತಾ ಬಸವರಾಜ್ ದ್ವಿತೀಯ ಸ್ಥಾನ ಗಳಿಸಿದರು. ಸಿದ್ಧರಾಮಯ್ಯ, ಕೃಷ್ಣ ಜಾಧವ್, ಡಾ. ಚರಿತಾ ಬಹುಮಾನ ಪ್ರಾಯೋಜಕತ್ವ ವಹಿಸಿದ್ದರು. ಚಿನ್ನಸಮುದ್ರದಲ್ಲಿ ಕನ್ನಡ ಬರವಣಿಗೆ ಸ್ಪರ್ಧೆಯಲ್ಲಿ 26 ಮಕ್ಕಳು ಭಾಗವಹಿಸಿ, ಹೆಬ್ಬಾಳು ಗುರುಗಳಿಂದ, ಸೇವಾಲಾಲ್ ಗುರುಗಳಿಂದ ಬಹುಮಾನ ಪಡೆದರು.

ಸಿ.ಕೆ. ರುದ್ರಾಕ್ಷಿ ಬಾಯಿ ಅವರ ಅಭಿನಂದನಾ ಕಾರ್ಯಕ್ರಮವನ್ನು ಎನ್. ಪುಟ್ಟಾನಾಯಕ್ ಸಂಯೋಜಿಸಿದ್ದರು.

# ಎಸ್‌ಟಿ ಸೌಲಭ್ಯಕ್ಕಾಗಿ ಪಾದಯಾತ್ರೆ

**(1ನೇ ಪುಟದಿಂದ)** ಈಗಾಗಲೇ ಎಸ್‌ಟಿ ಪಟ್ಟಿಯಲ್ಲಿದ್ದಾರೆ. ಬೀದರ್, ಕಲಬುರಗಿ ಹಾಗೂ ಯಾದಗಿರಿಗಳಲ್ಲಿ ಕುರುಬರೇ ಆಗಿರುವ ಗೊಂಡ - ರಾಜಗೊಂಡ ಮುಂತಾದವರು ಮೀಸಲಾತಿ ಪಡೆಯುತ್ತಿದ್ದಾರೆ. ಅದನ್ನೇ ಇಡೀ ರಾಜ್ಯಕ್ಕೆ ವಿಸ್ತರಿಸು ವಂತೆ ನಾವು ಕೇಳುತ್ತಿದ್ದೇವೆ ಎಂದರು. ಈ ಮೀಸಲಾತಿಗಾಗಿ ಬರುವ ಜನವರಿ 15ರಿಂದ ಕಾಗಿನೆಲೆಯಿಂದ ಬೆಂಗಳೂರಿಗೆ ಪಾದಯಾತ್ರೆಯನ್ನು ಕೈಗೊಳ್ಳುತ್ತೇವೆ. ಇದರ ಆಯೋಜನೆಗಾಗಿ ಪೂರ್ವಭಾವಿ ಸಭೆಗಳನ್ನು ನಡೆಸುತ್ತಿರುವುದಾಗಿ ಶ್ರೀಗಳು ತಿಳಿಸಿದರು.

ಕಲಬುರಗಿ, ಯಾದಗಿರಿ ಹಾಗೂ ಬೀದರ್‌ಗಳಲ್ಲಿ ಕುರುಬ ಸಮುದಾಯದವರಿಗೆ ಈಗಾಗಲೇ ಎಸ್‌ಟಿ ಮೀಸಲಾತಿ ದೊರೆಯುತ್ತಿದೆ. ಜನಾಂದೋಲನ ನಡೆದಲ್ಲಿ ಅಖಂಡ ಕರ್ನಾಟಕದ ಕುರುಬರಿಗೆ ಈ ಸೌಲಭ್ಯ ಸಿಗಲಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್‌ಟಿ ಹೋರಾಟ ಸಮಿತಿ ರಾಜ್ಯ ಉಪಾಧ್ಯಕ್ಷ ಬಿ.ಎಂ. ಸತೀಶ್, ನಾಯಕ ಹಾಗೂ ಕುರುಬ ಸಮುದಾಯಗಳನ್ನು ಶೈಕ್ಷಣಿಕ ಸೌಲಭ್ಯಕ್ಕಾಗಿ ಎಸ್.ಟಿ.ಗೆ 1984ರಲ್ಲೇ ಸೇರ್ಪಡೆ ಮಾಡಲಾಗಿತ್ತು. ನಾಯಕ ಸಮುದಾಯದವರು ಹೋರಾಟದಿಂದ ಎಸ್.ಟಿ.ಯಲ್ಲೇ ಮುಂದುವರೆದರು. ಆದರೆ, ಆ ಸಂದರ್ಭದಲ್ಲಿ ಕುರುಬರು ಹೋರಾಟ ನಡೆಸದ ಹಾಗೂ ಕನಕ ಗುರುಪೀಠ ಆ ಸಂದರ್ಭದಲ್ಲಿ ಇರದಿದ್ದ ಕಾರಣ ಸೌಲಭ್ಯ ಸಿಗಲಿಲ್ಲ ಎಂದು ವಿಷಾದಿಸಿದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಕಾಗಿನೆಲೆ ಶ್ರೀಗಳ ಪಾದಯಾತ್ರೆ ರಾಜ್ಯದಲ್ಲೇ ಹೆಸರು ಮಾಡಲಿದ್ದು, ಸಂಘಟನೆ ಸಹಕಾರಿಯಾಗಲಿದೆ. ಎಸ್‌ಟಿ ಹೋರಾಟ ರಾಜ್ಯದಲ್ಲಿ ಸಂಚಲನ ಮೂಡಿಸಿದೆ. ಪಾದಯಾತ್ರೆ ನಗರಕ್ಕೆ ಬಂದಾಗ ಹಬ್ಬದ ವಾತಾವರಣ ಮೂಡಿಸಬೇಕು ಎಂದು ಕರೆ ನೀಡಿದರು.

ಸಮಾಜದ ಮುಖಂಡರಾದ ಮಂಜುನಾಥ್, ಜಿ.ಪಂ. ಸದಸ್ಯ ಜೆ.ಸಿ.ಲಿಂಗಪ್ಪ, ಬಿ.ಹೆಚ್. ಪರಶುರಾಮ್, ಕುಣಿಬೆಳಕೆರೆ ದೇವೇಂದ್ರಪ್ಪ, ರಾಜು, ಕುಂಬಳೂರು ವಿರೂಪಾಕ್ಷಪ್ಪ ಮತ್ತಿತರರು ಮಾತನಾಡಿ, ಶ್ರೀಗಳ ನೇತೃತ್ವದ ಪಾದಯಾತ್ರೆ ಯಶಸ್ವಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

ವೇದಿಕೆಯ ಮೇಲೆ ಸಮಾಜದ ಮುಖಂಡರಾದ ಸುನಂದಮ್ಮ ಪರಶುರಾಮಪ್ಪ, ಕುಂದೂರು ವಿರೂಪಾಕ್ಷಪ್ಪ, ಗೋಣೆಪ್ಪ, ಬಿ.ಟಿ. ರಮೇಶ್, ಡಿ.ಹೆಚ್. ಪರಶುರಾಮಪ್ಪ, ಗುರುನಾಥ, ಚನ್ನಪ್ಪ, ಹರಪನಹಳ್ಳಿ ಜಿ.ಪಂ. ಕ್ಷೇತ್ರದ ಸದಸ್ಯ ಬಿ.ಹೆಚ್. ಪರಶುರಾಮಪ್ಪ ಮತ್ತಿತರರು ಉಪಸ್ಥಿತರಿದ್ದರು.

### 24 ದಿನಗಳಲ್ಲಿ 340 ಕಿ.ಮೀ. ಪಾದಯಾತ್ರೆ

ಎಸ್.ಟಿ. ಬೇಡಿಕೆ ಈಡೇರಿಕೆಯ ಹೋರಾಟವನ್ನು ಜನಾಂದೋಲನವಾಗಿ ಪರಿವರ್ತಿಸಲು ಜನವರಿ 15ರ ಸಂಕ್ರಾಂತಿಯಿಂದ 24 ದಿನಗಳ ಕಾಲ ಕಾಗಿನೆಲೆಯಿಂದ ಬೆಂಗಳೂರಿಗೆ 340 ಕಿ.ಮೀ. ದೂರದ ಪಾದಯಾತ್ರೆಯನ್ನು ಕಾಗಿನೆಲೆಯ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಕೈಗೊಳ್ಳಲಿದ್ದಾರೆ.

ಪಾದಯಾತ್ರೆ ಬೆಂಗಳೂರು ತಲುಪಲಿರುವ ಫೆಬ್ರವರಿ 7ರಂದು ಹತ್ತು ಲಕ್ಷಕ್ಕೂ ಹೆಚ್ಚು ಜನರನ್ನು ಒಗ್ಗೂಡಿಸಿ ರಾಜ್ಯ ಮಟ್ಟದ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ತಿಳಿಸಿದ್ದಾರೆ. ಈ ಪಾದಯಾತ್ರೆಯ ಮಾರ್ಗದಲ್ಲಿ ಬರುವ ಹಾವೇರಿ, ದಾವಣಗೆರೆ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕುರುಬ ಸಮುದಾಯದವರಷ್ಟೇ ಅಲ್ಲದೇ ಇಡೀ ರಾಜ್ಯದ ಕುರುಬ ಸಮುದಾಯದವರು ಪಾದಯಾತ್ರೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಶ್ರೀಗಳು ಹೇಳಿದ್ದಾರೆ.

## ಸಿದ್ದರಾಮಯ್ಯ ಅನುಮತಿ ನಂತರವೇ ಹೋರಾಟ

**(1ನೇ ಪುಟದಿಂದ)** ನಿರಂಜನಾನಂದಪುರಿ ಸ್ವಾಮೀಜಿ, ಅವರ ಅನುಮತಿ ಹಾಗೂ ಅಭಿಮತ ಪಡೆದ ನಂತರವೇ ಹೋರಾಟ ಆರಂಭಿಸಲಾಗಿದೆ ಎಂದಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಎಸ್‌ಟಿ ಹೋರಾಟಕ್ಕೆ ಸಂಬಂಧಿಸಿದಂತೆ ಮೊದಲು ಚರ್ಚಿಸಿದ್ದೇ ಸಿದ್ದರಾಮಯ್ಯ ಜೊತೆ. ಅವರ ಮನೆಗೆ ತೆರಳಿ ಎರಡು ತಾಸು ಚರ್ಚಿಸಿ, ಅನುಮತಿ ಹಾಗೂ ಅಭಿಮತ ಪಡೆದ ನಂತರವೇ ಬಿಜೆಪಿ ನಾಯಕ ಹಾಗೂ ಸಚಿವ ಈಶ್ವರಪ್ಪ ಬಳಿಗೆ ತೆರಳಿದ್ದೆವು ಎಂದು ಶ್ರೀಗಳು ಹೇಳಿದ್ದಾರೆ. ಎಸ್‌ಟಿ ಹೋರಾಟದ ಹಿಂದೆ ಆರ್‌ಎಸ್‌ಎಸ್ ಕೈವಾಡ ಇದೆ ಎಂದು ಸಿದ್ದರಾಮಯ್ಯ ಹೇಳಿರುವುದನ್ನು ತಳ್ಳಿ ಹಾಕಿದ ಶ್ರೀಗಳು, ಬಿ.ಎಲ್. ಸಂತೋಷ್ ಅವರನ್ನು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಂದು ಭೇಟಿ ಮಾಡಿದ್ದೇವೆಯೇ ವಿನಃ ಆರ್‌ಎಸ್‌ಎಸ್ ನಾಯಕ ಎಂದಲ್ಲ. ಎಸ್.ಟಿ. ಮೀಸಲಾತಿ ಕೊಡುವ ಬಗ್ಗೆ ಯಾರೇ ಹೇಳಿದರೂ ಅವರ ಜೊತೆ ಮಾತನಾಡುತ್ತೇವೆ ಎಂದು ಹೇಳಿದರು.

ಸಿದ್ದರಾಮಯ್ಯ ಅಹಿಂದ ಹಾಗೂ ಕುರುಬ ಸಮುದಾಯದ ನಾಯಕರು. ಎಸ್.ಟಿ. ಹೋರಾಟ ಸಮಿತಿಯಂತಹ ನೂರು ಸಂಘಟನೆಗಳು ಹುಟ್ಟಿದರೂ ಅವರ ವರ್ಚಸ್ಸಿಗೆ ಕುಂದಾಗದು ಎಂದು ಇದೇ ವೇಳೆ ಶ್ರೀಗಳು ತಿಳಿಸಿದರು.

## ಆಹ್ವಾನ ನೀಡಲು ಇದೇನು ಮದುವೆಯಲ್ಲ

**(1ನೇ ಪುಟದಿಂದ)** ಆಹ್ವಾನಿಸಲು ಇದೇನು ಮದುವೆಯಲ್ಲ ಎಂದಿದ್ದಾರೆ.

ಈ ಹೋರಾಟದ ಹಿಂದೆ ಯಾವ ವ್ಯಕ್ತಿಯ ಕೈವಾಡವೂ ಇಲ್ಲ. ಬಹಳ ವರ್ಷಗಳಿಂದ ಹೋರಾಟ ನಡೆದಿದೆ. ಈ ಹೋರಾಟದಲ್ಲಿ ಪಕ್ಷಭೇದ ಹಾಗೂ ಆಂತರಿಕ ಭಿನ್ನಾಭಿಪ್ರಾಯ ಮಾಡಿದರೆ ಕುರುಬ ಸಮಾಜಕ್ಕೆ ಅನ್ಯಾಯ ಮಾಡಿದಂತೆ ಎಂದು ಹೇಳಿದ್ದಾರೆ.

ವ್ಯಕ್ತಿ ಹಿತಕ್ಕಿಂತ ಸಮುದಾಯದ ಹಿತ ಮುಖ್ಯ. ಶೇ.40ರಷ್ಟು ಕುರುಬರು ಕಾಡಿನಲ್ಲಿದ್ದು, ಅವರು ಆರ್ಥಿಕವಾಗಿ - ಸಾಮಾಜಿಕವಾಗಿ ಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಅವರ ಮಕ್ಕಳ ಹಕ್ಕಿಗಾಗಿ ಬೀದಿಗಿಳಿದು ಹೋರಾಟ ಮಾಡಬೇಕಿದೆ ಎಂದು ತಿಳಿಸಿದ್ದಾರೆ.

ಈ ಹೋರಾಟ ಕಾಗಿನೆಲೆ ಮಠದಿಂದ ನಡೆದಿದೆ. ಬರುವ ಜನವರಿ 15ರ ಸಂಕ್ರಾಂತಿಯಿಂದ ಆರಂಭವಾಗುವ ಬೆಂಗಳೂರುವರೆಗಿನ ಪಾದಯಾತ್ರೆಯಲ್ಲಿ ಹತ್ತು ಲಕ್ಷ ಜನ ಸೇರಿಸುವ ಗುರಿ ಇದೆ. ಬೇಡಿಕೆ ಈಡೇರದೇ ಇದ್ದರೆ ದೆಹಲಿಗೂ ತೆರಳುತ್ತೇವೆ ಎಂದು ಶ್ರೀಗಳು ಹೇಳಿದ್ದಾರೆ.

# ಚುನಾವಣೆ ವಿರೋಧಿಸಿ ನಿರ್ಣಯ ಚುನಾವಣಾ ಆಯೋಗ ಆಕ್ಷೇಪ

ಅಮರಾವತಿ, ಡಿ. 5 – ಆಂಧ್ರ ಪ್ರದೇಶ ವಿಧಾನಸಭೆ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿರೋಧಿಸಿ ನಿರ್ಣಯ ಜಾರಿಗೆ ತಂದಿರುವುದರ ಬಗ್ಗೆ ರಾಜ್ಯ ಚುನಾವಣಾ ಆಯುಕ್ತ ಎನ್. ರಮೇಶ್ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದು, ರಾಜ್ಯಪಾಲ ಬಿಸ್ವಭೂಷಣ್ ಹರಿಚಂದ್ರನ್ ಅವರಿಗೆ ಪತ್ರ ಬರೆದಿದ್ದಾರೆ.

ಸಂವಿಧಾನದ 243ಕೆ ವಿಧಿಯ ಅನ್ವಯ ಚುನಾವಣಾ ಆಯೋಗ ಸ್ವಾಯತ್ತ ಸಂಸ್ಥೆಯಾಗಿದೆ. ಸ್ಥಳೀಯ ಚುನಾವಣೆಗಳನ್ನು ನಡೆಸುವುದು ಆಯೋಗದ ಜವಾಬ್ದಾರಿ. ಹೀಗಿರುವಾಗ ವಿಧಾನಸಭೆಯ ನಿರ್ಣಯ ಸಂವಿಧಾನ ಸ್ಫೂರ್ತಿಗೆ ವಿರುದ್ಧವಾಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಕೇಂದ್ರ ಚುನಾವಣಾ ಆಯೋಗ ಹಾಗೂ ರಾಜ್ಯ ಚುನಾವಣಾ ಆಯೋಗಗಳು ಏಕರೂಪದ ಅಧಿಕಾರ ಹೊಂದಿವೆ ಎಂದೂ ಪತ್ರದಲ್ಲಿ ರಮೇಶ್ ಹೇಳಿದ್ದಾರೆ.

ಕೊರೊನಾ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಆಯೋಗ ಮುಂದಾಗಿದೆ ಎಂದು ವಿಧಾನಸಭೆಯಲ್ಲಿ ಖಂಡಿಸಿ ನಿರ್ಣಯ ಜಾರಿಗೆ ತರಲಾಗಿತ್ತು. ಫೆಬ್ರವರಿ 2021ರಲ್ಲಿ ಚುನಾವಣೆ ನಡೆಸಲು ಆಯೋಗ ನಿರ್ಧರಿಸಿತ್ತು. ರಾಜ್ಯ ಸರ್ಕಾರದ ಜೊತೆ ಚರ್ಚಿಸಿದ ನಂತರವೇ ಚುನಾವಣೆ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು ಎಂದು ವಿಧಾನಸಭೆಯ ನಿರ್ಣಯದಲ್ಲಿ ಹೇಳಲಾಗಿದೆ. ಇದು ಸಂವಿಧಾನದ ಸ್ಫೂರ್ತಿಗೆ ವಿರುದ್ಧವಾಗಿದೆ ಎಂದು ರಮೇಶ್ ಕುಮಾರ್ ಹೇಳಿದ್ದಾರೆ.

ಚುನಾವಣೆ ಮುಂದೂಡುವ ಸಲುವಾಗಿ ಜಗನ್ ಮೋಹನ್ ರೆಡ್ಡಿ ಸರ್ಕಾರ ಆಂಧ್ರ ಪ್ರದೇಶ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದ್ದು, ಈ ಪ್ರಯತ್ನ ತಡೆಯಬೇಕು ಎಂದೂ ರಾಜ್ಯಪಾಲರಿಗೆ ಒತ್ತಾಯಿಸಲಾಗಿದೆ.

# ಅಪ್ರಾಪ್ತೆಯ ಅತ್ಯಾಚಾರ : ಪ್ರಕರಣ ದಾಖಲು

ಹರಪನಹಳ್ಳಿ, ಡಿ.5 - ಅಪ್ರಾಪ್ತ ಬಾಲಕಿ ಮೇಲೆ ಇಬ್ಬರು ಅಪ್ರಾಪ್ತ ಬಾಲಕರು ಅತ್ಯಾಚಾರವೆಸಗಿದ ಘಟನೆ, ತಾಲ್ಲೂಕಿನ ಹುಲಿಕಟ್ಟಿ ಗ್ರಾಮದಲ್ಲಿ ತಡವಾಗಿ ವರದಿಯಾಗಿದೆ. 5 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆದಿದೆ. ಈ ಸಂಬಂಧ ಸಂತ್ರಸ್ತೆ ತಾಯಿ ನೀಡಿದ ದೂರನ್ನು ಹರಪನಹಳ್ಳಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಾದ ಇಬ್ಬರು ಅಪ್ರಾಪ್ತ ಬಾಲಕರನ್ನು ವಶಕ್ಕೆ ಪಡೆದು ಬಳ್ಳಾರಿಯ ಜೆ.ಜೆ. ಬೋರ್ಡ್‌ಗೆ ಒಪ್ಪಿಸಲಾಗಿದೆ ಎಂದು ಡಿವೈಎಸ್ಪಿ ಹಾಲಮೂರ್ತಿ ರಾವ್ ತಿಳಿಸಿದ್ದಾರೆ.

# 19 ರಂದು ಜಿಲ್ಲೆಯಲ್ಲಿ ಬೃಹತ್ ಇ-ಲೋಕ್ ಅದಾಲತ್

ದಾವಣಗೆರೆ, ಡಿ.5- ಇದೇ ದಿನಾಂಕ 19ರಂದು ಜಿಲ್ಲೆಯಲ್ಲಿ ಬೃಹತ್ ಇ- ಲೋಕ್ ಅದಾಲತ್ ಆಯೋಜಿಸಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿ ಕೊಳ್ಳುವಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ. ಗೀತಾ ತಿಳಿಸಿದರು.

ಅವರು, ಇಂದು ಈ ಬಗ್ಗೆ ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಲೋಕ್ ಅದಾಲತ್ ಮೂಲಕ ಪಕ್ಷಗಾರರು ರಾಜಿಯಾಗಬಲ್ಲ ತಮ್ಮ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಸುಲಭವಾಗಿ ಮತ್ತು ಶೀಘ್ರವಾಗಿ ಯಾವುದೇ ಶುಲ್ಕವಿಲ್ಲದೇ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಪಕ್ಷಗಾರರು ಇ-ಲೋಕ ಅದಾಲತ್‌ನಲ್ಲಿ ವಿಡಿಯೋ ಕಾನ್ಫರೆನ್ಸ್, ವಿಡಿಯೋ ಕಾಲ್ ಮೂಲಕ ಹಾಗೂ ಕೋವಿಡ್ ಟೆಸ್ಟ್ ಮಾಡಿಸಿಕೊಂಡು ನ್ಯಾಯಾಲಯಕ್ಕೂ ಕೂಡ ಹಾಜರಾಗಿ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಕಾರಿ ಅಧ್ಯಕ್ಷ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರು ಬೃಹತ್ ಇ-ಲೋಕ್ ಅದಾಲತ್ ಮೂಲಕ ಅತಿ ಹೆಚ್ಚು ಪ್ರಕರಣ ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಉದ್ದೇಶಿಸಿದ್ದು, ಈ ಪ್ರಕಾರವಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕು ಕಾನೂನು ಸೇವಾ ಸಮಿತಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬೆಳಗ್ಗೆ 10.30ರಿಂದ ಸಂಜೆ 5ರವರೆಗೆ ಇ-ಲೋಕ್ ಅದಾಲತ್ ನಡೆಸುವ ಬಗ್ಗೆ ವ್ಯವಸ್ಥೆ ಮಾಡಿಕೊಂಡಿವೆ ಎಂದು ಮಾಹಿತಿ ನೀಡಿದರು.

ಕೋವಿಡ್ ಸಂದರ್ಭದಲ್ಲಿ ಆದಾಯ ಕಡಿಮೆ ಇರುವ ಪರಿಸ್ಥಿತಿಯಲ್ಲಿ ತಮ್ಮ ವ್ಯಾಜ್ಯಗಳನ್ನು ಇ-ಲೋಕ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಂಡರೆ ಕಕ್ಷಿಗಾರರಿಗೆ ಮತ್ತು ವಕೀಲರಿಗೆ ಹೆಚ್ಚಿನ ಅನುಕೂಲ ಇದೆ.

ಇ-ಲೋಕ್ ಅದಾಲತ್‌ನಲ್ಲಿ ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಪ್ರಕರಣಗಳಿಗೆ ನ್ಯಾಯಾಲಯಗಳ ಸಂಪೂರ್ಣ ಶುಲ್ಕ ಮರುಪಾವತಿ ಮಾಡಲಾಗುವುದು.



**ಕೋವಿಡ್ ಟೆಸ್ಟ್ ಮಾಡಿಸಿಕೊಂಡು ನ್ಯಾಯಾಲಯದಲ್ಲೂ ವ್ಯಾಜ್ಯ ಪರಿಹರಿಸಿಕೊಳ್ಳಬಹುದು.**

**- ಕೆ.ಬಿ. ಗೀತಾ,ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

ವ್ಯಾಜ್ಯ ಪೂರ್ವ ಪ್ರಕರಣಗಳಿಗೆ ನ್ಯಾಯಾಲಯಗಳ ಶುಲ್ಕ ಕೊಡಬೇಕಾಗಿಲ್ಲ ಹಾಗೂ ಇಲ್ಲಿ ಇತ್ಯರ್ಥವಾಗುವ ಪ್ರಕರಣಗಳಿಗೆ ಮೇಲ್ಮನವಿ ಇಲ್ಲ. ರಿವಿಜನ್ ಅರ್ಜಿ ಇಲ್ಲ. ಕಕ್ಷಿದಾರರಿಗೆ ಸಂಪೂರ್ಣ ಶುಲ್ಕ ಮರು ಪಾವತಿ ಆಗುವುದರಿಂದ ಹಣವೂ ಉಳಿತಾಯ ಆಗುತ್ತದೆ. ಈ ನ್ಯಾಯಾಲಯದ ತೀರ್ಪೇ ಅಂತಿಮವಾಗಿದ್ದು, ಪಕ್ಷಗಾರರು ಅಪೀಲು ಹೋಗಲು ಅವಕಾಶವಿಲ್ಲ ಎಂದರು.

**ವ್ಯಾಜ್ಯ ಪೂರ್ವ ಮತ್ತು ರಾಜೀ ಪ್ರಕರಣಗಳ ಇತ್ಯರ್ಥ ಸಾಧ್ಯ:** ಅಪಘಾತಕ್ಕೆ ಸಂಬಂಧಿಸಿದ ಪರಿಹಾರ ಪ್ರಕರಣಗಳು, ಪಾಲುವಿಭಾಗ ಕೋರಿ ಸಲ್ಲಿಸುವ ದಾವೆಗಳು, ಹಣ ವಾಪಸ್ಸಾತಿ ದಾವೆಗಳು, ಬಾಡಿಗೆದಾರ ಮತ್ತು ಮಾಲೀಕರ ನಡುವಿನ ದಾವೆಗಳು, ಇತರೆ ಸಿವಿಲ್ ವ್ಯಾಜ್ಯಗಳು ಹಾಗೂ ರಾಜೀ ಮಾಡಿಕೊಳ್ಳಬಹುದಾದ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಜೀವನಾಂಶದ ಅರ್ಜಿ ಪ್ರಕರಣಗಳು, ಕೌಟುಂಬಿಕ (ವಿಚ್ಛೇದನವನ್ನು ಹೊರತುಪಡಿಸಿ) ಕಲಹಗಳು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಬಹುದು ಎಂದರು.

**ಬಾಕಿ ಇರುವ ಪ್ರಕರಣಗಳು :** ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು, ಭೂಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪ್ರಕರಣಗಳು ಹಾಗೂ ಪಿಂಚಣಿ ಪ್ರಕರಣಗಳು, ಕಂದಾಯ ಪ್ರಕರಣಗಳು (ಜಿಲ್ಲಾ ಹಾಗೂ ಉಚ್ಚ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಮಾತ್ರ), ಸಿವಿಲ್ ಪ್ರಕರಣಗಳನ್ನು (ಬಾಡಿಗೆ, ಅನುಭೋಗದ ಹಕ್ಕುಗಳ ನಿರ್ಬಂಧಾಜ್ಞೆ ಮೊಕದ್ದಮೆಗಳು) ಲೋಕ ಅದಾಲತ್‌ನಲ್ಲಿ ಬಗೆಹರಿಸಲಾಗುವುದು. ಈ ದಿನಾಂಕಗಳ ಹೊರತಾಗಿಯೂ ಸತತವಾಗಿ ನಡೆಯುವ ಲೋಕ ಅದಾಲತ್ ಮುಖಾಂತರ ಕೂಡ ಕಕ್ಷಿದಾರರು ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು ಎಂದರು.

ಆಸಕ್ತ ಕಕ್ಷಿಗಾರರು ಹೆಚ್ಚಿನ ಮಾಹಿತಿಗಾಗಿ ಇಮೇಲ್ dlsadavangere@gmail.com ಮತ್ತು ದೂರವಾಣಿ ಸಂಖ್ಯೆ 08192-296364, 9964924792 ಮೂಲಕ ಜಿಲ್ಲೆಯ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯನ್ನು ಸಂಪರ್ಕಿಸಬಹುದು ಎಂದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಹೆಚ್. ಅರುಣ್‌ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಸತತ ಮೂರು ವರ್ಷಗಳಿಂದ ಲೋಕ್ ಅದಾಲತ್ ಮೂಲಕ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಜೊತೆಗೆ ಪರಿಹಾರವನ್ನು ಕಂಡುಕೊಳ್ಳುವ ಕಾರ್ಯ ಹಾಗೂ ಸಕ್ರಿಯವಾಗಿ ಕಾನೂನು ಅರಿವು ಮೂಡಿಸುವುದರಲ್ಲಿ ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದಲ್ಲಿಯೇ ನಮ್ಮ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಾಬಪ್ಪ ಹಾಗೂ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎನ್.ಟಿ. ಮಂಜುನಾಥ್ ಮಾತನಾಡಿದರು.

> ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ರಾಜ್ಯಾದ್ಯಂತ ತಂತ್ರಜ್ಞಾನವನ್ನು ಬಳಸಿಕೊಂಡು ಇ-ಲೋಕ ಅದಾಲತ್ ಆಯೋಜಿಸಿದೆ. ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ಇನ್ನೂ ದಾಖಲು ಮಾಡದೇ ಇರುವ ರಾಜೀಯಾಗುವಂತಹ ಎಲ್ಲ ಪ್ರಕರಣಗಳಲ್ಲಿ ಪಕ್ಷಗಾರರು ಈ ಪೀಠಗಳ ಮೂಲಕ ತಮ್ಮ ಮನೆಯಿಂದಲೇ ಅಥವಾ ತಮ್ಮ ವಕೀಲರ ಕಚೇರಿಯ ಮೂಲಕ ಪ್ರಕರಣಗಳಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಹಾಜರಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು.

# ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸಿ

## ಹರಿಹರದ ಕಾಂಗ್ರೆಸ್ ಸಭೆಯಲ್ಲಿ ಶಾಸಕ ಎಸ್. ರಾಮಪ್ಪ ಕರೆ




ಹರಿಹರ, ಡಿ.5- ಕಳೆದ ಜಿ.ಪಂ, ತಾ.ಪಂ, ಗ್ರಾ.ಪಂ ಚುನಾವಣೆಯಲ್ಲಿ ಪಕ್ಷದಲ್ಲಿ ಭಿನ್ನಾಭಿ ಪ್ರಾಯ ಮೂಡಿದ್ದರಿಂದ ಅತಿ ಹೆಚ್ಚಿನ ಪ್ರಮಾಣ ದಲ್ಲಿ ಗೆಲುವು ಕಾಣಲಿಕ್ಕೆ ಸಾಧ್ಯವಾಗಿರಲಿಲ್ಲ. ಈ ಬಾರಿಯ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಭಿನ್ನಾಭಿಪ್ರಾಯಗಳನ್ನು ಬದಿಗೆ ಸರಿಸಿ, ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲುವ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮವಹಿಸಿ, ದುಡಿದು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲುವಂತೆ ಮಾಡಬೇಕು ಎಂದು ಶಾಸಕ ಎಸ್.ರಾಮಪ್ಪ ಹೇಳಿದರು.

ನಗರದ ಎಸ್.ಎಸ್.ಕೆ ಕಲ್ಯಾಣ ಮಂಟಪದ ಆವರಣದಲ್ಲಿ ಇಂದು ನಡೆದ ಗ್ರಾಮ ಪಂಚಾಯತಿ ಚುನಾವಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು, ಮಾತನಾಡಿದರು.

ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವಂತೆ ಮಾಡಲು ಪಕ್ಷದ ಮುಖಂಡರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗುತ್ತದೆ. ಆ ಮುಖಂ ಡರೂ ಸಹ ಅಷ್ಟೇ ನಿಷ್ಠೆಯಿಂದ ಕಾರ್ಯವನ್ನು ಮಾಡಿ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಪ್ರಮಾ ಣದಲ್ಲಿ ಗೆಲ್ಲುವಂತೆ ಮಾಡುವುದಕ್ಕೆ ಶ್ರಮವಹಿಸಿ ಕೆಲಸವನ್ನು ಮಾಡಬೇಕು. ಎಲ್ಲರೂ ಒಗ್ಗಟ್ಟಿನಿಂದ ಶ್ರಮವಹಿಸಿ ಮತ್ತು ಭಿನ್ನಾಭಿಪ್ರಾಯಗಳನ್ನು ಮರೆತು ಕೆಲಸ ಮಾಡಿದಾಗ ಎಲ್ಲಾ ಗ್ರಾಮ ಪಂಚಾಯತಿ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಮಾಜಿ ಶಾಸಕ ಹೇಳಿದಂತೆ ನಾನು ಕೆಲಸವನ್ನು ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಆದರೆ, ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಕೆಲವು ಅನುದಾನ ಬಿಡುಗಡೆ ಮಾಡಿದ್ದು ಈಗ ಸ್ಥಗಿತಗೊಳಿಸಲಾಯಿತು. ಹಾಗೆಯೇ ಆಗಿದ್ದರಿಂದ ಅಭಿವೃದ್ಧಿ ಕುಂಠಿತವಾಯಿತು. ಮಾಜಿ ಶಾಸಕ ಹರೀಶ್ ಅವರೂ ಸಹ ಅನೇಕ ಕೆಲಸಗಳಿಗೆ ಕಡ್ಡಿ ಮಾಡಿದರ ಪರಿಣಾಮವಾಗಿ ಕೊಮಾರನಹಳ್ಳಿ ಕೆರೆ ಅಭಿವೃದ್ಧಿ, ಭೈರನಪಾದ ನೀರಿನ ಯೋಜನೆ 52 ಕೋಟಿ, ಭಾನುವಳ್ಳಿ, ಯಕ್ಕೆಗೊಂದಿ 17 ಕೋಟಿ ಹಾಗೂ ಸಾರಥಿ, ಪಾಮನೇಹಳ್ಳಿ 13 ಕೋಟಿ ರೂ. ರಸ್ತೆ ಮತ್ತು ನಗರದಲ್ಲಿ ರಾಜಕಾಲುವೆ ಮೇಲೆ ಮಳಿಗೆ ನಿರ್ಮಾಣ ಸೇರಿದಂತೆ, ಹಲವಾರು ಅಭಿವೃದ್ಧಿ ಕೆಲಸಗಳಿಗೆ ಕುಂಠಿತವಾಯಿತು. ಆದರೂ ಸಹ ನಾನು ಹಿಂದೆ ಬಿದ್ದಿಲ್ಲ. ಈ ಬೆಳವಣಿಗೆಗೆ ನಾನು ಇನ್ನು ಮುಂದೆ ಬೇರೆ ರೀತಿಯಲ್ಲಿ ನಡೆದುಕೊಳ್ಳಲು ಮುಂದಾಗುವುದಾಗಿ ಹೇಳಿದರು.

ನಗರಸಭೆ ಮಾಜಿ ಅಧ್ಯಕ್ಷ ಬಿ.ರೇವಣಸಿದ್ದಪ್ಪ ಮಾತನಾಡಿ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಗೆಲ್ಲುವುದು ಮುಂದೆ ನಡೆಯುವ ಚುನಾವಣೆಯಲ್ಲಿ ಗೆಲ್ಲಲು ಪಕ್ಷಕ್ಕೆ ಭದ್ರಬುನಾದಿ ಹಾಕಿದಂತೆ ಆಗುತ್ತದೆ ಎಂದು ಹೇಳಿದರು.

ಎಪಿಎಂಸಿ ಸದಸ್ಯ ಮಂಜುನಾಥ್ ಕೊಮಾರನಹಳ್ಳಿ ಮಾತನಾಡಿ, ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗುಂಪಿನಿಂದ ಸುಮಾರು 109 ಸದಸ್ಯರು ಆಯ್ಕೆಯಾದರು. ಆದರೆ, ಅವರು ಹಣ ಮತ್ತು ಕಾಮಗಾರಿ ಆಸೆಯಿಂದ ಬೇರೆ ಪಕ್ಷಕ್ಕೆ ವಲಸೆ ಹೋಗಿದ್ದರಿಂದ 56 ಕಾಂಗ್ರೆಸ್ ಸದಸ್ಯರು ಮಾತ್ರ ಉಳಿಯುವ ಪ್ರಸಂಗಗಳು ಬಂದಿದೆ. ಇದರಿಂದಾಗಿ ಪಕ್ಷಕ್ಕೆ ಅನೇಕ ಕಡೆಗಳಲ್ಲಿ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಹಿನ್ನಡೆ ಆಯಿತು ಎಂದು ಹೇಳಿದರು.

ಮಾಜಿ ಜಿ.ಪಂ ಸದಸ್ಯ ನಾಗೇಂದ್ರಪ್ಪ ಮಾತನಾಡಿ, ಏಷ್ಯ ಖಂಡದಲ್ಲೇ ಭಾರತ ಭ್ರಷ್ಟಾಚಾರದಲ್ಲಿ ನಂ.1 ಸ್ಥಾನಕ್ಕೆ ಬಿಜೆಪಿ ಸರ್ಕಾರ ತಂದು ನಿಲ್ಲಿಸಿದೆ. ಅಂತಹ ಭ್ರಷ್ಟ ಸರ್ಕಾರವನ್ನು ಹೋಗಲಾಡಿಸಬೇಕು ಅಂದರೆ ಎಲ್ಲಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ಅದಕ್ಕೆ ಕಾರ್ಯಕರ್ತರು, ಮುಖಂಡರು ಒಗ್ಗಟ್ಟಿನಿಂದ ಶ್ರಮವಹಿಸಿ ದುಡಿಯಬೇಕು ಮತ್ತು ನಾಯಕರೂ ಸಹ ಮುಖಂಡರಿಗೆ ಹೆಚ್ಚಿನ ಜವಾಬ್ದಾರಿ ವಹಿಸುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕಬೇಕು ಎಂದರು.

ಈ ವೇಳೆ ಡಿ.ಬಸವರಾಜ್, ಚಮನ್ ಸಾಬ್, ಭಾನುವಳ್ಳಿ ಭೀಮಪ್ಪ, ಪರಮೇಶ್ವರಪ್ಪ ಹಿಂಡಸಗಟ್ಟ, ಏಕಾಂತಪ್ಪ, ಕುಂಬಳೂರು ವೀರುಪಾಕ್ಷಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಬೆಳ್ಳೂಡಿ ಬಸವರಾಜ್, ಕೆ.ಜಡಿಯಪ್ಪ, ಎಲ್.ಬಿ.ಹನುಮಂತಪ್ಪ, ಅಭಿದಾಲಿ, ಜಿಗಳಿ ಆನಂದಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ಕನ್ನಪ್ಪ ಭಾನುವಳ್ಳಿ, ಬಾಲರಾಜ್, ಕೊಂಡಜ್ಜಿ ಹೊನ್ನಪ್ಪ, ಅರ್ಜನಾಯ್ಕ್, ನಗರಸಭೆ ಸದಸ್ಯ ಎಂ.ಎಸ್. ಬಾಬುಲಾಲ್, ವಸಂತ್, ಶಾಸಕರ ಆಪ್ತ ಸಹಾಯಕ ವಿಜಯ್ ಮಾಲತೇಶ್ ಇತರರು ಹಾಜರಿದ್ದರು.

# ನಗರಕ್ಕಾಗಮಿಸಿದ ಡಾ. ಬಿ.ಆರ್. ಅಂಬೇಡ್ಕರ್ ಜ್ಯೋತಿ ಯಾತ್ರೆ : ಸ್ವಾಗತ



ದಾವಣಗೆರೆ, ಡಿ.5- ಭಾರತದ ಸಂವಿಧಾನ ಶಿಲ್ಪಿ, ಭಾರತ ರತ್ನ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 64ನೇ ಮಹಾಪರಿನಿರ್ವಾಣದ ಪ್ರಯುಕ್ತ ಅಸ್ಪೃಶ್ಯತಾ ನಿವಾರಣೆಗಾಗಿ ಹೊರಟಿರುವ ಅಂಬೇಡ್ಕರ್ ಜ್ಯೋತಿ ಯಾತ್ರೆಯು ಇಂದು ಸಂಜೆ ನಗರಕ್ಕಾಗಮಿಸಿತು.

ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿ ವತಿಯಿಂದ ಅಂಬೇಡ್ಕರ್ ಜ್ಯೋತಿ ಯಾತ್ರೆಯನ್ನು ಸ್ವಾಗತಿಸಿ, ನಂತರ ಬೀಳ್ಕೊಡಲಾಯಿತು. ಇದೇ ವೇಳೆ ಸ್ವಚ್ಛತಾ ಮತ್ತು ಪ್ಲಾಸ್ಟಿಕ್ ಮುಕ್ತ ಅರಿವು ಮೂಡಿಸಲಾಯಿತು.

ದಾವಣಗೆರೆಯಿಂದ ಹುಬ್ಬಳ್ಳಿ, ಬೆಳಗಾಂ, ಮುಂಬೈನಲ್ಲಿನ ದಾದಾ ಶಿವಾಜಿ ಪಾರ್ಕ್, ಚೈತನ್ಯ ಭೂಮಿಗೆ ಅಂಬೇಡ್ಕರ್ ಜ್ಯೋತಿ ತಲುಪುತ್ತದೆ.

ಅಸ್ಪೃಶ್ಯತೆಯ ನಿವಾರಣೆಗಾಗಿ ರೂಪಿಸಲಾದ ಹಲವಾರು ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೆ, ಈಗಲೂ ಜೀವಂತವಾಗಿದೆ. ಸಂವಿಧಾನ ಬರೆದಿರುವುದು ಒಂದೇ ಜಾತಿಗಲ್ಲ, ದಲಿತರಿಗೆ ಸೀಮಿತವಾಗಿಲ್ಲ. ಎಲ್ಲಾ ಜಾತಿ, ಜನಾಂಗಕ್ಕೂ ಸಮಾನತೆ ಸಿಗಬೇಕೆಂಬ ಆಶಾ ಭಾವನೆಯಿಂದ ಸಂವಿಧಾನವನ್ನು ಬರೆಯಲಾಗಿದೆ. ಸಂವಿಧಾನವನ್ನು ಎಲ್ಲರೂ ಗೌರವಿಸಬೇಕು ಎಂದು ಸಮಿತಿ ಅಧ್ಯಕ್ಷ ಸಿ. ಬಸವರಾಜ್ ತಿಳಿಸಿದರು.

ಸಂವಿಧಾನ ವಿರೋಧಿಸಲು ಸಣ್ಣ ಸಣ್ಣ ವಿಕೃತ ಹೇಳಿಕೆ ನೀಡಲು ಪ್ರೇರೇಪಿಸುತ್ತಿದ್ದಾರೆ. ದೇಶದ ಸಮಗ್ರತೆಗೆ ಧಕ್ಕೆ ತರುತ್ತಿರುವ ಕುತಂತ್ರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ದೇಶ, ರಾಜ್ಯ, ಜಿಲ್ಲೆ, ಗ್ರಾಮಗಳಲ್ಲಿ ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯಗಳು ನಿಲ್ಲುವಂತಾಗಲು ಉಗ್ರವಾದ ಕಾನೂನು ರಚನೆಯಾಗಬೇಕು. ಭೂಮಿ, ವಸತಿ, ಜೀವನೋಪಾಯ ಸೌಲಭ್ಯ, ಯೋಗ್ಯವಾದ ನೀರು, ಶಿಕ್ಷಣ, ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ದಾವಣಗೆರೆಯ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ತುರ್ತಾಗಿ ಸ್ಥಾಪನೆಯಾಗಬೇಕು. ಈಗಾಗಲೇ ಹಲವು ಬಾರಿ ಜಿಲ್ಲಾಧಿಕಾರಿಗಳ ಕಛೇರಿಗೆ ಪ್ರಸ್ತಾಪ ಮಾಡಲಾಗಿದೆ. ಈ ವರ್ಷ ನಗರ ಪಾಲಿಕೆ ಅನುದಾನದಲ್ಲಿ 50 ಲಕ್ಷ ಮೀಸಲಿಡಬೇಕು. ಬಡವರಿಗೆ, ನಿರಾಶ್ರಿತರಿಗೆ, ಎಲ್ಲಾ ಜಾತಿಯ ಬಡವರಿಗೆ ಆಶ್ರಯ ಮನೆ, ನಿವೇಶನ ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಟಿ. ಹನುಮಂತಪ್ಪ, ಬಿ. ಗುರುಮೂರ್ತಿ, ಬಿ.ಆರ್. ಮಂಜುನಾಥ್, ಪುಟಗನಾಳ್ ವಿಜಯ, ಡಿ. ಹನುಮಂತಪ್ಪ, ಲಿಂಗರಾಜ, ಎಂ. ಮಂಜಪ್ಪ ಸೇರಿದಂತೆ ಇತರರು ಇದ್ದರು.

# ಭಾರತ್ ವಿಕಾಸ ಪರಿಷತ್ತಿನಿಂದ ಗೋಶಾಲೆಗೆ ಭತ್ತದ ಹುಲ್ಲು ಕೊಡುಗೆ



ದಾವಣಗೆರೆ, ಡಿ.5- ಭಾರತ್ ವಿಕಾಸ ಪರಿಷತ್ತಿನ ಗೌತಮ ಶಾಖೆ ವತಿಯಿಂದ ಆವರಗೆರೆಯಲ್ಲಿರುವ ಗೋ ಶಾಲೆಯ ದನ - ಕರುಗಳಿಗೆ ಗೋ ಪೂಜೆ ಮಾಡುವುದರೊಂದಿಗೆ 4 ಲೋಡ್ ಭತ್ತದ ಹುಲ್ಲನ್ನು ನೀಡಲಾಯಿತು. ಸಮಿತಿ ಅಧ್ಯಕ್ಷ ಟಿ.ಎಸ್. ಜಯರುದ್ರೇಶ್, ಕಾರ್ಯದರ್ಶಿ ಎನ್.ಪಿ.ಮೌನೇಶಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಊರ ನಾಯಕರು - ಮ್ಯಾಸ ನಾಯಕರಲ್ಲಿ ವ್ಯತ್ಯಾಸವಿಲ್ಲ

ದಾವಣಗೆರೆ, ಡಿ.5- ಊರ ನಾಯಕರು ಹಾಗೂ ಮ್ಯಾಸ ನಾಯಕರು ಒಂದೇ ಸಮಾಜವಾಗಿದ್ದು, ಯಾವುದೇ ವ್ಯತ್ಯಾಸವಿಲ್ಲ. ರಾಜನಹಳ್ಳಿ ಶ್ರೀಗಳು ಸಮಗ್ರ ನಾಯಕ ಸಮಾಜದ ಗುರುಗಳಾಗಿದ್ದು, ಕೆಲವರು ತಮ್ಮ ಸ್ವಾರ್ಥದ ಲಾಭಕ್ಕಾಗಿ ಸಮಾಜ ವಿಭಾಗ ಮಾಡಿ ಸೌಹಾರ್ದತೆ ಕದಡುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ನಾಯಕ ಸಮಾಜದ ಅಧ್ಯಕ್ಷ ವೀರಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಪರಿಶಿಷ್ಟ ಪಂಗಡಕ್ಕೆ ಸೇರಿರುವ ವಾಲ್ಮೀಕಿ ನಾಯಕ ಸಮಾಜವು ಬುಡಕಟ್ಟು ಹಿನ್ನೆಲೆ ಹೊಂದಿದ್ದು, ಊರ ನಾಯಕರು ಮತ್ತು ಮ್ಯಾಸ ನಾಯಕರು ಎರಡೂ ಒಂದೇ ಆಗಿವೆ. ನಾವು ಪರಸ್ಪರ ಸಂಬಂಧವನ್ನೂ ಬೆಳೆಸುತ್ತೇವೆ. ಹೀಗಿರುವಾಗ ಸಮುದಾಯದ ಒಗ್ಗಟ್ಟನ್ನು ಮುರಿಯಲು ಕೆಲವರು ಕಾನೂನು ಬಾಹಿರವಾಗಿ ಸಮುದಾಯದ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಸಮಸ್ಯೆಗಳಿದ್ದರೆ ರಾಜನಹಳ್ಳಿ ಶ್ರೀಗಳೊಂದಿಗೆ ಚರ್ಚಿಸಿ, ಪರಿಹರಿಸಿಕೊಳ್ಳಲಿ. ಅದನ್ನು ಬಿಟ್ಟು ಊರ ನಾಯಕರು, ಮ್ಯಾಸ ನಾಯಕರು ಎಂಬುದಾಗಿ ಸಮುದಾಯದಲ್ಲಿ ಒಡಕು ತರುವುದನ್ನು ಮುಂದುವರೆಸಿದರೆ ಸಮಾಜದಿಂದಲೇ ಬಹಿಷ್ಕರಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

ಈಗಾಗಲೇ ದೊಡ್ಡಮನಿ ಪ್ರಸಾದ್ ಎಂಬುವರ ವಿರುದ್ಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಇಂತಹವರ ಕುತಂತ್ರಕ್ಕೆ ಸಮಾಜದವರು ಬಲಿಯಾಗಬಾರದೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಎನ್.ಎಂ. ಆಂಜನೇಯ, ಗುಮ್ಮನೂರು ಮಲ್ಲಿಕಾರ್ಜುನ್, ಹೂವಿನಮಡು ಚಂದ್ರಪ್ಪ, ಶ್ರೀನಿವಾಸ ದಾಸಕರಿಯಪ್ಪ, ಕೆ.ಹೆಚ್. ಓಬಳಪ್ಪ, ಫಣಿಯಾಪುರ ಲಿಂಗರಾಜ್, ಮಲ್ಲಾಪುರ ದೇವರಾಜ್ ಇದ್ದರು.

# ನಗರದಲ್ಲಿ ಇಂದು ಕಾಂಗ್ರೆಸ್‌ನಿಂದ ಡಾ|| ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನ

ಜಿಲ್ಲಾ ಕಾಂಗ್ರೆಸ್ ವತಿಯಿಂದ ಸಂವಿಧಾನ ಶಿಲ್ಪಿ ಡಾ|| ಬಿ.ಆರ್.ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನವನ್ನು ಇಂದು ಆಚರಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಬೆಳಿಗ್ಗೆ 11.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಛೇರಿಯ ಎಸ್.ಎಸ್. ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ಘಟಕದ ಜಿಲ್ಲಾಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ ಭಾಗವಹಿಸುವರು.

# ಬಂಜಾರ್ ಕಪ್-2020 ಕ್ರಿಕೆಟ್ ಟೂರ್ನಿಗೆ ಚಾಲನೆ

ದಾವಣಗೆರೆ, ಡಿ.5- ಕರ್ನಾಟಕ ತಾಂಡಾ ರಕ್ಷಣಾ ವೇದಿಕೆ ವತಿಯಿಂದ ರಾಮರಾವ್ ಮಹಾರಾಜರ ಪುಣ್ಯ ಸ್ಮರಣಾರ್ಥ, ಶ್ರೀ ಸಂತ ಸೇವಾಲಾಲ್ ಮಹಾರಾಜರ 282ನೇ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಬಂಜಾರ್ ಕಪ್-2020 ಕ್ರಿಕೆಟ್ ಟೂರ್ನಿಗೆ ಇಂದು ಚಾಲನೆ ನೀಡಲಾಯಿತು.

ಇದೇ ವೇಳೆ ಮಾತನಾಡಿದ ಕನ್ನಡಪರ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ ಕೆ.ಜಿ. ಯಲ್ಲಪ್ಪ ಅವರು, ಎಲೆ ಮರೆಯ ಕಾಯಿಯಂತೆ ಇರುವ ಅನೇಕ ಸಮುದಾಯಗಳ ಕ್ರೀಡಾಪಟುಗಳನ್ನು ಗುರುತಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ ಎಂದು ಹೇಳಿದರು.

ಒಕ್ಕೂಟದ ಅಧ್ಯಕ್ಷ ಎನ್.ಹೆಚ್. ಹಾಲೇಶ್ ಮಾತನಾಡಿ, ದೇಶದ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಬಂಜಾರ್ ಸಮುದಾಯ ಪ್ರಮುಖ ಪಾತ್ರ ವಹಿಸಿದೆ ಎಂದರು.

ಈ ಸಂದರ್ಭದಲ್ಲಿ ಐಗೂರು ಸುರೇಶ್, ಅವಿನಾಶ್ (ಅಭಿ), ನಾಗೇಂದ್ರ ಬಂಡೀ ಕರ್, ರಾಜು ಎಸ್, ಡಾ. ಬಿ. ವಾಸುದೇವ್, ಸುಧಾಕರ್, ಕೆ.ಎನ್. ವೆಂಕಟೇಶ್, ಮಲ್ಲಿಕಾರ್ಜುನ್ ಸಿ.ಪಿ, ಹೂವಿನಮಡು ಪ್ರವೀಣ್, ರಮೇಶ್, ಹರೀಶ್, ರಾಜು, ದೇವೇಂದ್ರಪ್ಪ, ಮಂಜು ಮಿಂಚು ಆವರಗೆರೆ, ಭೋಜರಾಜ್ ಮತ್ತಿತರರು ಇದ್ದರು.

# ನಗರದಲ್ಲಿ ಇಂದು ಕಾರ್ತಿಕ ಸಂಗೀತೋತ್ಸವ

ಸುರ್‌ತಾಲ್ ಸಂಗೀತ ಕಲಾ ಸಂಘದ ವತಿಯಿಂದ ಕಾರ್ತಿಕ ಮಾಸದ ಅಂಗವಾಗಿ ಇಂದು ಬೆಳಿಗ್ಗೆ 10 ಗಂಟೆಗೆ ರೋಟರಿ ಬಾಲಭವನದಲ್ಲಿ ಸಂಗೀತ ಮಹೋತ್ಸವ ನಡೆಯಲಿದೆ. ಶ್ರೀ ಸಿದ್ಧಲಿಂಗೇಶ್ವರ ಕಲಾ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಗಾಯಕ ಕಲಬುರಗಿ ಜಿಲ್ಲೆಯ ಪಂಡಿತ ರವಿ ಆಳಂದ ಹಿಂದೂಸ್ತಾನಿ ಗಾಯನವನ್ನು, ಬೆಂಗಳೂರಿನ ಸಿತಾರ ವಾದಕ ಎಂ.ಎಸ್. ಪ್ರದೀಪಕುಮಾರ್ ಸಿತಾರ ವಾದನ ಪ್ರಸ್ತುತ ಪಡಿಸಲಿದ್ದಾರೆ. ಇವರಿಗೆ ಕೊಪ್ಪಳದ ಸುರೇಶ್ ಹಡಪದ ಮತ್ತು ನಗರದ ರಾಘವೇಂದ್ರ ಸಾರಂಗ ಅವರು ತಬಲಾ ಸಾಥ್ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಕಲಾ ಸೇವಕ ಲಲಿತಕುಮಾರ್ ಜೈನ್ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಗುವುದು.

# ಇಂದು ಡಾ|| ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನಾಚರಣೆ

ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ದೇಹತ್ಯಾಗ ಮಾಡಿದ ದಿನ (ಮಹಾನ್ ಪರಿನಿರ್ವಾಣ ದಿನ) ದ ಅಂಗವಾಗಿ ಕರ್ನಾಟಕ ಜನಶಕ್ತಿ ಜಿಲ್ಲಾ ಸಮಿತಿಯಿಂದ ಪರಿನಿರ್ವಾಣ ದಿನಾಚರಣೆಯನ್ನು ಇಂದು ಬೆಳಿಗ್ಗೆ 12 ಗಂಟೆಗೆ ಅಂಬೇಡ್ಕರ್ ಸರ್ಕಲ್‌ನಲ್ಲಿ ಆಚರಿಸಲಾಗುವುದು.

## ಕಾಫಿ ಬೇಕೇ ಕಾಫಿ !

ಮುಂಜಾವಿನ ಚುಮುಚುಮು ಚಳಿಗೆ
ಘಮಘಮಿಸುವ ಕಾಫಿ ಬರಲು ಬಳಿಗೆ
ಸುದ್ದಿಯ ಸಾರುವ ದಿನ ಪತ್ರಿಕೆ ಕರದಲಿ
ಲೋಕವ ಮರೆಸುತ ಸ್ವರ್ಗವೆ ಬಳಿಯಲಿ!!

- ವೀಕೆಎಂ

# ಚೇತನ ಶಿಕ್ಷಣ ಸಂಸ್ಥೆ ಕಾಲೇಜುಗಳಿಗೆ ಅನುಮತಿ

ದಾವಣಗೆರೆ, ಡಿ. 5- ನಗರದ ಚೇತನ ಶಿಕ್ಷಣ ಸಂಸ್ಥೆಯ ಬಿಐಇಟಿ ರಸ್ತೆಯಲ್ಲಿರುವ ಶ್ರೀ ವೈಷ್ಣವಿ ಚೇತನ ಪದವಿಪೂರ್ವ ಕಾಲೇಜು, ಆಂಜನೇಯ ಬಡಾವಣೆಯಲ್ಲಿರುವ ಶ್ರೀ ವೈಷ್ಣವಿ ಚೇತನ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಮುಂದುವರೆಸಲು ಸರ್ಕಾರದ ನಿರ್ದೇಶನದಂತೆ ಅನುಮತಿ ನೀಡಲಾಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಕಾಲೇಜುಗಳಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತವೆ ಎಂದು ಚೇತನ ಶಿಕ್ಷಣ ಸಂಸ್ಥೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

WANTED
SMART CANDIDATES
102 YEARS
SALESPERSON
SALARY (BASIC + INCENTIVES + ESI/PF)
- For READYMADE MENS/KIDS
- For SUITING & SHIRTINGS
- For SILK SAREES
- Candidates should have good communication skill
* ಹೆಚ್ಚು ಅನುಭವವುಳ್ಳವರಿಗೆ, ಹೆಚ್ಚು ಆದ್ಯತೆ, ಹೆಚ್ಚು ಸಂಬಳ
ಈ ಅವಕಾಶವನ್ನು ಕಳೆದುಕೊಳ್ಳಬೇಡಿ
ಈಗಲೇ ಕರೆಮಾಡಿ
9008573055
8884440850
ಅಂಬರ್‌ಕರ್ ಪಂಪಣ್ಣ
ಕಾಳಿಕಾದೇವಿ ರಸ್ತೆ, ದಾವಣಗೆರೆ - 577001 ಜವಳಿ/ಬಟ್ಟೆ ವ್ಯಾಪಾರಿಗಳು

# ನಗರದಲ್ಲಿ ವೈದಿಕ ಪಾಠಶಾಲೆ ಆರಂಭ

ದಾವಣಗೆರೆ,ಡಿ.5- ಇಲ್ಲಿನ ವಿನೋಬನಗರದ ಶ್ರೀ ಜಗದ್ಗುರು ಪಂಡಿತಾರಾಧ್ಯ ವೇದಾಗಮ ಸಂಸ್ಕೃತ ಪೀಠ ಶಾಲೆಯಿಂದ ಶೀಘ್ರದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವೈದಿಕ ಪಾಠಶಾಲೆ ಪುನರಾರಂಭಗೊಳ್ಳಲಿದೆ. ಆಸಕ್ತ ಜಂಗಮ ವಟುಗಳು ಶ್ರೀಶೈಲ ಮಠದ ಕಚೇರಿಯಲ್ಲಿ ಹೆಸರು ನೋಂದಾಯಿಸುವಂತೆ ಬನ್ನಯ್ಯ ಸ್ವಾಮಿ ತಿಳಿಸಿದ್ದಾರೆ.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್)
Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

DO YOU WANT TO GOOD SCORE IN MATHEMATICS? SO WHY WAIT?
DAKSHA ACADEMY
Announces
Mathematics Class for Engineering (M1, M2, M3, M4) and Diploma Students
Address : Anjaneya Badavane, Beside Savidine Hotel.
Contact : 97312 18567

